ಭಾನುವಾರ, ಜೂನ್ 1, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಇಂಗ್ಲೆಂಡ್ ನೆಲದಲ್ಲಿ ಕರುಣ್ ದ್ವಿಶತಕ

ಭಾರತ 'ಎ' ತಂಡದಲ್ಲಿ ಆಡುತ್ತಿರುವ ಬೆಂಗಳೂರಿನ ಕರುಣ್ ನಾಯರ್ ಅವರು ಕ್ಯಾಂಟರ್‌ಬರಿಯಲ್ಲಿ ಇಂಗ್ಲೆಂಡ್ ಲಯನ್ಸ್ ಎದುರು ನಡೆಯುತ್ತಿರುವ 'ಟೆಸ್ಟ್' ಕ್ರಿಕೆಟ್ ಪಂದ್ಯದಲ್ಲಿ ಶನಿವಾರ ದ್ವಿಶತಕ ದಾಖಲಿಸಿದರು...

204 ರನ್
281 ಎಸೆತ
26 ಬೌಂಡರಿ
1 ಸಿಕ್ಸರ್

4 DISCIPLINES. 400+ COMBINATIONS. UNLIMITED POSSIBILITIES.

Engineering | Humanities | Management | Sciences

LAST DATE TO REGISTER
05TH JUNE 2025
NAAC A++ ACCREDITED

CREATE WHAT COMES NEXT

At GITAM, our students don't wait for the future. They build it, test it, and launch it.

TECHNOLOGY EXPLORATION & PRODUCT ENGINEERING (TEPE) CENTRE
A hands-on innovation lab where students move from concept to prototype through a guided process of ideation, design, and development.

VENTURE DEVELOPMENT CENTRE (VDC)
If you have a startup idea, here you'll receive the guidance, mentorship, and resources to take it forward.

MULTIDISCIPLINARY UNIT OF RESEARCH ON TRANSLATIONAL INITIATIVES (MURTI) LABS
A collaborative think tank driving interdisciplinary research that addresses regional, national, and global challenges.

APPLIED EDUCATION: APPLICABLE FOR LIFE

With a curriculum curated with the future in mind, our industry collaborations give students direct access to valuable practical experience.

RECENT HIGHLIGHTS

Virya Autonomous Technologies (Maini Group), Infosys and GITAM have set up a Software-Defined Vehicles Lab where students develop market-ready autonomous vehicles.

Sirena Technologies has established a Research and Development centre for Artificial Intelligence and Robotics at the heart of the Bengaluru campus.

A VIBRANT CAMPUS LIFE

At GITAM, your experience extends to every corner of the campus and beyond.

Strong Alumni Network

Comfortable Student Accommodation

Multi-Sport Facilities

21+ Student Clubs

ACADEMIC COLLABORATIONS

GW | WISCONSIN UNIVERSITY OF WISCONSIN-MADISON | UNCW | Coventry University | ELON UNIVERSITY | PennState | BINGHAMTON UNIVERSITY STATE UNIVERSITY OF NEW YORK

Admissions Open | Bengaluru | www.gitam.edu | Call: 8884984000

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಒಪಾಲ್ ವಿಶ್ವ ಸುಂದರಿ

ಹೈದರಾಬಾದ್‌ನಲ್ಲಿ ಶನಿವಾರ ನಡೆದ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಥಾಯ್ಲೆಂಡ್‌ನ ಒಪಾಲ್ ಸುಚಾತಾ ಚೌಂಗ್‌ಶ್ರೀ ಅವರಿಗೆ ಕಿರೀಟ ಒಲಿಯಿತು

ದ್ವೇಷ ಭಾಷಣ ಕಡಿವಾಣಕ್ಕೆ ಕಾನೂನು: ದಿನೇಶ್ ಗುಂಡೂರಾವ್ 5
ಕಚ್ಚಾ ಖಾದ್ಯ ತೈಲ: ಶೇ 10ರಷ್ಟು ಸುಂಕ ಕಡಿತ
ದೇಶದ ಒಗ್ಗಟ್ಟಿಗೆ ಸಂವಿಧಾನ ಕಾರಣ: ಸಿಜೆಐ 9
ಅಡುಗೆ ಎಣ್ಣೆ ಧಾರಣೆ ಇಳಿಕೆ? 8

ಕಾರ್ಯತಂತ್ರ ಬದಲಾಯಿಸಿ ದೂರದ ಗುರಿಗಳ ಮೇಲೆ ದಾಳಿ: ಸಿಡಿಎಸ್ ಚೌಹಾಣ್

‘ಯುದ್ಧವಿಮಾನ ನಷ್ಟ ನಿಜ’

ಪ್ರಜಾವಾಣಿ ವಾರ್ತೆ/ಪಿಟಿಐ

ಸಿಂಗಪುರ/ನವದೆಹಲಿ: ಪಾಕಿಸ್ತಾನದ ಜೊತೆ ಈಚೆಗೆ ನಡೆದ ಮಿಲಿಟರಿ ಸಂಘರ್ಷದ ಸಂದರ್ಭದಲ್ಲಿ ಭಾರತವು ಕೆಲವು ಯುದ್ಧವಿಮಾನಗಳನ್ನು ಕಳೆದುಕೊಂಡಿದೆ ಎಂಬುದನ್ನು ದೇಶದ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಅನಿಲ್ ಚೌಹಾಣ್ ಶನಿವಾರ ಒಪ್ಪಿಕೊಂಡಿದ್ದಾರೆ.

ಆದರೆ, ಭಾರತದ ಆರು ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ ಎಂದು ಪಾಕಿಸ್ತಾನ ಹೇಳಿರುವುದು ‘ಸಂಪೂರ್ಣ ತಪ್ಪು’ ಎಂದು ಅವರು ‘ಬ್ಲೂಮ್‌ಬರ್ಗ್ ಟಿವಿ’ಗೆ ನೀಡಿರುವ ಸಂದರ್ಶನದಲ್ಲಿ ಸ್ಪಷ್ಟಪಡಿಸಿದ್ದಾರೆ. ಲೋಪಗಳನ್ನು ಸರಿಪಡಿಸಿಕೊಂಡ ಭಾರತೀಯ ಮಿಲಿಟರಿಯು ತಿರುಗೇಟು ನೀಡಿತು ಎಂದೂ ತಿಳಿಸಿದ್ದಾರೆ.

ಎಷ್ಟು ವಿಮಾನಗಳನ್ನು ಕಳೆದುಕೊಳ್ಳಲಾಯಿತು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಲು ಚೌಹಾಣ್ ನಿರಾಕರಿಸಿದ್ದಾರೆ. ಆದರೆ, ಪಾಕಿಸ್ತಾನದ ಗಡಿಯ ಒಳಗೆ ಹೆಚ್ಚು ನಿಖರವಾದ ದಾಳಿಯನ್ನು ಭಾರತ ನಡೆಸಿದೆ ಎಂಬುದನ್ನು ಅವರು ತಿಳಿಸಿದ್ದಾರೆ.

> ಯುದ್ಧ ವಿಮಾನ ಕಳೆದುಕೊಂಡಿದ್ದಕ್ಕಿಂತ ಅವುಗಳನ್ನು ಏಕೆ ಕಳೆದುಕೊಂಡೆವು ಎಂಬುದು ಮುಖ್ಯ. ಕಾರ್ಯತಂತ್ರದಲ್ಲಿ ಆದ ಲೋಪ ಸರಿಪಡಿಸಿಕೊಂಡು ತಿರುಗೇಟು ನೀಡಿದೆವು
> **ಅನಿಲ್ ಚೌಹಾಣ್,** ಸಿಡಿಎಸ್

ಪಾಕಿಸ್ತಾನದ ಜೊತೆಗಿನ ನಾಲ್ಕು ದಿನಗಳ ಸಂಘರ್ಷದಲ್ಲಿ ಭಾರತಕ್ಕೆ ಆದ ಹಾನಿಯ ಬಗ್ಗೆ ದೇಶದ ಮಿಲಿಟರಿಯ ಅತ್ಯಂತ ಹಿರಿಯ ಅಧಿಕಾರಿಯೊಬ್ಬರು ಸ್ಪಷ್ಟವಾಗಿ ಹೇಳಿರುವುದು ಇದೇ ಮೊದಲು. ಚೌಹಾಣ್ ಅವರು ಸಿಂಗಪುರ ಭೇಟಿಯಲ್ಲಿದ್ದಾರೆ.

ಪಾಕಿಸ್ತಾನದ ಜೊತೆಗಿನ ಸಂಘರ್ಷದಲ್ಲಿ ಭಾರತ ಯುದ್ಧ ವಿಮಾನಗಳನ್ನು ಕಳೆದುಕೊಂಡಿತೇ ಎಂಬ ಪ್ರಶ್ನೆಯನ್ನು ಚೌಹಾಣ್ ಅವರ ಮುಂದಿರಿಸಲಾಗಿತ್ತು.

‘ಒಳ್ಳೆಯ ಸಂಗತಿ ಎಂದರೆ, ಕಾರ್ಯತಂತ್ರದಲ್ಲಿ ಆದ ಲೋಪವನ್ನು ನಾವು ಅರ್ಥ ಮಾಡಿಕೊಂಡೆವು. ಅದನ್ನು ಸರಿಪಡಿಸಿಕೊಂಡೆವು. ಎರಡು ದಿನಗಳ ನಂತರ ಪರಿಷ್ಕೃತ ಕಾರ್ಯತಂತ್ರವನ್ನು ಅನುಷ್ಠಾನಕ್ಕೆ ತಂದೆವು. ನಮ್ಮ ಯುದ್ಧ ವಿಮಾನಗಳನ್ನು ಹಾರಿಸಿ, ಗುರಿಗಳ ಮೇಲೆ ದೂರದಿಂದಲೇ ದಾಳಿ ನಡೆಸಿದೆವು’ ಎಂದು ಚೌಹಾಣ್ ಮಾಹಿತಿ ನೀಡಿದ್ದಾರೆ.

ಸೂಚ್ಯವಾಗಿ ಹೇಳಿದ್ದ ಭಾರ್ತಿ

ಹಾನಿಯು ಸಮರದ ಭಾಗ ಎಂದು ಭಾರತೀಯ ವಾಯುಪಡೆಯ ವೈಮಾನಿಕ ಕಾರ್ಯಾಚರಣೆಗಳ ಮಹಾನಿರ್ದೇಶಕ, ಏರ್ ಮಾರ್ಷಲ್ ಎ.ಕೆ. ಭಾರ್ತಿ ಅವರು ಹೇಳಿದ್ದರು. ಆದರೆ ಭಾರತೀಯ ವಾಯುಪಡೆಯ ಎಲ್ಲ ಪೈಲಟ್‌ಗಳು ಸುರಕ್ಷಿತವಾಗಿ ವಾಪಸ್ಸಾಗಿದ್ದಾರೆ ಎಂಬುದನ್ನು ಮೇ 11ರಂದು ನಡೆದ ಮಾಧ್ಯಮಗೋಷ್ಠಿಯಲ್ಲಿ ಸ್ಪಷ್ಟಪಡಿಸಿದ್ದರು.

8ನೇ ಪುಟ ನೋಡಿ

ಘೋಷಣೆ ಅಗಾಧ, ಹೂಡಿಕೆ ಅಲ್ಪ

● ಜಯಸಿಂಹ ಆರ್.

ಒಳನೋಟ

ಬೆಂಗಳೂರು: ‘ಕರ್ನಾಟಕದಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆದಾಗಲೆಲ್ಲಾ ಹತ್ತಾರು ಲಕ್ಷ ಕೋಟಿ ರೂಪಾಯಿ ಬಂಡವಾಳದ ಘೋಷಣೆ ಆಗುತ್ತದೆ. ಆದರೆ ವಾಸ್ತವದಲ್ಲಿ ಅಷ್ಟು ಹೂಡಿಕೆ ಆಗುವುದೇ ಇಲ್ಲ. ಹೂಡಿಕೆ ದಾರರ ಸಮಾವೇಶದ ಘೋಷಣೆಗಳಿಗೂ, ವಾಸ್ತವದ ಹೂಡಿಕೆಯ ಮೊತ್ತಕ್ಕೂ ತಾಳೆಯಾಗುವುದೇ ಇಲ್ಲ. ಬಂಡವಾಳ ಆಕರ್ಷಣೆಯಲ್ಲಿ ಕರ್ನಾಟಕವು ಮುನ್ನಲೆಯಲ್ಲಿ ಇದೆಯಾದರೂ, ಲಭ್ಯ ವಿರುವ ಅವಕಾಶಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿಲ್ಲ ಎಂಬುದು ಸತ್ಯ’ ಎನ್ನುತ್ತಾರೆ ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ (ಫಿಕ್ಕಿ) ಅಧ್ಯಕ್ಷ ಎಂ.ಜಿ.ಬಾಲಕೃಷ್ಣ.

ಸರ್ಕಾರದ ದತ್ತಾಂಶ ಮತ್ತು ವರದಿಗಳೂ ಸಹ ಎಂ.ಜಿ.ಬಾಲಕೃಷ್ಣ ಅವರ ಈ ಅಭಿಮತವನ್ನು ಪುಷ್ಟೀಕರಿಸುತ್ತವೆ. ‘ಬಂಡವಾಳ ಆಕರ್ಷಣೆಯು ಯಾವುದೇ ಆರ್ಥಿಕತೆ ಉತ್ತಮ ಸ್ಥಿತಿಯಲ್ಲಿ ಇದೆ ಅಥವಾ ಪ್ರಗತಿಯ ಹಾದಿಯಲ್ಲಿ ಇದೆ ಎಂಬುದರ ಸೂಚಕ. ಎಲ್ಲ ರಾಜ್ಯಗಳು, ದೇಶಗಳು ಬಂಡವಾಳ ಆಕರ್ಷಣೆಗೆ ಸದಾ ಒತ್ತು ನೀಡುತ್ತವೆ. ಕರ್ನಾಟಕವೂ ಇದಕ್ಕೆ ಹೊರತಲ್ಲ’ ಎಂಬುದು ‘ಪ್ರಜಾವಾಣಿ’ ಜತೆಗೆ ಮಾತನಾಡಿದ ಬಹುತೇಕ ಉದ್ಯಮಿಗಳ ಅಭಿಪ್ರಾಯ.

ಬಂಡವಾಳ ಆಕರ್ಷಿಸಲೆಂದೇ ರಾಜ್ಯ ಸರ್ಕಾರವು ‘ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ’ವನ್ನು ನಡೆಸಿಕೊಂಡು ಬರುತ್ತಿದೆ. 25 ವರ್ಷಗಳಲ್ಲಿ ರಾಜ್ಯವು ಒಟ್ಟು ಆರು ಹೂಡಿಕೆದಾರರ ಸಮಾವೇಶ ನಡೆಸಿದೆ. ಇದೇ ಫೆಬ್ರುವರಿಯಲ್ಲಿ ನಡೆದ ಆರನೇ ಸಮಾವೇಶವೂ ಸೇರಿ, ಒಟ್ಟು ₹34 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಹೂಡಿಕೆ ಘೋಷಣೆಗಳಾಗಿವೆ.

ಆದರೆ ವಾಸ್ತವದಲ್ಲಿ ಹೂಡಿಕೆಯಾಗಿರುವುದು ₹2 ಲಕ್ಷ ಕೋಟಿಗೂ ಕಡಿಮೆ. ಇದರಲ್ಲಿ ₹5 ಲಕ್ಷ ಕೋಟಿಯಷ್ಟು ಹೂಡಿಕೆಗಳು ಅನುಮೋದನೆ ಹಂತದಲ್ಲಿವೆ. ಈ ವರ್ಷ ಘೋಷಣೆಯಾಗಿದ್ದರಲ್ಲಿ ₹7.26 ಕೋಟಿ ಇನ್ನಷ್ಟೇ ಹೂಡಿಕೆ ಆಗಬೇಕಿದೆ.

ಎಸ್‌.ಎಂ ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ 2000ನೇ ಇಸವಿಯಲ್ಲಿ ಮೊದಲ ಹೂಡಿಕೆದಾರರ ಸಮಾವೇಶ ಆಯೋಜಿಸಲಾಗಿತ್ತು. ಸುದ್ದಿ ಪತ್ರಿಕೆಗಳಲ್ಲಿ ಹೆಚ್ಚು ಸದ್ದು ಮಾಡಿದ್ದ ಆ ಸಮಾವೇಶದಲ್ಲಿ ಒಟ್ಟು ₹27,057 ಕೋಟಿ ಹೂಡಿಕೆ ಘೋಷಣೆಯಾಗಿತ್ತು. ಹಲವು ವರ್ಷಗಳ ಅವಧಿಯಲ್ಲಿ ಆ ಘೋಷಣೆಗಳಲ್ಲಿ ಹೂಡಿಕೆಯಾಗಿದ್ದು ₹11,905 ಕೋಟಿ. ಆನಂತರ ನಡೆದ ಬಹುತೇಕ ಸಮಾವೇಶಗಳಲ್ಲಿ ಬೃಹತ್ ಮೊತ್ತದ ಹೂಡಿಕೆ ಘೋಷಣೆಯಾದರೆ, ವಾಸ್ತವದಲ್ಲಿ ಹೂಡಿಕೆ ಪ್ರಮಾಣ ಕಡಿಮೆ ಎನ್ನುತ್ತಿದೆ ಅಂಕಿ ಅಂಶಗಳು.

2000, 2010, 2012, 2016 ಮತ್ತು 2022ರ ಸಮಾವೇಶಗಳಲ್ಲಿ ಒಟ್ಟು ₹23.84 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ಘೋಷಣೆಯಾಗಿತ್ತು. ಆದರೆ ಅದರಲ್ಲಿ ಈವರೆಗೆ ಹೂಡಿಕೆಯಾಗಿದ್ದು ₹1.89 ಲಕ್ಷ ಕೋಟಿ ಮಾತ್ರ ಎಂಬ ವಿವರನ್ನು ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ್ದರು. ಒಟ್ಟು ಘೋಷಣೆಯಲ್ಲಿ, ಹೂಡಿಕೆಯಾದ ಪ್ರಮಾಣ ಶೇ 8ರಷ್ಟು ಮಾತ್ರ. ಶೇ 92ರಷ್ಟು ಘೋಷಣೆಗಳು, ಘೋಷಣೆಗಳಾಗೇ ಉಳಿದಿವೆ ಎಂಬುದನ್ನು ಸರ್ಕಾರದ ದಾಖಲೆ–ದತ್ತಾಂಶಗಳು ಹೇಳುತ್ತವೆ. ವಿಧಾನಸಭೆಯಲ್ಲಿ ಈ ಬಗ್ಗೆ ಕೇಳಿದ್ದ ಪ್ರಶ್ನೆಗೆ ಉತ್ತರಿಸಿದ್ದ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು, ಘೋಷಣೆ ಮತ್ತು ಹೂಡಿಕೆಗಳ ದತ್ತಾಂಶವನ್ನು ಸದನದ ಮುಂದೆ ಇರಿಸಿದ್ದರು.

6ನೇ ಪುಟ ನೋಡಿ

ಘೋಷಣೆ–ಹೂಡಿಕೆ ಅಜಗಜಾಂತರ

ಸಮಾವೇಶ ನಡೆದ ವರ್ಷ	ಘೋಷಣೆಯಾದ ಹೂಡಿಕೆ	ವಾಸ್ತವ ಹೂಡಿಕೆ (ಕೋಟಿಗಳಲ್ಲಿ)
2000	₹27,057 ಕೋಟಿ	₹11,905
2010	₹3.94 ಲಕ್ಷ ಕೋಟಿ	₹55,267
2012	₹6.79 ಲಕ್ಷ ಕೋಟಿ	₹54,172
2016	₹3.05 ಲಕ್ಷ ಕೋಟಿ	₹45,750
2022	₹9.81 ಲಕ್ಷ ಕೋಟಿ	₹22,000 *

* ಇದರಲ್ಲಿ ಇನ್ನೂ ₹5.2 ಲಕ್ಷ ಕೋಟಿ ಮೊತ್ತದ ಹೂಡಿಕೆಗೆ ಸಂಬಂಧಿಸಿದ ಪ್ರಸ್ತಾವಗಳು ಸರ್ಕಾರದ ವಿವಿಧ ಇಲಾಖೆಗಳ ಅನುಮತಿ ಪಡೆಯುವ ಹಂತದಲ್ಲಿವೆ

₹23.84 ಲಕ್ಷ ಕೋಟಿ
2000–2022ರ ನಡುವಣ ಐದು ಬಂಡವಾಳ ಹೂಡಿಕೆ ಸಮಾವೇಶಗಳಲ್ಲಿ ಆದ ಘೋಷಣೆ



₹1.88 ಲಕ್ಷ ಕೋಟಿ
ವಾಸ್ತವದಲ್ಲಿ ಹೂಡಿಕೆ ಆದ ಬಂಡವಾಳದ ಮೊತ್ತ

ಈ ಬಾರಿ ₹10 ಲಕ್ಷ ಕೋಟಿ ಘೋಷಣೆ

2025ರ ಫೆಬ್ರುವರಿಯಲ್ಲಿ ನಡೆದ 6ನೇ ಜಾಗತಿಕ ಹೂಡಿಕೆದಾರರ ಸಮಾವೇಶ ದಲ್ಲಿ ಒಟ್ಟು ₹10.27 ಲಕ್ಷ ಕೋಟಿಯಷ್ಟು ಹೂಡಿಕೆ ಘೋಷಣೆಗಳಾಗಿವೆ. ಇದರಲ್ಲಿ ಸುಮಾರು ₹7.26 ಲಕ್ಷ ಕೋಟಿಯಷ್ಟು ಘೋಷಣೆಗಳನ್ನು ವಾಸ್ತವೀಕರಿಸಬೇಕು ಎಂಬುದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ಗುರಿ.

ಎಸ್‌ಇ ಬಳಿ 31 ನಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಲೋಕೋಪಯೋಗಿ ಇಲಾಖೆಯ ಸೂಪರಿಂಟೆಂಡೆಂಟ್ ಎಂಜಿನಿಯರ್ (ಎಸ್‌ಇ) ಅಮಿನ್ ಮುಕ್ತರ್ ಅಹಮದ್ ಹೆಸರಿನಲ್ಲಿ 31 ನಿವೇಶನ, ಲೋಕೋಪಯೋಗಿ ಉತ್ತರ ವಲಯದ ಸಂಪರ್ಕ ಮತ್ತು ಕಟ್ಟಡ ವಿಭಾಗದ ಮುಖ್ಯ ಎಂಜಿನಿಯರ್ ಎಚ್‌.ಸುರೇಶ್ ಮತ್ತು ಕುಟುಂಬದವರ ಹೆಸರಿನಲ್ಲಿ 6 ವಾಣಿಜ್ಯ ಸಂಕೀರ್ಣಗಳು...

ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿದ ಪ್ರಕರಣದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಮನೆ ಮತ್ತು ಕಚೇರಿ ಮೇಲೆ ದಾಳಿ ನಡೆಸಿ ಲೋಕಾಯುಕ್ತ ಪೊಲೀಸರು ಪತ್ತೆ ಮಾಡಿರುವ ಆಸ್ತಿಗಳಲ್ಲಿ ಕೆಲ ವಿವರಗಳಿವು.

ಈ ಇಬ್ಬರೂ ಸೇರಿ ಒಟ್ಟು ಏಳು ಅಧಿಕಾರಿಗಳಿಗೆ ಸೇರಿದ ಒಟ್ಟು 33 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ಶನಿವಾರ ಬೆಳಿಗ್ಗೆಯೇ ದಾಳಿ ನಡೆಸಿ, ಶೋಧ ಕಾರ್ಯ ಆರಂಭಿಸಿದ್ದರು. ಲೋಕಾಯುಕ್ತ ಪೊಲೀಸರು, ಏಳೂ ಅಧಿಕಾರಿಗಳಿಗೆ ಸಂಬಂಧಿಸಿದ ಸ್ಥಳಗಳಿಂದ ₹17.92 ಕೋಟಿ ಮೌಲ್ಯದ ಸ್ಥಿರಾಸ್ತಿ, ₹2.24ಕೋಟಿ ಮೌಲ್ಯದ ಚಿನ್ನಾಭರಣಗಳು ಸೇರಿ ಒಟ್ಟು ₹24.47 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಿದ್ದಾರೆ.

ಅಮಿನ್ ಮುಕ್ತರ್ ಅಹಮದ್ ಅವರಿಗೆ ಸೇರಿದ 5 ಸ್ಥಳಗಳಲ್ಲಿ ಶೋಧ ನಡೆಸಲಾಯಿತು.

ಎಚ್‌.ಸುರೇಶ್ ಅವರಿಗೆ ಶನಿವಾರ ನಿವೃತ್ತಿಯ ದಿನವಾಗಿತ್ತು. ಇದಕ್ಕಾಗಿ ಅವರ ಸಹೋದ್ಯೋಗಿಗಳು ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿದ್ದರು. ಆದರೆ ಅವರ ಮನೆಗೆ ಬೆಳಿಗ್ಗೆಯೇ ಬಂದ ಲೋಕಾಯುಕ್ತ ಪೊಲೀಸರು, ಶೋಧ ಕಾರ್ಯ ಆರಂಭಿಸಿದರು. 6 ವಾಣಿಜ್ಯ ಸಂಕೀರ್ಣಗಳು, 2 ಮನೆ, 2 ನಿವೇಶನ, ₹1.65 ಕೋಟಿ ಮೊತ್ತದ ಬ್ಯಾಂಕ್ ಠೇವಣಿಗಳು ಪತ್ತೆಯಾದವು.

ವಿವರ 4

ಅನರ್ಹ ಕಾರ್ಡ್‌ಗಳನ್ನು ತಡೆ ಹಿಡಿಯಿರಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಜಿಲ್ಲೆಯಲ್ಲಿ ಶೇ 80ರಿಂದ 90ರಷ್ಟು ಬಿಪಿಎಲ್ ಪಡಿತರ ಚೀಟಿ ಇರುವುದನ್ನು ಒಪ್ಪಲು ಸಾಧ್ಯವಿಲ್ಲ. ನಕಲಿ ಮತ್ತು ಅನರ್ಹ ಕಾರ್ಡ್‌ಗಳನ್ನು ತಡೆ ಹಿಡಿಯಲೇಬೇಕು’ ಎಂದು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಡಿಸಿಗಳು ಮತ್ತು ಸಿಇಒಗಳ ಜೊತೆ ಶನಿವಾರವೂ ಸಭೆ ನಡೆಸಿದ ಮುಖ್ಯಮಂತ್ರಿ, ‘ಅನರ್ಹ ಪಡಿತರ ಚೀಟಿದಾರರ ಸಂಖ್ಯೆ ವಿಪರೀತ ಹೆಚ್ಚುತ್ತಿರುವುದಕ್ಕೆ ಕಾರಣ ಏನು? ಯಾವ ಜಿಲ್ಲೆಯಲ್ಲೂ ಶೇ 60ಕ್ಕಿಂತ ಹೆಚ್ಚು ಅರ್ಹರು ಇರಲು ಸಾಧ್ಯವಿಲ್ಲ’ ಎಂದು ಹೇಳಿದರು.

> ಡಿಸಿ, ಸಿಇಒ, ಎಸ್‌ಪಿ ಪ್ರತಿಷ್ಠೆ ಬಿಟ್ಟು ಸರ್ಕಾರ ಮತ್ತು ಜನರ ನಡುವೆ ಸೇತುವೆಯಂತೆ ಕೆಲಸ ಮಾಡಬೇಕು. ಸಮನ್ವಯ ಇದ್ದರೆ ಮಾತ್ರ ಅಭಿವೃದ್ಧಿ ಸಾಧ್ಯ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

5ನೇ ಪುಟ ನೋಡಿ

ಅಸ್ಸಾಂ, ಅರುಣಾಚಲದಲ್ಲಿ ಮಳೆ: 14 ಸಾವು

ಗುವಾಹಟಿ/ ಇಟಾನಗರ (ಪಿಟಿಐ): ಮಳೆ ಸಂಬಂಧಿತ ಅವಘಡಗಳಿಂದಾಗಿ ಅರುಣಾಚಲ ಪ್ರದೇಶ ಮತ್ತು ಅಸ್ಸಾಂನಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದ್ದು, 14 ಮಂದಿ ಮೃತಪಟ್ಟಿದ್ದಾರೆ. ಧಾರಾಕಾರ ಮಳೆಯಿಂದಾಗಿ ಸಂಭವಿಸಿದ ಭೂಕುಸಿತದಲ್ಲಿ ಸಿಲುಕಿ ಅಸ್ಸಾಂನಲ್ಲಿ ಐವರು, ಅರುಣಾಚಲ ಪ್ರದೇಶದಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. 4

ಹುಲಿ ಸಂರಕ್ಷಕ ವಾಲ್ಮೀಕ್ ಇನ್ನಿಲ್ಲ

ನವದೆಹಲಿ (ಪಿಟಿಐ): ದೇಶದ ವನ್ಯಜೀವಿ ಸಂರಕ್ಷಕರ ಪೈಕಿ ಪ್ರಮುಖರಾದ ವಾಲ್ಮೀಕ್ ಥಾಪರ್ ಅವರು (73) ತಮ್ಮ ನಿವಾಸದಲ್ಲಿ ಶನಿವಾರ ಬೆಳಿಗ್ಗೆ ನಿಧನರಾದರು. ಅವರು ಲೇಖಕರಾಗಿಯೂ ಚಿರಪರಿಚಿತರು. 1952ರಲ್ಲಿ ದೆಹಲಿಯಲ್ಲಿ ಜನಿಸಿದ ಥಾಪರ್ ಅವರು ತಮ್ಮ ಜೀವನವನ್ನು ಹುಲಿಗಳ ಸಂರಕ್ಷಣೆಗೆ, ಅವುಗಳ ಕುರಿತ ಅಧ್ಯಯನಕ್ಕೆ ಮುಡಿಪಾಗಿಟ್ಟಿದ್ದರು. 9

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹೆದ್ದಾರಿ: ವಾಹನ ಅಡ್ಡಗಟ್ಟಿ ದರೋಡೆ

ಕಲ್ಲು, ಕಬ್ಬಿಣದ ರಾಡುಗಳನ್ನು ರಸ್ತೆಗೆ ಅಡ್ಡ ಇಟ್ಟು ಕೃತ್ಯ • ಪೊಲೀಸ್ ಮಹಾನಿರ್ದೇಶಕರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೂಲಕ ಹಾದು ಹೋಗುವ ರಾಷ್ಟ್ರೀಯ–ರಾಜ್ಯ ಹೆದ್ದಾರಿಗಳಲ್ಲಿ ದರೋಡೆ ತಂಡವು ಸಕ್ರಿಯವಾಗಿದ್ದು, ವಾಹನಗಳನ್ನು ಅಪಘಾತಕ್ಕೀಡು ಮಾಡಿ ದರೋಡೆ ನಡೆಸಲಾಗುತ್ತಿದೆ. ಪ್ರಯಾಣಿಕರಿಂದ ಹಣ ಹಾಗೂ ಚಿನ್ನಾಭರಣ ದೋಚಲಾಗುತ್ತಿದೆ.

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇನಲ್ಲಿ ದರೋಡೆ ತಂಡವು ಸಕ್ರಿಯವಾಗಿದೆ ಎಂದು ಆರೋಪಿಸಿ ವಕೀಲ ಹುಸೇನ್ ಒವೈಸ್ ಎಂಬುವವರು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರಿಗೆ ದೂರು ನೀಡಿದ್ದಾರೆ.

ವೇಗವಾಗಿ ಬರುವ ಕಾರುಗಳನ್ನು ಗುರಿಯಾಗಿಸಿ ಹೆದ್ದಾರಿ ಮಧ್ಯದಲ್ಲಿ ಕಲ್ಲುಗಳನ್ನು ಜೋಡಿಸಿಟ್ಟು ಅಪಘಾತ ಮಾಡಿ ದರೋಡೆ ನಡೆಸುತ್ತಿದ್ದಾರೆ. ಹೊಸಕೋಟೆಯಿಂದ ಕೆಜಿಎಫ್ ಮಾರ್ಗದಲ್ಲಿ ಈ ಕೃತ್ಯ ಎಸಗಲಾಗುತ್ತಿದೆ. ಆರೋಪಿಗಳ ಚಲನವಲನವು ಕಾರಿನ ಡ್ಯಾಶ್ ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ದೃಶ್ಯಾವಳಿ ಸಹಿತ ಸಲೀಂ ಅವರಿಗೆ ಹುಸೇನ್ ದೂರು ನೀಡಿದ್ದಾರೆ.

ಎಕ್ಸ್‌ಪ್ರೆಸ್ ವೇನಲ್ಲಿ ಕೆಜಿಎಫ್ ಸ್ಟ್ರೆಚ್ ಬಳಿ ಕಲ್ಲು, ಕಬ್ಬಿಣದ ರಾಡುಗಳನ್ನು ಇಟ್ಟು ಅಪಘಾತ ಮಾಡುತ್ತಿರುವ ದುಷ್ಕರ್ಮಿಗಳು, ಬಳಿಕ ದರೋಡೆ ಮಾಡುತ್ತಿದ್ದಾರೆ. ಇತ್ತ ಗಮನ ಹರಿಸುವಂತೆ ಕೋರಿ ರಾಜ್ಯ ಪೊಲೀಸ್ ಮಹಾನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಖ್ಯ ಎಂಜಿನಿಯರ್ ಹಾಗೂ ರಾಜ್ಯ ಲೋಕೋಪಯೋಗಿ ಇಲಾಖೆ ಸಚಿವರಿಗೆ ಹುಸೇನ್ ಪತ್ರ ಬರೆದಿದ್ದಾರೆ.

ಕಳೆದ 24 ಗಂಟೆಯಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ ಸಂಭವಿಸಿದ ಮೂರು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಮೂವರು ಪ್ರಯಾಣಿಕರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಇನ್ನೂ ಕೆಲವು ಪ್ರಯಾಣಿಕರು ಗಾಯಗೊಂಡಿದ್ದಾರೆ. ಮೇ 26ರಂದು ನ್ಯಾಯಾಲಯದ ಕಲಾಪದಲ್ಲಿ ಭಾಗಿಯಾಗಲು ಕೆಜಿಎಫ್ ಕಡೆ ತೆರಳುತ್ತಿದ್ದ ತಾವು ದುಷ್ಕರ್ಮಿಗಳ ಕೃತ್ಯದಿಂದ ಕೂದಲೆಳೆಯ ಅಂತರದಲ್ಲಿ ಪಾರಾಗಿದ್ದೇನೆ ಎಂದು ಹುಸೇನ್ ಒವೈಸ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕ್ರಮಕ್ಕೆ ಆಗ್ರಹ: ಹೆದ್ದಾರಿಗಳಲ್ಲಿ ನಡೆಯುತ್ತಿರುವ ಕೃತ್ಯಗಳನ್ನು ತಡೆಯಬೇಕು. ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಬೇಕು. ಎಕ್ಸ್‌ಪ್ರೆಸ್ ವೇನಲ್ಲಿ ಸುರಕ್ಷತೆಗೆ ಸಂಬಂಧಿಸಿದ ಯಾವುದೇ ವ್ಯವಸ್ಥೆಯೂ ಇಲ್ಲ. ಗಸ್ತು ವ್ಯವಸ್ಥೆ ಹೆಚ್ಚಿಸಬೇಕು. ಅಪಘಾತವಾದ ಸಂದರ್ಭದಲ್ಲಿ ವೈದ್ಯಕೀಯ ನೆರವು ನೀಡುವ ವ್ಯವಸ್ಥೆ ಮಾಡಬೇಕು ಎಂದು ಪತ್ರದಲ್ಲಿ ಕೋರಿದ್ದಾರೆ.



ಎಕ್ಸ್‌ಪ್ರೆಸ್ ವೇನಲ್ಲಿ ಕಲ್ಲು ಅಡ್ಡ ಇಟ್ಟಿದ್ದರಿಂದ ಅಪಘಾತಕ್ಕೀಡಾದ ಕಾರು

ಅಪಘಾತ: ಆಂಧ್ರದ ವ್ಯಕ್ತಿ ಸಾವು

ನೆಲಮಂಗಲ: ತುಮಕೂರು ಕಡೆಯಿಂದ ಬೆಂಗಳೂರಿನ ಕಡೆಗೆ ಬರುತ್ತಿದ್ದ ಕಲ್ಯಾಣ ಕರ್ನಾಟಕ ಸಾರಿಗೆ ಬಸ್ ಹಾಗೂ ಕಾರು ಮಧ್ಯೆ ರಾಷ್ಟ್ರೀಯ ಹೆದ್ದಾರಿ–48ರ ತೋಟನಹಳ್ಳಿಯಲ್ಲಿ ಶನಿವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಕಾರಿನಲ್ಲಿದ್ದ ಪ್ರಯಾಣಿಕರೊಬ್ಬರು ಮೃತಪಟ್ಟಿದ್ದಾರೆ.

ಆಂಧ್ರಪ್ರದೇಶದ ಓಬಲರೆಡ್ಡಿ(27) ಮೃತಪಟ್ಟವರು. ಬೆಂಗಳೂರಿನ ಅತ್ತಿಬೆಲೆಯಲ್ಲಿ ನೆಲಸಿದ್ದರು. ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿದ್ದರು.

ಕಾರಿನಲ್ಲಿ ಮೂವರು ಸ್ನೇಹಿತರು ಪ್ರಯಾಣಿಸುತ್ತಿದ್ದರು. ಕಾರು ಚಾಲಕ ಸುನೀಲ್ ತಲೆಗೆ ಬಲವಾದ ಪೆಟ್ಟು ಬಿದ್ದಿದ್ದು, ವಿಜೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದಿವ್ಯಾ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅಪಾಯದಿಂದ ಪಾರಾಗಿದ್ದಾರೆ.

ಕಾರಿನ ಎದುರಿಗೆ ಬಸ್ ಡಿಕ್ಕಿಯಾದ ಪರಿಣಾಮ ಚಾಲಕನ ಪಕ್ಕದಲ್ಲಿ ಕುಳಿತಿದ್ದ ಓಬಲರೆಡ್ಡಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆಯಲ್ಲಿ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಘಟನಾ ಸ್ಥಳಕ್ಕೆ ನೆಲಮಂಗಲ ಸಂಚಾರ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ಅಪಹರಣ ಪ್ರಕರಣ: ಕಾವ್ಯಾಗೆ ರೌಡಿ ನಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸದಾಗಿ ಸಲೂನ್ ಆ್ಯಂಡ್ ಸ್ಪಾ ಆರಂಭಿಸಿದ್ದ ವ್ಯಕ್ತಿಯನ್ನು ಕಾರಿನಲ್ಲಿ ಅಪಹರಿಸಿ, ಹಲ್ಲೆ ನಡೆಸಿದ್ದ ಆರೋಪದ ಅಡಿ ಮೂವರನ್ನು ಬಂಧಿಸಿರುವ ಅಮೃತಹಳ್ಳಿ ಠಾಣೆ ಪೊಲೀಸರು, ಪ್ರಕರಣದ ತನಿಖೆ ಚುರುಕುಗೊಳಿಸಿದ್ದಾರೆ.

ನಿಶಾ ಅಲಿಯಾಸ್ ಸ್ಮಿತಾ, ಅವರ ಸ್ನೇಹಿತೆ ಕಾವ್ಯಾ ಹಾಗೂ ಮೊಹಮ್ಮದ್ ಅವರನ್ನು ಬಂಧಿಸಿರುವ ಪೊಲೀಸರು ಆರೋಪಿಗಳ ಹಿನ್ನೆಲೆಯನ್ನು ಪತ್ತೆ ಮಾಡುತ್ತಿದ್ದಾರೆ. ಬಂಧಿತರ ಪೈಕಿ ಕಾವ್ಯಾಗೆ ರೌಡಿಯೊಬ್ಬರ ನಂಟು ಇರುವುದು ತನಿಖೆಯಿಂದ ಪತ್ತೆಯಾಗಿದೆ.

ಕಾವ್ಯಾ ಅವರಿಗೆ ರೌಡಿಶೀಟರ್ ಮುನಿಕೃಷ್ಣ ಅಲಿಯಾಸ್ 'ಅಮೃತಹಳ್ಳಿ ಕಪ್ಪೆ' ಎಂಬಾತನ ಪರಿಚಯವಿದೆ ಎಂಬುದು ಗೊತ್ತಾಗಿದೆ. ಆತನನ್ನು ಈ ಹಿಂದೆಯೇ ಗೂಂಡಾ ಕಾಯ್ದೆಯಡಿ ಬಂಧಿಸಿ ಕಲಬುರಗಿ ಜೈಲಿಗೆ ಕಳುಹಿಸಲಾಗಿತ್ತು. ಇದಕ್ಕೂ ಮೊದಲು ಮುನಿಕೃಷ್ಣನನ್ನು ಗಡೀಪಾರು ಮಾಡಲಾಗಿತ್ತು. ಆತನ ಹೆಸರು ಹೇಳಿಕೊಂಡು ಕಾವ್ಯಾ ತಮ್ಮ ಬಡಾವಣೆಯಲ್ಲಿ ಗಲಾಟೆ ಮಾಡುತ್ತಿದ್ದಳು. ಕಾವ್ಯಾ ತಮ್ಮ ಸ್ನೇಹಿತೆ ಸ್ಮಿತಾ ಜೊತೆ ಸ್ಪಾನಲ್ಲಿ ಕೆಲಸ ಮಾಡುತ್ತಿದ್ದಳು ಎಂದು ಪೊಲೀಸರು ಹೇಳಿದರು.

ಕೊಡಿಗೆಹಳ್ಳಿ ಸಮೀಪದಲ್ಲಿ ನಿಶಾ ಅವರು ಸ್ಪಾ ನಡೆಸುತ್ತಿದ್ದರು. ಅದೇ ಸ್ಪಾದಲ್ಲಿ ಸಂಜು ಅವರು ಕೆಲವು ವರ್ಷಗಳಿಂದ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಕೆಲಸ ಬಿಟ್ಟು ಸ್ವಂತ ಸ್ಪಾ ಆರಂಭಿಸಿದ್ದರು. ಇದರಿಂದ ಆಕ್ರೋಶಗೊಂಡಿದ್ದ ನಿಶಾ ತನ್ನ ಸಹಚರರಾದ ಕಾವ್ಯಾ, ಮೊಹಮ್ಮದ್ ಅವರ ಜೊತೆಗೆ ಸೇರಿಕೊಂಡು ಸಂಜು ಅವರನ್ನು ಅಪಹರಿಸಿ ಹಲ್ಲೆ ನಡೆಸಿದ್ದರು ಎಂಬ ಆರೋಪದ ಮೇರೆಗೆ ಬಂಧಿಸಲಾಗಿದೆ. ಮೂವರು ಆರೋಪಿಗಳನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ರೂಪಾಗೆ ಬಡ್ತಿ

ಬೆಂಗಳೂರು: ಐಪಿಎಸ್ ಅಧಿಕಾರಿ ರೂಪಾ ಡಿ. ಅವರಿಗೆ ಎಡಿಜಿಪಿ ಹುದ್ದೆಗೆ ಬಡ್ತಿ ನೀಡಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ. ರೂಪಾ ಅವರು ಸದ್ಯ ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕಿಯಾಗಿದ್ದು (ಎಂಡಿ), ಅದೇ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

ಬಸವ ಜಯಂತ್ಯುತ್ಸವ

ರಾಜರಾಜೇಶ್ವರಿನಗರ: 'ಬಸವಣ್ಣ ಅವರು ತತ್ವಜ್ಞಾನಿ, ಸಂತ ಮತ್ತು ಸಮಾಜ ಪರಿವರ್ತನೆಯ ಹರಿಕಾರ ಆಗಿದ್ದರು' ಎಂದು ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ಎಂ. ಕೃಷ್ಣ ಸಾಗರದಲ್ಲಿ ಜಿ.ಎಸ್.ಸಾವಿತ್ರಮ್ಮ ಮತ್ತು ಕೆ.ಬಸವಯ್ಯ ಕುಟುಂಬದವರು ಹಮ್ಮಿಕೊಂಡಿದ್ದ ಬಸವ ಜಯಂತ್ಯುತ್ಸವ, ಶಿವಕುಮಾರ ಸ್ವಾಮೀಜಿ 118ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಸವಣ್ಣನವರು ಹಾಕಿಕೊಟ್ಟ ಹಾದಿಯಲ್ಲಿ ಬಸವೇಶ್ವರರ, ಶರಣ ಸಂದೇಶಗಳನ್ನು ಜಗತ್ತಿಗೆ ತಿಳಿಸುವ ಮೂಲಕ ನಾವೆಲ್ಲರೂ ಅವರ ಹಾದಿಯಲ್ಲಿ ನಡೆಯಬೇಕಾಗಿದೆ' ಎಂದರು.

ಬೇಲಿ ಮಠದ ಶಿವರುದ್ರ ಸ್ವಾಮೀಜಿ ಮಾತನಾಡಿ, 'ಸಮಸಮಾನತೆ, ಸಮ ಸಮಾಜವನ್ನು ಗುರಿಯಾಗಿಟ್ಟುಕೊಂಡು ಮಾನವೀಯ ಮೌಲ್ಯದ ದಾರಿಯಲ್ಲಿ ಸಾಗಬೇಕಾಗಿದೆ. ಮೌಢ್ಯ, ಅಜ್ಞಾನ, ಕಂದಾಚಾರ, ಅಸೂಯೆ, ಕೀಳರಿಮೆ, ದೂರಮಾಡಿ ನಾವೆಲ್ಲರು ಮಾನವರು ಎಂದು ಬದುಕಬೇಕು' ಎಂದರು.

ಶಾಸಕ ಎಸ್.ಟಿ. ಸೋಮಶೇಖರ್ ಅವರಿಗೆ 'ಅಭಿವೃದ್ಧಿಯ ಹರಿಕಾರ ಪ್ರಶಸ್ತಿ' ಮತ್ತು ಗುರುಬಸವಯ್ಯ, ಸುರೇಶ್, ಮಹದೇವಸ್ವಾಮಿ, ದೇವೇಂದ್ರ, ಕೆ.ಎಸ್.ಉಮಾಶಂಕರ್, ಎಸ್.ಪರಮೇಶ್ ಅವರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ದೇಗುಲ ಮಠದ ಚನ್ನಬಸವ ಸ್ವಾಮೀಜಿ, ಗದ್ದುಗೆಮಠದ ಮಹಾಂತ ಸ್ವಾಮೀಜಿ, ಸೂಲಿಕೆರೆಯ ಸಮಾಜ ಸೇವಕ ಎಸ್.ಆರ್. ಮೋಹನ್‌ಕುಮಾರ್, ಕರುನಾಡ ವಿಜಯಸೇನೆ ರಾಜ್ಯಘಟಕದ ಅಧ್ಯಕ್ಷ ಎಚ್.ಎನ್.ದೀಪಕ್, ದೇವಗೆರೆ ಡಿ.ವಿ.ರುದ್ರಮೂರ್ತಿ, ಆರ್.ಲಕ್ಷ್ಮಯ್ಯ, ಪಾರ್ವತಿದೇವಿ ಲಕ್ಷ್ಮಯ್ಯ, ಕೋರಿ ಮಂಜುನಾಥ್ ಇದ್ದರು.

ಬಸವ ಜಯಂತ್ಯುತ್ಸವದಲ್ಲಿ ಸಿದ್ದಲಿಂಗ ಸ್ವಾಮೀಜಿ ಅವರಿಗೆ ಗುರುವಂದನೆ ಸಲ್ಲಿಸಲಾಯಿತು

ನಗರದ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಶನಿವಾರ ನಡೆದ ಜೋಯಾಲುಕ್ಕಾಸ್ ಫೌಂಡೇಶನ್ 'ಜಾಯ್ ಹೋಮ್ಸ್' ಯೋಜನೆ ಅಡಿಯಲ್ಲಿ ಮನೆ ಹಂಚಿಕೆ ಮಾಡುವ ಸಮಾರಂಭದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಅವರು ಮನೆಯ ಕೀಲಿ ಕೈ ಅನ್ನು ಫಲಾನುಭವಿಗಳಿಗೆ ಹಸ್ತಾಂತರಿಸಿದರು. ಜೋಯಾಲುಕ್ಕಾಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಥಾಮಸ್ ಮ್ಯಾಥ್ಯು, ಜೋಯಾಲುಕ್ಕಾಸ್‌ನ ಅಧ್ಯಕ್ಷ ಜೋಯ್ ಆಲುಕ್ಕಾಸ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಕೆಎಂಎಫ್: ನಂದಿನಿ ಪನೀರ್ ಖಾದ್ಯ ಸ್ಪರ್ಧೆ ಇಂದು

ಬೆಂಗಳೂರು: ವಿಶ್ವ ಹಾಲು ದಿನಾಚರಣೆಯ ಅಂಗವಾಗಿ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ ಕೇಂದ್ರ ಕಚೇರಿಯಲ್ಲಿ ಜೂನ್ 1ರಂದು ಬೆಳಿಗ್ಗೆ 11.30ಕ್ಕೆ ನಂದಿನಿ ಪನೀರ್ ಖಾದ್ಯ ಸ್ಪರ್ಧೆ ನಡೆಯಲಿದೆ.

ಮಧ್ಯಾಹ್ನ 2.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ 18 ವಿವಿಧ ಸ್ವಾದಗಳ ನಂದಿನ ಗುಡ್‌ಲೈಫ್ ಮಫಿನ್, ಸ್ವಿಸ್ ಕೇಕ್, ಬಾರ್ ಕೇಕ್ ಉತ್ಪನ್ನಗಳು ಬಿಡುಗಡೆ ಆಗಲಿವೆ. ಅದೇ ಸಂದರ್ಭದಲ್ಲಿ ನಂದಿನಿ ಪನೀರ್ ಖಾದ್ಯ ಸ್ಪರ್ಧೆಯ ವಿಜೇತರಿಗೆ ಬಹುಮಾನ ನೀಡಲಾಗುತ್ತದೆ.

ಕಾರ್ಯಕ್ರಮದಲ್ಲಿ ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ್, ವ್ಯವಸ್ಥಾಪಕ ನಿರ್ದೇಶಕ ಬಿ. ಶಿವಸ್ವಾಮಿ ಭಾಗವಹಿಸಲಿದ್ದಾರೆ ಎಂದು ಕೆಎಂಎಫ್ ಮಾರುಕಟ್ಟೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಹಾರ ಮತ್ತು ಕೃಷಿ ಸಂಸ್ಥೆಯು (ಎಫ್ಎಒ) ಜೂನ್ 1ನ್ನು ವಿಶ್ವ ಹಾಲು ದಿನ ಎಂದು 2001ರಲ್ಲಿ ಘೋಷಣೆ ಮಾಡಿತ್ತು. ಪ್ರತಿ ವರ್ಷ ಕೆಎಂಎಫ್ ಮತ್ತು ಜಿಲ್ಲಾ ಹಾಲು ಒಕ್ಕೂಟಗಳು ತಮ್ಮ ಮಾರುಕಟ್ಟೆ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಾಲಿನಲ್ಲಿರುವ ಪೌಷ್ಟಿಕಾಂಶಗಳ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಎಲ್ಲ ದಿನ 'ಬೆಂಗಳೂರು ದಿವ್ಯ ದರ್ಶನ'

ಬೆಂಗಳೂರು: ನಗರದ ದೇವಸ್ಥಾನಗಳು ಮತ್ತು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಗಾಗಿ ಬಿಎಂಟಿಸಿ ಆರಂಭಿಸಿರುವ 'ಬೆಂಗಳೂರು ದಿವ್ಯ ದರ್ಶನ' ಸಾರಿಗೆ ವ್ಯವಸ್ಥೆಯನ್ನು ವಾರದ ಎಲ್ಲ ದಿನಗಳಿಗೂ ವಿಸ್ತರಿಸಲು ಬಿಎಂಟಿಸಿ ನಿರ್ಧರಿಸಿದೆ.

ಇತ್ತೀಚೆಗೆ ಆರಂಭವಾಗಿರುವ 'ಬೆಂಗಳೂರು ದಿವ್ಯ ದರ್ಶನ' ವಾರಾಂತ್ಯಗಳಲ್ಲಿ ಮತ್ತು ರಜಾ ದಿನಗಳಲ್ಲಿ ಮಾತ್ರ ಇದೆ. ಜೂನ್ 2ರಿಂದ ಪ್ರತಿದಿನ ಸಂಚರಿಸಲಿದೆ.

ಬೆಳಿಗ್ಗೆ 8.30ಕ್ಕೆ ಮೆಜೆಸ್ಟಿಕ್‌ನ ಕೆಂಪೇಗೌಡ ನಿಲ್ದಾಣದಿಂದ ಹೊರಡಲಿದೆ. ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ, ರಾಜರಾಜೇಶ್ವರಿ ದೇವಸ್ಥಾನ, ಶೃಂಗಗಿರಿ ಷಣ್ಮುಖ ದೇವಸ್ಥಾನ, ಶ್ರೀದೇವಿ ಕರುಮಾರಿ ಅಮ್ಮನವರ ದೇವಸ್ಥಾನ, ಓಂಕಾರ ಹಿಲ್ಸ್, ವಸಂತಪುರ ಇಸ್ಕಾನ್ ದೇವಸ್ಥಾನ, ಆರ್ಟ್ ಆಫ್ ಲಿವಿಂಗ್, ಬನಶಂಕರಿ ದೇವಸ್ಥಾನಗಳಿಗೆ ಭೇಟಿ ನೀಡಿ ಸಂಜೆ 6.05ಕ್ಕೆ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ವಾಪಸ್ ಆಗಲಿದೆ. ವಯಸ್ಕರಿಗೆ ₹450 ಮತ್ತು ಮಕ್ಕಳಿಗೆ ₹350 ಟಿಕೆಟ್ ದರ ಇರಲಿದೆ. ಮಾಹಿತಿಗಾಗಿ www.mybmtc.com ಮತ್ತು www.ksrtc.in ಸಂಪರ್ಕಿಸಬಹುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸೂರಪ್ಪ ಬಾಬು ವಿರುದ್ಧ ಎಫ್‌ಐಆರ್

ಬೆಂಗಳೂರು: ಸಿನಿಮಾ ನಿರ್ಮಾಣಕ್ಕೆಂದು ಪಡೆದ ಸಾಲ ಹಿಂತಿರುಗಿಸದೇ ವಂಚಿಸಿದ ಆರೋಪದಡಿ ನಿರ್ಮಾಪಕ ಸೂರಪ್ಪ ಬಾಬು ವಿರುದ್ಧ ಅಮೃತಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಗರದ ತಲಕಾವೇರಿ ಲೇಔಟ್ ನಿವಾಸಿ ಎಚ್.ಜಿ. ಲಕ್ಷ್ಮೀ ಅವರ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ನಟರಾದ ಶಿವರಾಜಕುಮಾರ್ ಹಾಗೂ ಗಣೇಶ್ ಅವರನ್ನು ಹಾಕಿಕೊಂಡು 'ಪ್ರೊಡಕ್ಷನ್ ನಂಬರ್ 06' ಚಿತ್ರ ನಿರ್ಮಿಸುತ್ತಿರುವುದಾಗಿ ನಂಬಿಸಿ ₹92.50 ಲಕ್ಷ ಪಡೆದುಕೊಂಡಿದ್ದರು. ಈ ಪೈಕಿ ₹25 ಲಕ್ಷ ಮಾತ್ರ ಹಿಂದಿರುಗಿಸಿ, ಉಳಿದ ಮೊತ್ತವನ್ನು ವಾಪಸ್ ನೀಡದೆ ವಂಚಿಸಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

'2023ರ ಅಕ್ಟೋಬರ್‌ನಲ್ಲಿ ಸೂರಪ್ಪ ಬಾಬು ಭೇಟಿಯಾಗಿ, ಚಿತ್ರ ನಿರ್ಮಾಣಕ್ಕೆ ಹಣಕಾಸು ನೆರವು ಕೋರಿದ್ದರು. ಹಂತ ಹಂತವಾಗಿ ಅವರಿಗೆ ಸಾಲದ ರೂಪದಲ್ಲಿ ಹಣ ನೀಡಿದ್ದೇನೆ. ಈ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಗಿತ್ತು. ನಂತರ ಪರಿಶೀಲಿಸಿದಾಗ ಶಿವರಾಜ್ ಕುಮಾರ್ ಮತ್ತು ಗಣೇಶ್ ಅವರನ್ನು ಹಾಕಿಕೊಂಡು ಯಾವುದೇ ಚಿತ್ರ ನಿರ್ಮಿಸುತ್ತಿಲ್ಲ ಎಂಬುದು ಗೊತ್ತಾಯಿತು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ

ಸಂವಿಧಾನದ ಮೌಲ್ಯ ಪಾಲಿಸಿ

ಪ್ರಜಾವಾಣಿ ವಾರ್ತೆ

ಯಲಹಂಕ: 'ಬಡತನದಿಂದ ಶೋಷಣೆಗೆ ಒಳಗಾಗಿ ಕಷ್ಟದ ಜೀವನ ನಡೆಸಿದರೂ ಸಹ ಪರಿಶ್ರಮ ಮತ್ತು ಕಠಿಣ ವಿದ್ಯಾಭ್ಯಾಸದ ಮೂಲಕ ಭಾರತದ 140 ಕೋಟಿ ಜನರ ಹಕ್ಕುಗಳನ್ನು ರಕ್ಷಣೆಮಾಡುವ, ವಿಶ್ವದಲ್ಲಿಯೇ ಶ್ರೇಷ್ಠ ಸಂವಿಧಾನವನ್ನು ನೀಡಿದ ಮಹಾಪುರಷ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

ಹೆಬ್ಬಾಳದ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯ (ಬೀದರ್) ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬೋಧಕ-ಬೋಧಕೇತರ ನೌಕರರ ಸಂಘಗಳ ಆಶ್ರಯದಲ್ಲಿ ಆಯೋಜಿಸಿದ್ದ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ ಹಾಗೂ ತಾಂತ್ರಿಕ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನವನ್ನು ಎಲ್ಲರೂ ಒಪ್ಪಿಕೊಂಡು ಅಳವಡಿಸಿಕೊಂಡಿದ್ದೇವೆ. ಪ್ರತಿಯೊಬ್ಬರೂ ಇದರಲ್ಲಿ ಅಡಕವಾಗಿರುವ ಅಂಶಗಳು ಹಾಗೂ ಮೌಲ್ಯಗಳನ್ನು ಪಾಲಿಸಬೇಕಾದುದು ಅತ್ಯಗತ್ಯ ಎಂದರು.

ಈ ವೇಳೆ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಸಂವಿಧಾನದ ಪೀಠಿಕೆ ವಾಚಿಸಲಾಯಿತು. ಇದೇ ಸಂದರ್ಭದಲ್ಲಿ ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನದಡಿಯಲ್ಲಿ ಎಸ್‌ಸಿ. ಎಸ್‌ಟಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದರು. ಅಂಬೇಡ್ಕರ್ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಸಿ.ವೀರಣ್ಣ, ಕುಲಸಚಿವ ಪಿ.ಟಿ.ರಮೇಶ್, ವ್ಯವಸ್ಥಾಪಕ ಮಂಡಳಿ ಸದಸ್ಯರಾದ ವೆಂಕಟಾಚಲ.ವಿ.ಎಸ್, ಸಂಗಪ್ಪ ದೊಡ್ಡಬಸಪ್ಪ ವಾಲಿಕಾರ, ಬಸವರಾಜ. ಪಿ ಭತಮುರ್ಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರ ಸಂಘದ ಅಧ್ಯಕ್ಷ ರವಿಕುಮಾರ್.ಸಿ, ಜಂಟಿ ಕಾರ್ಯದರ್ಶಿ ಚಂದ್ರಶೇಖರ್.ಕೆ, ಸದಸ್ಯರಾದ ಎನ್.ಎಂ. ಶ್ರೀನಿವಾಸಮೂರ್ತಿ, ಭೋಜರಾಜ್, ವೇಣುಗೋಪಾಲ್, ಎಸ್.ಸಿ.ಎಸ್.ಟಿ ಕೋಶದ ನಿರ್ದೇಶಕ ಗಂಗಾನಾಯ್ಕ್. ಎಸ್ ಮತ್ತಿತರರು ಉಪಸ್ಥಿತರಿದ್ದರು.

ಲಾಕರ್‌ನಲ್ಲಿ ಇಟ್ಟಿದ್ದ ಆಭರಣ ಮಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಲಾಕರ್‌ನಲ್ಲಿಟ್ಟಿದ್ದ ಚಿನ್ನಾಭರಣ ಕಳ್ಳತನವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜರ್ ಹಾಗೂ ಡೆಪ್ಯುಟಿ ಮ್ಯಾನೇಜರ್ ವಿರುದ್ಧ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿಕ್ಕಮಾರನಹಳ್ಳಿಯ ಡಾಲರ್ಸ್ ಕಾಲೊನಿಯ ಶಾಖೆಯ ಮ್ಯಾನೇಜರ್ ಕೆ.ಎಸ್.ಭಾರತೀಶ್, ಡೆಪ್ಯುಟಿ ಮ್ಯಾನೇಜರ್ ಫಿಲ್‌ಜಿತ್ ಜಾನ್ ಹಾಗೂ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಚಿಕ್ಕಮಾರನಹಳ್ಳಿಯ ನಿವಾಸಿ ಸಿ.ಡಿ.ಬಿಂದು ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಬಿಂದು ಅವರು ಎಸ್‌ಬಿಐ ಬ್ಯಾಂಕ್‌ನ ಡಾಲರ್ಸ್ ಕಾಲೊನಿಯ ಶಾಖೆಯಲ್ಲಿ 2022ರಿಂದ ಉಳಿತಾಯ ಖಾತೆ ಹೊಂದಿದ್ದರು. ಬ್ಯಾಂಕ್‌ನಲ್ಲಿ ಲಾಕರ್ ಪಡೆದು, ಅದರಲ್ಲಿ 145 ಗ್ರಾಂ ಚಿನ್ನಾಭರಣವನ್ನು ಇಟ್ಟಿದ್ದರು. 2024ರ ನವೆಂಬರ್ 21ರಂದು ಲಾಕರ್ ಪರಿಶೀಲಿಸಿದಾಗ ಚಿನ್ನಾಭರಣಗಳು ಇದ್ದವು. ಕಳೆದ ಮಾರ್ಚ್ 29ರಂದು ಬ್ಯಾಂಕ್‌ಗೆ ತೆರಳಿ ಪರಿಶೀಲಿಸಿದಾಗ ಆಭರಣಗಳು ನಾಪತ್ತೆ ಆಗಿದ್ದವು. ಈ ವಿಷಯವನ್ನು ಮ್ಯಾನೇಜರ್ ಹಾಗೂ ಡೆಪ್ಯುಟಿ ಮ್ಯಾನೇಜರ್‌ಗೆ ತಿಳಿಸಿದಾಗ ಅವರು ನಮಗೆ ವಿಷಯ ಗೊತ್ತಿಲ್ಲ ಎಂಬುದಾಗಿ ಹೇಳಿದ್ದರು. ನಂತರ, ಪ್ರಶ್ನೆ ಮಾಡಿದಾಗ ಬ್ಯಾಂಕ್ ಅಧಿಕಾರಿಗಳು ಆಭರಣ ಖರೀದಿಗೆ ಸಂಬಂಧಿಸಿದ ದಾಖಲೆ ತರುವಂತೆ ಹಾಗೂ ಆನ್‌ಲೈನ್‌ನಲ್ಲಿ ದೂರು ದಾಖಲಿಸುವಂತೆ ಸೂಚಿಸಿದ್ದರು. ಅದಾದ ಮೇಲೆ ಎಸ್‌ಬಿಐ ಬ್ಯಾಂಕ್ ಗ್ರಾಹಕರ ಸೇವಾ ಕೇಂದ್ರ ಹಾಗೂ ವಿಚಕ್ಷಣಾದಳದ ಮುಖ್ಯ ಅಧಿಕಾರಿಗೆ ಬಿಂದು ದೂರು ಸಲ್ಲಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಗ್ರಾಹಕರ ಸೇವಾ ಕೇಂದ್ರಕ್ಕೆ ದೂರು ನೀಡಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ನಂತರ, ಬಿಂದು ಅವರು ಡಿಸಿಪಿಗೆ ದಾಖಲೆ ಸಹಿತ ದೂರು ಸಲ್ಲಿಸಿದ್ದರು. ದೂರು ಆಧರಿಸಿ, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಡಿಕೆಶಿ ರಾಮನಗರಕ್ಕೆ ಮಾತ್ರ ಡಿಸಿಎಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ಮತ್ತು ಕನಕಪುರಕ್ಕೆ ಮಾತ್ರ ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಟೀಕಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಶಿವಕುಮಾರ್ ರಾಜ್ಯದ ಉಪಮುಖ್ಯಮಂತ್ರಿಯಂತೆ ನಡೆದುಕೊಳ್ಳುತ್ತಿಲ್ಲ. ತುಮಕೂರಿನಲ್ಲಿ ನೀರಿನ ಕೊರತೆ ಇರುವಾಗ ರಾಮನಗರಕ್ಕೆ ನೀರು ತೆಗೆದುಕೊಂಡು ಹೋಗುತ್ತಿದ್ದಾರೆ. ಇದು ಅನ್ಯಾಯ. ಸಚಿವರಾದ ಕೆ.ಎನ್. ರಾಜಣ್ಣ, ಜಿ. ಪರಮೇಶ್ವರ ಅವರಿಗೂ ತುಮಕೂರಿನ ಜನರ ಬಗ್ಗೆ ಕಾಳಜಿ ಇಲ್ಲ. ಅಷ್ಟೊಂದು ಅಸಹಾಯಕರಾಗುವ ಬದಲು ಇಬ್ಬರೂ ಸಚಿವ ಸ್ಥಾನಕ್ಕೆ ರಾಜೀನಾಮೆ ನಿಡುವುದು ಒಳ್ಳೆಯದು ಎಂದರು.

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಲ್ಲಿ ಪಾರ್ಸಲ್ ಸ್ಥಳ, ಪಾರ್ಕಿಂಗ್ & ಜಾಹೀರಾತು ಮತ್ತು ವಿವಿಧ ಗುತ್ತಿಗೆಗಳಿಗಾಗಿ ಇ–ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ–ಹರಾಜಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ:

1. ಕ್ಯಾಟರಿಂಗ್ & ಎಂಪಿಎಸ್ ಅಂಗಡಿಗಳು: 09.06.2025, 10.06.2025, 11.06.2025, 12.06.2025, 13.06.2025, 16.06.2025, 17.06.2025, 18.06.2025, 19.06.2025, 20.06.2025, 23.06.2025, 24.06.2025, 25.06.2025, 26.06.2025
2. ಪಾರ್ಕಿಂಗ್ & ಪಾವತಿ ಮತ್ತು ಬಳಕೆ: 06.06.2025, 10.06.2025, 19.06.2025, 27.06.2025
3. ಪಾರ್ಸಲ್: 02.06.2025, 03.06.2025, 04.06.2025, 05.06.2025
4. ಜಾಹೀರಾತು, ಎಟಿಎಂ & ವಿವಿಧ: 06.06.2025, 19.06.2025, 23.06.2025, 24.06.2025, 25.06.2025, 26.06.2025, 27.06.2025

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು

PUB/148/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸರಾಗವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRRLY

PUBLIC NOTICE

Public are informed that we intend to purchase this site bearing No. 31, Katha No. 164/1 Ward No. 54, situated at Bileshivale Village, site measuring 2520 sqft.

Any person having any right, objections claims with Documentary evidence

Contact:
Ph: 97406 04028/98807 20884

If any issue please contact within 10 days.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ:08156–270058

EMail ID: eerdwsd.ckb2@gmail.com

ಸಂಖ್ಯೆ:/ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ–1/2024–25/ ದಿನಾಂಕ: 20.05.2025

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಟೆಂಡರ್ ಪ್ರಕಟಣೆ ಸಂಖ್ಯೆ: 03/2025-26, (12/Call-2,3/2024-25,) (02/Call-5,6/2023-24) (04,08/Call-2,3,4,2022-23)
ದಿನಾಂಕ: 20.05.2025

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು 2025–26 ನೇ JJM ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಶಿಡ್ಲಘಟ್ಟ & ಚಿಂತಾಮಣಿ ತಾಲ್ಲೂಕಿನ 15 ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂದಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ **KW-I & KW-II-KW-III , KW-IV** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ (Credit Card/Direct Debit/ NEFT & OTC ಮುಖೇನ) ಅಥವ ಚಾಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 04.06.2025 ರಂದು ಸಂಜೆ 5.30 ಗಂಟೆವರೆಗೆ.** (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 06.06.2025 ರಂದು ಸಂಜೆ 5.30 ಗಂಟೆವರೆಗೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 09.06.2025 ಬೆಳಗ್ಗೆ 11.00 ಗಂಟೆಗೆ.** (4) ಆರ್ಥಿಕ ಬಿಡನ್ನು ತೆರೆಯುವ **ದಿನಾಂಕ: 11.06.2025 ಬೆಳಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:78/ಕೆಎಸ್ಎಂಸಿಎ/2025–26

ಕರ್ನಾಟಕ ಸರ್ಕಾರ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಕೆ.ಆರ್. ವೃತ್ತ, ಬೆಂಗಳೂರು–560001,
ದೂರವಾಣಿ ಸಂಖ್ಯೆ: 91–080–22212408, ಫ್ಯಾಕ್ಸ್ ನಂ.: 91–080–22277528

ಸಂಖ್ಯೆ: SSLR/17026/23/2024 ದಿನಾಂಕ: 30.05.2025

ಇ–ಟೆಂಡರ್ ಅಧಿಸೂಚನೆ

ವಿಷಯ: ಭೂಮಾಪನ ಕಂದಾಯ ನಿರ್ಣಯ ತರಬೇತಿ ಸಂಸ್ಥೆ ಮೈಸೂರು ರವರಿಗೆ ಹೊಸದಾಗಿ 32 Seater 02 Qty ಮಿನಿ ಬಸ್ ಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸುವ ಬಗ್ಗೆ.

ಉಲ್ಲೇಖ : E-1360936 ರಲ್ಲಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

ಭೂಮಾಪನ ಕಂದಾಯ ನಿರ್ಣಯ ತರಬೇತಿ ಸಂಸ್ಥೆ ಮೈಸೂರು ರವರಿಗೆ ಹೊಸದಾಗಿ 32 Seater 02 Qty ಮಿನಿ ಬಸ್ ಗಳನ್ನು ಖರೀದಿಸುವ ಸಂಬಂಧ ಅರ್ಹ ಪ್ರತಿಷ್ಠಿತ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಇಲಾಖೆಯು 32 Seater 02 Qty ಮಿನಿ ಬಸ್ ಗಳನ್ನು ಒದಗಿಸಲು ಆಸಕ್ತಿಹೊಂದಿರುವಂತಹ ಸಂಸ್ಥೆಗಳಿಂದ ಆರ್ ಎಫ್ ಪಿ ಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, **ದಿನಾಂಕ: 02.06.2025** ರಿಂದ e-procurement portal http://www.epro.karnataka.gov.in ರಲ್ಲಿ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೋಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ **ದಿನಾಂಕ: 09.06.2025, 5.30 ಗಂಟೆ** ಆಗಿರುತ್ತದೆ.

ಸಹಿ/–
ಅಪರ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳು, ಬೆಂಗಳೂರು

ವಾಸಾಸಂಇ/ವಾ.ಪ್ರ/968/ಎಸ್‌ಎಸ್‌ಪಿ/2025–26

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ

ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳ ಕಚೇರಿ, ಅಂಚೆ ಕಚೇರಿ ಎದುರು, ಬಿ.ಬಿ.ರಸ್ತೆ ಚಿಕ್ಕಬಳ್ಳಾಪುರ ಜಿಲ್ಲೆ.
Email iD: dtokackb@mtcp.org, Ph.No:08156-273461

ಸಂಖ್ಯೆ: DTO/CKB/KIT/01/2024-25 ದಿನಾಂಕ:27.05.2025

Request for proposal (RFP) E-Tender for supply of Nutrition support to TB patients in Chikkaballapur FY 2024-25

E-Tender Schedule: (1) Name of the Tender: supply of Nutrition support to TB patients in Chikkaballapur District **(2)** Date and time for commencement of downloading of bidding document: **Date: 27.05.2025 Time:02.00 PM. (3)** Pre Bid Meeting date and Time: **Date: 30.05.2025 Time: 11.00 PM To 05.30 PM at DHO office. (4)** Last date and time for bid submission/ uploading of bid in E-Procurement platform: **Date: 03.06.2025 Time: 05.00PM. (5)** Sample Submission Date: **Date: 04.06.2025 Time: 11.00 AM. (6)** Date and time for opening of Technical Bids: Date: **05.06.2025 Time: 11.00AM, bids will be opened online. (7)** Date and time for opening of Financial Bids If Possible: **Date: 09.06.2025 Time:11.00 AM. (8)** Place of opening of bids and address for communication: District Health & Family Welfare Office, Chikkaballapur

Sd/- District Health and Family Welfare Officer, Chikkaballapur District

DIPR/CHIKKABALLAPUR/RO:88/KSMCA/2025-26

PUBLIC NOTICE

Publics are hereby informed that my client **M/s. DS-MAX**, having its office at No. 1854, 17th Main, 30th 'B' Cross, HBR Layout, 1st Stage, 5th Block, Bengaluru- 43 have intend to enter into **Absolute Sale Deed** with **Smt. Alka Ratan Lath** C/o Sri.Ratan Babulal Lath is the absolute owner of residential converted undeveloped vacant land bearing property No-BBMP Khatha No. **231/59**, **Block No. 31**, E-Khatha No.**9202801460**, carved out of **Sy.No.59**, in vide; Official Memorandum No. **ALN(NAY)SR:184/2015-16**, dated **02/12/2016**, for residential use issued by Deputy Commissioner Bangalore District, situated at **Chokkanahalli Village**, Yelahanka Hobli, Bangalore North Taluk, presently with a revenue jurisdiction of Bruhath Bangalore Mahanagara Palike in BBMP Ward No.5, Bengaluru, measuring in total **773.88 Sq. mtrs** or **(119x70 = 8,330 Sq. ft)** and bounded on: **East by:** Block No.32 in Sy.No.59, **West by:** Block No.30 in Sy.No.59, **North by:** Block No.17 in Sy.No.59, **South by:** Road and referred to as **"schedule property"** of **Item No. I.**

WHEREAS Smt. Alka Ratan Lath C/o. Sri. Ratan Babulal Lath is the absolute owner of residential converted undeveloped vacant land bearing property No-BBMP Khatha No. **187/59**, **Block No. 32**, E-Khatha No.**2305457063**, carved out of **Sy.No.59**, in vide; Official Memorandum No. **ALN(NAY)SR:191/2015-16**, dated **02/12/2016**, for residential use, issued by Deputy Commissioner Bangalore District, situated at **Chokkanahalli Village**, Yelahanka Hobli, Bangalore North Taluk, presently with a revenue jurisdiction of Bruhath Bangalore Mahanagara Palike in BBMP Ward No.5, Bengaluru, measuring in total **756.41 Sq. mtrs** or **(118x69 = 8,142 Sq. ft)** and bounded on: **East by:** Block No.33 in Sy.No.59, **West by:** Block No.31 in Sy.No.59, **North by:** Block No.18 in Sy.No.59, **South by:** Road and referred to as **"schedule property"** of **Item No. II.**

Any person or Any Promoters or Any Company claims having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps and shall be entering into Absolute Sale Deed of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/14/2025–26 ದಿನಾಂಕ: 31–05–2025

ಟೆಂಡರ್ ಪ್ರಕಟಣೆ
(Through GOK e-Procurement Portal www.kppp.karnataka.gov.in only)

ನಗರಸಭಾ ನಿಧಿ ಅಡಿಯಲ್ಲಿ ಮಾದನಾಯಕನಹಳ್ಳಿ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ ಈ ಕೆಳಕಂಡಂತೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಹಾಗೂ ಅನುಭವವುಳ್ಳ ಸಿವಿಲ್ ಗುತ್ತಿಗೆದಾರರು (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಂತೆ) ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

INDENT No: DMA/2025-26/OW/WORK_INDENT40927.

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು, ನಮೂನೆಗಳನ್ನು ಆನ್‌ಲೈನ್‌ನಲ್ಲಿ ಪಡೆಯಲು, ಹಾಗೂ ಆನ್‌ಲೈನ್ ಮೂಲಕ ಭರ್ತಿ ಮಾಡಿದ ನಮೂನೆ ಮತ್ತು ಇ.ಎಂ.ಡಿ ಠೇವಣಿಯನ್ನು ಸ್ವೀಕರಿಸುವ ಅವಧಿ ದಿನಾಂಕ: **16.06.2025 ಸಂಜೆ 5.00 ಗಂಟೆಯವರೆಗೆ** ಹಾಗೂ ಸಲ್ಲಿಸಿರುವ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18.06.2025 ಬೆಳಗ್ಗೆ 11.00 ಗಂಟೆಗೆ. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದಾದರು ತಿದ್ದುಪಡಿಗಳಿದ್ದಲ್ಲಿ** ಆನ್‌ಲೈನ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಪೌರಾಯುಕ್ತರು,
ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/985/ಸ್ಕ್ಯಾನ್/2025–26

ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇದಿದವರಿಗೆ ದಂಡ; ಪೊಲೀಸರ ಕಾರ್ಯಾಚರಣೆ

200ಕ್ಕೂ ಹೆಚ್ಚು ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಧೂಮಪಾನ ನಿಷೇಧ ದಿನದ ಅಂಗವಾಗಿ ನಗರದಲ್ಲಿ ಶನಿವಾರ ವಿವಿಧ ಠಾಣೆಗಳ ಪೊಲೀಸರು ಕಾರ್ಯಾಚರಣೆ ನಡೆಸಿ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇದುತ್ತಿದ್ದ ಹಾಗೂ ಗುಟ್ಕಾ ಉಗುಳಿದವರನ್ನು ಪತ್ತೆಹಚ್ಚಿ ದಂಡ ವಿಧಿಸಿದರು.

ಅನುಮತಿ ಪಡೆಯದೇ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿದ್ದ ಮಳಿಗೆ ಮೇಲೆ ದಾಳಿ ನಡೆಸಿ ಉತ್ಪನ್ನಗಳನ್ನು ಜಪ್ತಿ ಮಾಡಿಕೊಂಡರು. ಕೇಂದ್ರ, ಈಶಾನ್ಯ, ಪಶ್ಚಿಮ, ಆಗ್ನೇಯ, ಉತ್ತರ ಹಾಗೂ ದಕ್ಷಿಣ ವಿಭಾಗದ ಪೊಲೀಸರು ತಮ್ಮ ಭಾಗದಲ್ಲಿ ಕಾರ್ಯಾಚರಣೆ ನಡೆಸಿದರು. 200ಕ್ಕೂ ಹೆಚ್ಚು ಪ್ರಕರಣ ದಾಖಲಿಸಿಕೊಂಡರು.

ತಂಬಾಕು ಉತ್ಪನ್ನಗಳನ್ನು ಅಂಗಡಿಗಳಲ್ಲಿ ಮಾರಾಟ ಮಾಡಬೇಕಾದರೆ ಬಿಬಿಎಂಪಿಯಿಂದ ಮಾರಾಟಗಾರರು ಪರವಾನಗಿ ಪಡೆದುಕೊಳ್ಳಬೇಕು ಎಂದು ಪೊಲೀಸರು ಸೂಚನೆ ನೀಡಿದರು.

ಕಾರ್ಯಾಚರಣೆ ಮುಂದುವರಿಕೆ: ‘ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು, ಬಾಲಕರಿಗೆ ತಂಬಾಕು ಮಾರಾಟ ಮಾಡುವುದು, ಶಿಕ್ಷಣ ಸಂಸ್ಥೆಗಳ ಬಳಿ ಸಿಗರೇಟು ಮಾರಾಟ ಮಾಡುವವರ ವಿರುದ್ಧ ಕಾರ್ಯಾಚರಣೆ ಮುಂದುವರೆಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಮಾಲ್, ಕಾಫಿ ಬಾರ್‌ಗಳು ಮತ್ತು ಅಂಗಡಿಗಳ ಮೇಲೆ ಪೊಲೀಸರು ಅನಿರೀಕ್ಷಿತ ದಾಳಿ ನಡೆಸಿ, ತಪಾಸಣೆ ನಡೆಸಲಿದ್ದಾರೆ’ ಎಂದು ಹೇಳಿದರು.

‘ಉತ್ತಮ ಸಮಾಜ ನಿರ್ಮಾಣಕ್ಕಾಗಿ ಪೊಲೀಸ್ ಇಲಾಖೆ ಶ್ರಮಿಸುತ್ತಿದೆ. ನಾಗರಿಕರು ಹಾಗೂ ವ್ಯಾಪಾರಿಗಳು ಕಾನೂನು ಪಾಲನೆಗಾಗಿ ಪೊಲೀಸರ ಜತೆಗೆ ಕೈಜೋಡಿಸುವ ಮೂಲಕ ಸಹಕಾರ ನೀಡಬೇಕು’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಕೋರಿದರು.

‘ತಂಬಾಕು ಕೇವಲ ಆರೋಗ್ಯವನ್ನಷ್ಟೇ ಹಾಳು ಮಾಡುವುದಿಲ್ಲ. ನಮ್ಮ ಮನೆ, ಭವಿಷ್ಯ ಹಾಗೂ ದೇಶವನ್ನೇ ದುರ್ಬಲಗೊಳಿಸುತ್ತದೆ. ತಂಬಾಕಿನಿಂದ ದೂರವಿದ್ದು, ಆರೋಗ್ಯಕರ ಹಾಗೂ ಉಜ್ವಲ ಭವಿಷ್ಯದತ್ತ ಸಾಗಬೇಕು. ತಂಬಾಕು ವಿರುದ್ಧದ ಹೋರಾಟದಲ್ಲಿ ಕರ್ನಾಟಕ ಒಗ್ಗಟ್ಟಾಗಿ ನಿಲ್ಲುತ್ತದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ.

ನಗರದಲ್ಲಿ ಶನಿವಾರ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಭಿತ್ತಿಪತ್ರ ಬಿಡುಗಡೆ ಮಾಡಲಾಯಿತು

ಸಿಗರೇಟು ಹಾಗೂ ವೇಪ್‌ಗಳನ್ನು ಸೇದುವ ಹವ್ಯಾಸವು ನೋಡಲು ಚೆನ್ನಾಗಿ ಕಾಣಬಹುದು. ಆದರೆ, ಅದರ ಪರಿಣಾಮ ಅಪಾಯಕಾರಿ.
ಬಿ.ದಯಾನಂದ
ನಗರ ಪೊಲೀಸ್ ಕಮಿಷನರ್

ಜಾಗೃತಿ ಓಟ

ಗುಂಜೂರು ಶ್ರೀಶ್ರೀ ರವಿಶಂಕರ್ ವಿದ್ಯಾಮಂದಿರ (ಬೆಂಗಳೂರು ಪೂರ್ವ), ಮಾರತಹಳ್ಳಿ ಪೊಲೀಸ್ ಸಹಯೋಗದಲ್ಲಿ ‘ತಂಬಾಕು ಮುಕ್ತ ಸಮಾಜ’ದ ಜಾಗೃತಿಗಾಗಿ ಶನಿವಾರ 5 ಕಿ.ಮೀ ಓಟ ನಡೆಯಿತು.

ಮಾರತಹಳ್ಳಿ ಉಪ ವಿಭಾಗದ ಎಸಿಪಿ ಪ್ರಿಯದರ್ಶಿನಿ ಈಶ್ವರ್ ಸಾಣಿಕೊಪ್ಪ ಅವರು ಮ್ಯಾರಥಾನ್‌ಗೆ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ತಂಬಾಕು ಮುಕ್ತ ಸಮಾಜಕ್ಕಾಗಿ ಪ್ರತಿಜ್ಞೆ ಸ್ವೀಕರಿಸಿದರು. ಶಾಲೆಯ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಎಸ್‌ಎಸ್‌ಆರ್‌ವಿಎಂ ಪ್ರಾಚಾರ್ಯೆ ರೇಷ್ಮಾ ಗಣೇಶ್, ಯೋಗಾನಂದ ಸೋನಾರ್, ಮೋಹನ್, ವೆಂಕಟೇಶ್, ಶ್ರೀಧರ್ ಹಾಜರಿದ್ದರು.

‘ಹೋರಾಟದಿಂದ ಯಶಸ್ಸು’

ಜಾಗೃತಿ ಸಮಾವೇಶದಲ್ಲಿ ಸಿದ್ಧರಾಜು ಸ್ವಾಮೀಜಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಮಾದಿಗ ಸಮುದಾಯವು ಒಗ್ಗಟ್ಟಾಗಿ ಹೋರಾಟ ಮಾಡಿದರೆ ಯಶಸ್ಸು ಸಿಗಲಿದೆ’ ಎಂದು ಪಾಲನಹಳ್ಳಿ ಮಠದ ಪೀಠಾಧ್ಯಕ್ಷ ಸಿದ್ಧರಾಜು ಸ್ವಾಮೀಜಿ ಹೇಳಿದರು.

ಕರ್ನಾಟಕ ಆದಿಜಾಂಬವ (ಮಾದಿಗ) ಸಂಘಟನೆಗಳ ಒಕ್ಕೂಟ ಶನಿವಾರ ಆಯೋಜಿಸಿದ್ದ ಸಂವಿಧಾನ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಮಾದಿಗ ಸಮುದಾಯ ರಾಜಕೀಯವಾಗಿ ಬಲಾಢ್ಯವಾದರೆ ಮಾತ್ರ, ಸಾಮಾಜಿಕ ನ್ಯಾಯ ದೊರೆಯಲಿದೆ. ನಮ್ಮ ಸಮುದಾಯದ ಅಭಿವೃದ್ಧಿಗೆ ಬೇಕಾದ ಎಲ್ಲ ಅವಕಾಶಗಳನ್ನು ಸಂವಿಧಾನ ನೀಡಿದೆ. ಆದರೆ, ಆ ಅವಕಾಶಗಳು ನಮಗೆ ನ್ಯಾಯಯುತವಾಗಿ ಸಿಗುತ್ತಿಲ್ಲ. ಆದ್ದರಿಂದ ನಾವು ಒಗ್ಗಟ್ಟಿನಿಂದ ಹೋರಾಟ ನಡೆಸಿ, ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು’ ಎಂದರು.

ಒಕ್ಕೂಟದ ಕಾರ್ಯಾಧ್ಯಕ್ಷ ಜಂಬೂದೀಪ ಸಿದ್ಧರಾಜು ಮಾತನಾಡಿ, ‘ಪ್ರತಿ ವರ್ಷ ಬಜೆಟ್‌ನಲ್ಲಿ ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ ₹1 ಸಾವಿರ ಕೋಟಿ, ಲಿಡ್ಕರ್‌ಗೆ ₹500 ಕೋಟಿ ಅನುದಾನ ನೀಡಬೇಕು. ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬರುವ ಆದಿ ಜಾಂಬವ ಸಮುದಾಯದ ಜನಸಂಖ್ಯೆಗೆ ಆಧಾರದ ಮೇಲೆ ಒಳ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು. ಪಿಟಿಸಿಎಲ್ ಕಾಯ್ದೆಯನ್ನು ಸಮಗ್ರವಾಗಿ ತಿದ್ದುಪಡಿ ಮಾಡಬೇಕು’ ಎಂದು ಅವರು ಒತ್ತಾಯಿಸಿದರು.

ಆದಿಜಾಂಬವ ಬೃಹನ್ಮಠದ ಪೀಠಾಧ್ಯಕ್ಷ ಷಡಕ್ಷರಿಮುನಿ ದೇಶಿಕೇಂದ್ರ ಸ್ವಾಮೀಜಿ, ಶಿವಮುನಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ, ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಮಾಜಿ ಶಾಸಕರಾದ ವೀರಭದ್ರಪ್ಪ ಹಾಲಹರವಿ, ತಿಮ್ಮರಾಯಪ್ಪ ಉಪಸ್ಥಿತರಿದ್ದರು.

ನಗರದ ಡಾ.ಬಾಬು ಜಗಜೀವನರಾಮ್ ಭವನದಲ್ಲಿ ಶನಿವಾರ ನಡೆದ ಸಂವಿಧಾನ ಜಾಗೃತಿ ಸಮಾವೇಶದಲ್ಲಿ ಎನ್. ಮೂರ್ತಿ, ಸಿದ್ಧರಾಜು ಸ್ವಾಮೀಜಿ, ಆಲ್ಕೋಡ್ ಹನುಮಂತಪ್ಪ, ಷಡಕ್ಷರಿಮುನಿ ದೇಶಿಕೇಂದ್ರ ಸ್ವಾಮೀಜಿ ಅವರು ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನರಾಮ್ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಯುಜಿ ಕೇಬಲ್: ನೈಜ ಮಾಹಿತಿಯ ಆ್ಯಪ್

ಜಿಐಎಸ್ ಮ್ಯಾಪಿಂಗ್ ಅಪ್ಲಿಕೇಶನ್ ಬಿಡುಗಡೆ ಮಾಡಿದ ಸಚಿವ ಕೆ.ಜೆ.ಜಾರ್ಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಕೈಗೊಳ್ಳುವ ಭೂಗತ (ಯುಜಿ) ಕೇಬಲ್ ಕಾಮಗಾರಿಯ ನೈಜ ಸಮಯದ ಮಾಹಿತಿ ಪಡೆಯುವುದಕ್ಕಾಗಿ ಅಭಿವೃದ್ಧಿಪಡಿಸಿರುವ ‘ಜಿಐಎಸ್ ಮ್ಯಾಪಿಂಗ್’ ಮೊಬೈಲ್ ಅಪ್ಲಿಕೇಶನ್ ಅನ್ನು ಶನಿವಾರ ಬಿಡುಗಡೆ ಮಾಡಲಾಯಿತು.

ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಜತೆಗೆ ಸಂಯೋಜಿಸಲಾದ ಈ ಮ್ಯಾಪಿಂಗ್ ಅಪ್ಲಿಕೇಷನ್ ರಾಜ್ಯದಾದ್ಯಂತ ನಡೆಯುವ ಭೂಗತ ಕೇಬಲ್ ಕಾಮಗಾರಿಗಳ ನೈಜ ಸಮಯದ ಮಾಹಿತಿ ಒದಗಿಸಲಿದೆ. ಸಾರ್ವಜನಿಕರು ಈ ಅಪ್ಲಿಕೇಷನ್‌ನಲ್ಲಿ ಲಭ್ಯವಾಗುವ ಮಾಹಿತಿ ಆಧರಿಸಿ ತಮ್ಮ ದೈನಂದಿನ ಮತ್ತು ದೀರ್ಘಕಾಲದ ಚಟುವಟಿಕೆಗಳಿಗೆ ಸಮಯ ಹೊಂದಾಣಿಕೆ ಮಾಡಿಕೊಳ್ಳಬಹುದು. ಕಾಮಗಾರಿಗಳ ಕುರಿತು ಈ ಅಪ್ಲಿಕೇಷನ್ ಪೂರ್ವಭಾವಿ ಮಾಹಿತಿ ಒದಗಿಸುವುದರಿಂದ ಸಾರ್ವಜನಿಕರಿಗೆ ಆಗುವ ಅನಾನುಕೂಲಗಳು ಕಡಿಮೆಯಾಗಲಿದೆ.

ಕೆ.ಜೆ.ಜಾರ್ಜ್

ಮೊಬೈಲ್ ಅಪ್ಲಿಕೇಷನ್ ಬಿಡುಗಡೆ ಮಾಡಿದ ಇಂಧನ ಸಚಿವ ಕೆ.ಜೆ. ಜಾರ್ಜ್, ‘ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ತಪ್ಪಿಸಲು ತಂತ್ರಜ್ಞಾನ ಬಳಕೆಗೆ ಆದ್ಯತೆ ನೀಡಿದೆ. ಅದರ ಭಾಗವಾಗಿ ಈ ‘ಜಿಐಎಸ್ ಮ್ಯಾಪಿಂಗ್’ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗಿದೆ’ ಎಂದರು.

‘ಜಿಐಎಸ್ ತಂತ್ರಜ್ಞಾನದೊಂದಿಗೆ ಅಭಿವೃದ್ಧಿಪಡಿಸಿರುವ ಈ ಅಪ್ಲಿಕೇಷನ್‌ನಿಂದ, ಆಂತರಿಕ ದಕ್ಷತೆ ಸುಧಾರಿಸುವುದರ ಜತೆಗೆ ಸಾರ್ವಜನಿಕವಾಗಿ ಪಾರದರ್ಶಕವಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಈ ತಾಂತ್ರಿಕ ವ್ಯವಸ್ಥೆಯು ಕೆಪಿಟಿಸಿಎಲ್‌ನ ಜಾಲವನ್ನು ಆಧುನೀಕರಿಸುವ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಸೇವೆಯನ್ನು ಸುಧಾರಿಸುವ ಕಾರ್ಯತಂತ್ರದ ಭಾಗವಾಗಿದೆ’ ಎಂದು ಹೇಳಿದರು.

ಈ ಸಂದರ್ಭದಲ್ಲಿ ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಕೆಪಿಟಿಸಿಎಲ್ ಯೋಜನೆಗಳು ವಿಭಾಗದ ನಿರ್ದೇಶಕರಾದ ಎಸ್.ವಿ.ಮಂಜುನಾಥ್, ಮಾಹಿತಿ ತಂತ್ರಜ್ಞಾನ ವಿಭಾಗದ ಸೂಪರಿಂಟೆಂಡ್ ಎಂಜಿನಿಯರ್ ಅನಿಲ್ ಡಿ'ಸೋಜಾ ಹಾಗೂ ನಿಗಮದ ಅಧಿಕಾರಿಗಳು ಉಪಸ್ಥಿತರಿದ್ದರು.

ಗುರೆಡ್ಡಿ ಕಂಪನಿಯಿಂದ ಹಣ ಅಕ್ರಮ ವರ್ಗಾವಣೆ: ಇ.ಡಿ

ಬೆಂಗಳೂರು: ಸಂಡೂರಿನಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಸುತ್ತಿರುವ ಶಾಂತೇಶ್ ಗುರೆಡ್ಡಿ ಕುಟುಂಬದ ಶ್ರೀ ಕುಮಾರಸ್ವಾಮಿ ಮಿನರಲ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ನಿಯಮಬಾಹಿರವಾಗಿ ವಿದೇಶಗಳಿಗೆ ಹಣ ರವಾನೆ ಮಾಡಿದೆ ಎಂಬುದನ್ನು ಜಾರಿ ನಿರ್ದೇಶನಾಲಯ (ಇ.ಡಿ) ಪತ್ತೆ ಮಾಡಿದೆ.

ಭಾರತೀಯ ಖನಿಜ ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷರೂ ಆಗಿರುವ ಶಾಂತೇಶ್ ಗುರೆಡ್ಡಿ ಅವರು ಸಂಸ್ಥೆಯ ನಿರ್ದೇಶಕರು. ಕಂಪನಿಯು ಆದಾಯ ತೆರಿಗೆ ವಂಚಿಸಿರುವ ಆರೋಪದಲ್ಲಿ ಆದಾಯ ತೆರಿಗೆ ಇಲಾಖೆಯು ಪ್ರಕರಣ ದಾಖಲಿಸಿಕೊಂಡಿತ್ತು. ಅದರ ಆಧಾರದಲ್ಲೇ ಇ.ಡಿ ಸಹ ಪ್ರಕರಣ ದಾಖಲಿಸಿಕೊಂಡಿತ್ತು.

‘ಈ ಕಂಪನಿಯು ಅದಿರು ರಫ್ತು ಮಾಡುವಲ್ಲಿ ವಿದೇಶಿ ವಿನಿಮಯ ನಿಯಂತ್ರಣ ಕಾಯ್ದೆ (ಫೆಮಾ) ಉಲ್ಲಂಘಿಸಿದೆ. ಈಚೆಗೆ ಬೆಂಗಳೂರಿನ ಮೂರು ಕಡೆ ಮತ್ತು ಮಂಗಳೂರಿನ ಒಂದು ಕಡೆ ಶೋಧ ಕಾರ್ಯ ನಡೆಸಲಾಗಿತ್ತು. ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವುದಕ್ಕೆ ಪುರಾವೆಗಳು ದೊರೆತಿವೆ. ಕಂಪನಿಯು ಕೆಲ ಪ್ರಮಾಣದ ಕಲ್ಲಿದ್ದಲನ್ನೂ ರಫ್ತು ಮಾಡಿರುವುದು ಗೊತ್ತಾಗಿದೆ’ ಎಂದು ಇ.ಡಿ ಹೇಳಿದೆ.

‘ಕಂಪನಿ, ಶಾಂತೇಶ್ ಮತ್ತು ಜ್ಯೋತಿ ಹೆಸರಿನಲ್ಲಿ ವಿದೇಶದಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ. ಕಂಪನಿಯ ಆಡಳಿತ ಮಂಡಳಿ ಸದಸ್ಯರಾಗಿರುವ ಭವಾನಿ ಪ್ರಸಾದ್ ಟಪಾಲ್, ರೇಣುಕಾ ದೇವಿ, ರವೀಂದ್ರನಾಥ ಮತ್ತು ಉಮಾ ಆಳ್ವ ಅವರಿಗೆ ಸೇರಿದ ಸ್ಥಳಗಳಲ್ಲೂ ಶೋಧ ನಡೆಸಲಾಗಿದೆ. ಅಕ್ರಮವಾಗಿ ವರ್ಗಾವಣೆ ಮಾಡಿದ ಹಣದಲ್ಲಿ ಶಾಂತೇಶ್ ಲಂಡನ್‌ನಲ್ಲಿ ವಿಲ್ಲಾ ಖರೀದಿಸಿದ್ದಾರೆ. ಇತರರೂ ವಿದೇಶಗಳಲ್ಲಿ ಸ್ವತ್ತುಗಳನ್ನು ಖರೀದಿಸಿದ್ದಾರೆ. ಈ ಸಂಬಂಧ ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಇ.ಡಿ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

10ನೇ ವಾರ್ಷಿಕೋತ್ಸವ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ ಶೇಕಡ 95ಕ್ಕೂ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ: ಆಯೋಜನೆ: ಸಾಕ್ಷಾತ್ಕಾರ ಚಾರಿಟಬಲ್ ಸೊಸೈಟಿ, ಸ್ಥಳ: ಶಿವಕುಮಾರಸ್ವಾಮಿ ಜ್ಞಾನಸೌಧ, ಕಲ್ಯಾಣನಗರ, ಬೆಳಿಗ್ಗೆ 9.30

ರಾಜ್ಯಮಟ್ಟದ ಎನ್‌ಪಿಎಸ್ ಟು ಒಪಿಎಸ್ ಕಾರ್ಯಾಗಾರ, ರಾಜ್ಯ ಕಾರ್ಯಕಾರಣಿ: ಉದ್ಘಾಟನೆ: ಚಂದ್ರಶೇಖರಯ್ಯ, ಅತಿಥಿ: ಸಿ.ಎಸ್. ಷಡಾಕ್ಷರಿ, ಸಂಪನ್ಮೂಲ ವ್ಯಕ್ತಿಗಳು: ರಾಧಾಕೃಷ್ಣ, ರಾಮಕೃಷ್ಣ ರೆಡ್ಡಿ ಕೆ., ಅಧ್ಯಕ್ಷತೆ: ನಾಗನಗೌಡ ಎಂ.ಎ., ಆಯೋಜನೆ: ಅಖಿಲ ಕರ್ನಾಟಕ ಎನ್‌ಪಿಎಸ್ ನೌಕರರ ಸಂಘ, ಸ್ಥಳ: ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 9.30

‘ಓ ನನ್ನ ಚೇತನ’ ಉಪನ್ಯಾಸ: ತೇಜಸ್ವಿನಿ ಅನಂತಕುಮಾರ್, ಆಯೋಜನೆ: ಮಾಸದ ಮಂಥನ, ಸ್ಥಳ: ನಂ. 17, ಸಾನ್ನಿಧ್ಯ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 10

ತಮಟೆ ನಾಟ್ಯದ ಉದ್ಘಾಟನೆ: ಆಯೋಜನೆ: ಹಲ್ಗಿ ಕಲ್ಚರ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

‘ಪ್ರಾಚೀನ ಲಿಪಿಗಳ ಸಂಸ್ಕರಣೆಗೆ ಎಐ ವಿಧಾನಗಳು’ ಉಪನ್ಯಾಸ: ಅಜಿತ್ ಎಸ್., ‘ಆಹಾರ ಮತ್ತು ಮನೆಮದ್ದು’ ಉಪನ್ಯಾಸ: ಡಾ. ಭಾರತಿ ಡಿ. ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಡಾ.ಡಿ.ಕೆ. ಚೌಟ ನೆನಪಿನಲ್ಲಿ ನಾಟಕೋತ್ಸವ–2025: ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ನಾ. ದಾಮೋದರ ಶೆಟ್ಟಿ, ರಾಧಾಕೃಷ್ಣ ಹೆಗಡೆ, ರಂಗಗೌರವ: ಸುದೇಶ್ ಮಹಾನ್, ಪ್ರೇಮ್‌ದಾಸ್ ಅಡ್ಯಂತಾಯ, ಗೀತಾ ಸುರತ್ಕಲ್, ರೇಣುಕ ರೆಡ್ಡಿ, ರಮ್ಯಾ ನವೀನ್ ಕೃಷಿ, ‘ಮೀನುಗುತಾರೆ’ ಏಕವ್ಯಕ್ತಿ ಪ್ರದರ್ಶನ: ಅಭಿನಯ: ರಂಜಿತಾ ಸೂರ್ಯವಂಶಿ, ರಚನೆ: ಜಯಲಕ್ಷ್ಮಿ ಪಾಟೀಲ್, ನಿರ್ದೇಶನ: ಕೆಎಸ್‌ಡಿಎಲ್ ಚಂದ್ರು, ‘ಹುಲಿ ಹಿಡಿದ ಕಡಸು’ ನಾಟಕ ಪ್ರದರ್ಶನ: ರಚನೆ: ಡಿ.ಕೆ. ಚೌಟ, ನಿರ್ವಹಣೆ: ಜಿಪಿಓ ಚಂದ್ರು, ನಿರ್ದೇಶನ: ನಂಜುಂಡೇಗೌಡ ಸಿ., ಆಯೋಜನೆ:ರಂಗಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4ರಿಂದ

ಭಾರತೀಯ ನಾದ ಸೌರಭ ಸಂಗೀತೋತ್ಸವ, ವಾರ್ಷಿಕ ಪುರಸ್ಕಾರ ಪ್ರದಾನ: ಅತಿಥಿ: ಡಾ. ಶ್ರೀಪಾದ ಹೆಗ್ಡೆ, ‘ಗೋವಿಂದ ಲಕ್ಷ್ಮೀ’ ಪುರಸ್ಕಾರ ಸ್ವೀಕರಿಸುವವರು: ಎನ್. ವಿ. ಗೋಪಿನಾಥ್, ‘ಶ್ಯಾಮಲಾ ಸ್ಮೃತಿ ಸಮ್ಮಾನ್’ ಪುರಸ್ಕಾರ ಸ್ವೀಕರಿಸುವವರು: ಕೆ.ಸಿ. ಜಯರಾಮ್, ಗಾಯನ: ವಾಗೀಶ ಭಟ್, ತಬಲಾ: ಸತೀಶ್ ಹಂಪಿಹೊಳಿ, ಹಾರ್ಮೋನಿಯಂ: ಶಿವಕುಮಾರ್ ಎಂ., ಆಯೋಜನೆ: ಸರಸ್ವತೀ ಸಂಗೀತ ವಿದ್ಯಾಲಯ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಲಕ್ಷ್ಮಿ

ಭರತನಾಟ್ಯ ರಂಗ ಪ್ರವೇಶ: ಶ್ರುತಿ ಸುರೇಶ್, ಅತಿಥಿಗಳು: ಉಮಾ ಆನಂದ್, ಲಕ್ಷ್ಮಿ ಗೋಪಾಲಸ್ವಾಮಿ, ಶಮಾ ಕೃಷ್ಣ, ಆಯೋಜನೆ: ವಿಶ್ವ ಭಾರತಿ ನಾಟ್ಯಶಾಲಾ, ಸ್ಥಳ: ಪ್ರಭಾತ್ ಕಲಾದ್ವಾರಕ, ಕೋರಮಂಗಲ ಕ್ಲಬ್‌ನ ಆವರಣ, ಸಂಜೆ 6.15

‘ಜೀಕೆ ಮಾಸ್ತರರ ಪ್ರಣಯ ಪ್ರಸಂಗ’ ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ಭಾಸ್ಕರ್ ನೀನಾಸಂ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಮಹಾಭಾರತ ತಾತ್ಪರ್ಯ ನಿರ್ಣಯ’ ಪ್ರವಚನ: ಸಿಂಧನೂರು ಕೃಷ್ಣಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಈಜುಕೋಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ತಲಘಟ್ಟಪುರ: ಚಿರತೆ ಸೆರೆಗೆ ಬೋನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲಘಟ್ಟಪುರದಲ್ಲಿ ಕೆಎಸ್‌ಎಸ್‌ಇಎಂ ಕಾಲೇಜು ಬಳಿ ಕಾಣಿಸಿಕೊಂಡಿರುವ ಚಿರತೆ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದ್ದಾರೆ.

ಕಾಲೇಜು ಎದುರು ಪೂರ್ವಿಕಾ ವುಡ್ ವರ್ಕ್ಸ್ ಬಳಿ ಬೆಳಿಗ್ಗೆ ಚಿರತೆ ಓಡಾಡುವುದನ್ನು ನಾಗರಿಕರು ನೋಡಿ ಭಯಗೊಂಡಿದ್ದಾರೆ. ಪೊದೆ ಸಮೀಪದಲ್ಲಿ ಚಿರತೆ ಅಡಗಿಕೊಂಡಿರಬಹುದು ಎಂದು ಸ್ಥಳೀಯರು ತಿಳಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ವಲಯ ಅರಣ್ಯಾಧಿಕಾರಿ ಎನ್. ಕಾಂಬಳೆ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ಸ್ಥಳೀಯರಿಂದ ಮಾಹಿತಿ ಪಡೆದುಕೊಂಡರು.

‘ಸ್ಥಳೀಯರ ಪ್ರಕಾರ ಪೂರ್ವಿಕಾ ವುಡ್ ವರ್ಕ್ಸ್ ಬಳಿಯ ಪೊದೆ ಬಳಿ ಚಿರತೆ ಅಡಗಿಕೊಂಡಿರುವ ಸಾಧ್ಯತೆ ಇದೆ. ಈವರೆಗೂ ಚಿರತೆ ಓಡಾಟ ಕಂಡುಬಂದಿಲ್ಲ. ಆದರೂ ನಾಗರಿಕರ ಸುರಕ್ಷತೆ ದೃಷ್ಟಿಯಿಂದ ಚಿರತೆ ಸೆರೆಗೆ ಮೂರು ಬೋನ್‌ಗಳನ್ನು ಇರಿಸಲಾಗಿದೆ ಹಾಗೂ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಜನ ಸಂಚಾರ ಕಡಿಮೆಯಾದ ಬಳಿಕ ರಾತ್ರಿ ಶೋಧ ನಡೆಸಲಾಗುವುದು’ ಎಂದು ಕಾಂಬಳೆ ‘ಪ್ರಜಾವಾಣಿ’ಗೆ ತಿಳಿಸಿದರು.

ನಿಧನವಾರ್ತೆ

ಚಿಕ್ಕಣ್ಣ

ಪೀಣ್ಯ ದಾಸರಹಳ್ಳಿ: ಶ್ರೀಕಂಠಪುರದ (ಅಂಚೆಪಾಳ್ಯ) ನಿವಾಸಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಚಿಕ್ಕಣ್ಣ (53) ಅವರು ಹೃದಯಾಘಾತದಿಂದ ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.


ಚಿಕ್ಕಣ್ಣ ಸಿ

ಅಂತ್ಯಕ್ರಿಯೆಯನ್ನು ಅಂಚೆಪಾಳ್ಯದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬಸ್ಥರು ತಿಳಿಸಿದರು.

ಜ್ವರ, ಕೆಮ್ಮು: ಶಾಲೆಗೆ ಕಳುಹಿಸದಂತೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ವರ, ಕೆಮ್ಮು, ನೆಗಡಿ ಹಾಗೂ ಇತರ ಅನಾರೋಗ್ಯ ಸಮಸ್ಯೆಗಳು ಕಂಡುಬಂದಲ್ಲಿ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಬೇಡಿ ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಕೆ.ಬಿ. ಶಿವಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳು ವರದಿಯಾಗುತ್ತಿದ್ದು, ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

ಜ್ವರದಂತಹ ಅನಾರೋಗ್ಯ ಸಮಸ್ಯೆಗಳು ಕಂಡುಬಂದರೆ ಮಕ್ಕಳನ್ನು ಶಾಲೆಗೆ ಕಳುಹಿಸದೆ, ವೈದ್ಯರ ಸಲಹೆಯಂತೆ ಸೂಕ್ತ ಚಿಕಿತ್ಸೆ ಹಾಗೂ ಆರೈಕೆ ಕ್ರಮಗಳನ್ನು ಪಾಲಿಸಬೇಕು. ಸಂಪೂರ್ಣವಾಗಿ ಗುಣಮುಖರಾದ ಬಳಿಕವೇ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು. ಶಾಲೆಯಲ್ಲಿ ಯಾವುದೇ ಮಗುವಿಗೆ ನೆಗಡಿ, ಜ್ವರ, ಕೆಮ್ಮು ಕಂಡುಬಂದಲ್ಲಿ ಕೂಡಲೇ ಪೋಷಕರಿಗೆ ಮಾಹಿತಿ ನೀಡಿ, ಮನೆಗೆ ಕಳುಹಿಸಬೇಕು. ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿಯಲ್ಲಿ ಜ್ವರದಂತಹ ಸಮಸ್ಯೆ ಇದ್ದರೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು. ಕೋವಿಡ್ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಿಳಿಸಿದ್ದಾರೆ.

ಕೋಟಿ ಮೌಲ್ಯದ ಸ್ಥಿರಾಸ್ತಿ, ಚಿನ್ನಾಭರಣ ಪತ್ತೆ

ವಿವಿಧ ಇಲಾಖೆಗಳ ಏಳು ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸರ ದಾಳಿ

1. ಅಮಿನ್ ಮುಕ್ತರ್ ಅಹಮದ್, ಸೂಪರಿಂಟೆಂಡೆಂಟ್ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ಬಳ್ಳಾರಿ

- 31 ನಿವೇಶನ, 2 ಮನೆ, 5 ಎಕರೆ 30 ಗುಂಟೆ ಕೃಷಿ ಜಮೀನು ಸೇರಿ ₹5.71 ಕೋಟಿ ಮೌಲ್ಯದ ಸ್ಥಿರಾಸ್ತಿಗಳು
- ₹25.49 ಲಕ್ಷ ನಗದು, ₹79 ಲಕ್ಷ ಮೌಲ್ಯದ ಚಿನ್ನಾಭರಣ, ₹47.10 ಲಕ್ಷ ಮೌಲ್ಯದ ವಾಹನಗಳು, ₹10 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು

ಆಸ್ತಿಯ ಒಟ್ಟು ಮೌಲ್ಯ: ₹7.32 ಕೋಟಿ

2. ಎಚ್.ಸುರೇಶ್, ಮುಖ್ಯ ಎಂಜಿನಿಯರ್, ಲೋಕೋಪಯೋಗಿ ಇಲಾಖೆ ಸಂಪರ್ಕ ಮತ್ತು ಕಟ್ಟಡ ವಿಭಾಗ(ಉತ್ತರ), ಧಾರವಾಡ

- 2 ನಿವೇಶನ, 2 ಮನೆ, 6 ವಾಣಿಜ್ಯ ಸಂಕೀರ್ಣ, 11 ಎಕರೆ 35 ಗುಂಟೆ ಕೃಷಿ ಜಮೀನು ಸೇರಿ ₹2.89 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹76,000 ನಗದು, ₹23.98 ಲಕ್ಷದ ಚಿನ್ನಾಭರಣ, ₹26 ಲಕ್ಷದ ವಾಹನಗಳು, ₹25 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು ಮತ್ತು ₹1.65 ಕೋಟಿ ಮೊತ್ತದಷ್ಟು ಬ್ಯಾಂಕ್ ಠೇವಣಿಗಳು

ಆಸ್ತಿಯ ಒಟ್ಟು ಮೌಲ್ಯ: ₹5.30 ಕೋಟಿ

3. ಗಂಗಾಧರ ವೀರಪ್ಪ ಶಿರೋಳ, ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಗದಗ

- 4 ನಿವೇಶನ, 7 ವಾಸದ ಮನೆ, 3 ಎಕರೆ 29 ಗುಂಟೆ ಕೃಷಿ ಜಮೀನು ಸೇರಿ ₹2.68 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹25,000 ನಗದು, ₹27.53 ಲಕ್ಷ ಮೌಲ್ಯದ ಚಿನ್ನಾಭರಣ, ₹17.30 ಲಕ್ಷ ಮೌಲ್ಯದ ವಾಹನಗಳು, ₹21.25 ಲಕ್ಷ ಮೊತ್ತದಷ್ಟು ಬ್ಯಾಂಕ್ ಠೇವಣಿ ಮತ್ತು ಉಳಿತಾಯ

ಆಸ್ತಿಯ ಒಟ್ಟು ಮೌಲ್ಯ: ₹3.34 ಕೋಟಿ

ದೇವರಾಜ ಅರಸು ಅಭಿವೃದ್ಧಿ ನಿಗಮ ಬೆಳಗಾವಿ ಜಿಲ್ಲಾ ವ್ಯವಸ್ಥಾಪಕ ಸಿದ್ದಲಿಂಗಪ್ಪ ನಿಂಗಪ್ಪ ಬಾನಸಿ ಅವರ ಮನೆಯಲ್ಲಿ ಅಧಿಕಾರಿಗಳು ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಜಪ್ತಿ ಮಾಡಿದರು

4. ಶ್ರೀಶೈಲ ಸುಭಾಷ ತತ್ರಾಣಿ, ಪ್ರಥಮ ದರ್ಜೆ ಸಹಾಯಕ, ಲೆಕ್ಕಪರಿಶೋಧನೆ ಇಲಾಖೆ ಕಚೇರಿ, ಬಾಗಲಕೋಟೆ

- 3 ನಿವೇಶನ, 6 ವಾಸದ ಮನೆ, 6 ಎಕರೆ 38 ಗುಂಟೆ ಕೃಷಿ ಜಮೀನು ಸೇರಿ ₹2.93 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹21.01 ಲಕ್ಷ ಮೌಲ್ಯದ ಚಿನ್ನಾಭರಣ, ₹45.60 ಲಕ್ಷದ ವಾಹನಗಳು

ಆಸ್ತಿಯ ಒಟ್ಟು ಮೌಲ್ಯ: ₹2.93 ಕೋಟಿ

5. ಗಿರೀಶ್ ರಾವ್, ಲೆಕ್ಕಾಧಿಕಾರಿ, ಮೆಸ್ಕಾಂ, ಕಾರ್ಕಳ, ಉಡುಪಿ

- 5 ನಿವೇಶನ, 1 ವಾಸದ ಮನೆ, 1 ವಾಣಿಜ್ಯ ಸಂಕೀರ್ಣ ಸೇರಿ ₹2.48 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹30.25 ಲಕ್ಷ ಮೌಲ್ಯದ ಚಿನ್ನಾಭರಣ, ₹9.50 ಲಕ್ಷ ಮೌಲ್ಯದ ವಾಹನಗಳು, ₹1.25 ಲಕ್ಷ ಮೌಲ್ಯದ ಸ್ಮಾರ್ಟ್‌ಫೋನ್

ಆಸ್ತಿಯ ಒಟ್ಟು ಮೌಲ್ಯ: ₹2.89 ಕೋಟಿ

6. ಸಿದ್ದಲಿಂಗಪ್ಪ ನಿಂಗಪ್ಪ ಬನಸಿ, ಜಿಲ್ಲಾ ವ್ಯವಸ್ಥಾಪಕ, ದೇವರಾಜ ಅರಸ್ ಅಭಿವೃದ್ಧಿ ನಿಗಮ, ಬೆಳಗಾವಿ

- 4 ನಿವೇಶನ, 1 ವಾಸದ ಮನೆ ಸೇರಿ ₹1.02 ಕೋಟಿ ಮೌಲ್ಯದ ಸ್ಥಿರಾಸ್ತಿ
- ₹34.64 ಲಕ್ಷ ಮೌಲ್ಯದ ಚಿನ್ನಾಭರಣ, ₹10.60 ಲಕ್ಷದ ವಾಹನಗಳು

ಆಸ್ತಿಯ ಒಟ್ಟು ಮೌಲ್ಯ: ₹1.48 ಕೋಟಿ

7. ರಾಮಕೃಷ್ಣ ಬಾಳಪ್ಪ ಗುಡಗೇರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಾಡ ಗ್ರಾಮ ಪಂಚಾಯಿತಿ, ಶಿಗ್ಗಾವಿ, ಹಾವೇರಿ

- 2 ನಿವೇಶನ, 1 ವಾಸದ ಮನೆ, 9 ಎಕರೆ 7 ಗುಂಟೆ ಕೃಷಿ ಜಮೀನು ಸೇರಿ ₹86.16 ಲಕ್ಷ ಮೌಲ್ಯದ ಸ್ಥಿರಾಸ್ತಿ
- ₹79,500 ನಗದು, ₹8.58 ಲಕ್ಷ ಮೌಲ್ಯದ ಚಿನ್ನಾಭರಣ, ₹13.50 ಲಕ್ಷದ ವಾಹನಗಳು, ₹10 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು

ಆಸ್ತಿಯ ಒಟ್ಟು ಮೌಲ್ಯ: ₹1.18 ಕೋಟಿ

ಗಿರೀಶ್ ರಾವ್ ಒಡೆತನದ ಲಾಡ್ಜ್

ಸುದ್ದಿ 2 ನಿಮಿಷ

ಮಹೇಶ್ ಜೋಶಿಗೆ ನೀಡಿದ್ದ ರಾಜ್ಯ ಸಚಿವ ಸ್ಥಾನ ವಾಪಸ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರಿಗೆ ನೀಡಲಾಗಿದ್ದ ರಾಜ್ಯ ಸಚಿವ ಸ್ಥಾನ ಮತ್ತು ವಿಶೇಷ ಸವಲತ್ತುಗಳನ್ನು ರಾಜ್ಯ ಸರ್ಕಾರವು ತಕ್ಷಣದಿಂದಲೇ ಜಾರಿಯಾಗುವಂತೆ ಹಿಂದಕ್ಕೆ ಪಡೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಏಪ್ರಿಲ್ 28ರಂದು ಭೇಟಿ ಮಾಡಿದ್ದ ಸಾಹಿತಿಗಳಾದ ಹಂಪ ನಾಗರಾಜಯ್ಯ, ಎಸ್. ಜಿ.ಸಿದ್ದರಾಮಯ್ಯ ಅವರಿದ್ದ ನಿಯೋಗವು, ಮಹೇಶ್ ಜೋಶಿ ವರ್ತನೆಗೆ ಆಕ್ಷೇಪ ವ್ಯಕ್ತಪಡಿಸಿತ್ತು.

'ಮಹೇಶ್ ಜೋಶಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಘ ಪರಿವಾರದ ಚಿಂತನೆಗಳನ್ನು ಹೇರುತ್ತಿದ್ದಾರೆ. ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದು, ವಿರೋಧದ ಮಧ್ಯೆಯೂ ಪರಿಷತ್ತಿನ ಬೈ–ಲಾಗೆ ತಿದ್ದುಪಡಿ ತಂದಿದ್ದಾರೆ. ಅವರಿಗೆ ನೀಡಿರುವ ರಾಜ್ಯ ಸಚಿವ ಸ್ಥಾನವನ್ನು ವಾಪಸ್ ಪಡೆಯಬೇಕು. ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾ ಮಾಡಬೇಕು' ಎಂದು ನಿಯೋಗವು ಕೋರಿತ್ತು.

'ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಹಣ ದುರುಪಯೋಗ ಆಗಿರುವ ಆರೋಪಗಳಿವೆ. ಈ ಬಗ್ಗೆ ತನಿಖೆ ನಡೆಸಬೇಕು. ತನಿಖೆ ಮುಗಿಯುವವರೆಗೆ ಮಹೇಶ್ ಜೋಶಿ ಅವರನ್ನು ಅಮಾನತಿನಲ್ಲಿ ಇರಿಸಬೇಕು. ಪರಿಷತ್ತಿಗೆ ಆಡಳಿತಾಧಿಕಾರಿಯನ್ನು ನೇಮಿಸಬೇಕು' ಎಂದೂ ಮನವಿ ಸಲ್ಲಿಸಲಾಗಿತ್ತು.

ಸಂಪುಟದಲ್ಲೇ ಸಿ.ಎಂಗೆ ಕಿಮ್ಮತ್ತಿಲ್ಲ: ಆರ್. ಅಶೋಕ

ಬೆಂಗಳೂರು: 'ಸಿದ್ದರಾಮಯ್ಯನವರ ಮಾತಿಗೆ ಸಚಿವರೇ ಕಿಮ್ಮತ್ತು ಕೊಡುತ್ತಿಲ್ಲ. ಸಂಪುಟ ವಿಸ್ತರಣೆಯ ಬೇಡಿಕೆಗೆ ಕಾಂಗ್ರೆಸ್ ಹೈಕಮಾಂಡ್ ಸಮ್ಮತಿ ನೀಡಿಲ್ಲ. ಈ ಬೆಳವಣಿಗೆಗಳು ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ನಿರ್ಗಮಿಸುತ್ತಿರುವ ಸೂಚನೆಯೇ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿ ನೀಡಿದ ನಿರ್ದೇಶನಗಳೇ ಪಾಲನೆಯಾಗುತ್ತಿಲ್ಲ ಎಂದರೆ ಏನು ಅರ್ಥ? ತಿಂಗಳಿಗೊಂದು ಜನತಾ ದರ್ಶನ, ಜಿಲ್ಲಾ ಪ್ರವಾಸ, ವಾರದಲ್ಲಿ ಮೂರು ದಿನ ಕಚೇರಿ ಕೆಲಸ ಮಾಡಬೇಕು ಎಂದು ಸಚಿವರಿಗೆ ಸೂಚನೆ ನೀಡಿದ್ದರೂ, ಪಾಲನೆ ಮಾಡುತ್ತಿಲ್ಲ. ಸಂಪುಟ ಸಭೆ ಬಿಟ್ಟರೆ ವಿಧಾನಸೌಧದತ್ತ ಸಚಿವರು ತಲೆ ಹಾಕುತ್ತಿಲ್ಲ ಎಂದು ದೂರಿದ್ದಾರೆ.

'ಸಿದ್ದರಾಮಯ್ಯ ನಡೆಸಿದ ಸಭೆಯಲ್ಲಿ ತಮ್ಮ ಸೂಚನೆ ಪಾಲಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿರುವುದು ಆಡಳಿತಯಂತ್ರ ಹಳಿ ತಪ್ಪಿರುವುದಕ್ಕೆ ಕನ್ನಡಿಯಾಗಿದೆ. ಎರಡು ದಿನಗಳು ನಿರಂತರವಾಗಿ ಸಭೆ ನಡೆಸಿ, ಅಧಿಕಾರಿಗಳ ಮೇಲೆ ಕೋಪ, ತಾಪ ಪ್ರದರ್ಶಿಸಿದ್ದಾರೆ. ಸಚಿವ ಸಂಪುಟ ಸಹೋದ್ಯೋಗಿಗಳ ಮೇಲಿನ ಹತಾಶೆಯ ಪ್ರತೀಕಾರವನ್ನು ಅಧಿಕಾರಿಗಳ ಮೇಲೆ ತೀರಿಸಿಕೊಂಡಿದ್ದಾರೆ' ಎಂದು ಟೀಕಿಸಿದ್ದಾರೆ.

ರಾಜ್ಯದಲ್ಲಿ ಸರಾಸರಿ 24.5 ಸೆಂ.ಮೀ. ಮಳೆ • 1943ರ ಮೇನಲ್ಲಿ ಸುರಿದಿದ್ದ 18.5 ಸೆಂ.ಮೀ ಮಳೆ ಹಿಂದಿನ ದಾಖಲೆ

ಮೇ ತಿಂಗಳಲ್ಲಿ ಶತಮಾನದ ದಾಖಲೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಇಲಾಖೆ ಪ್ರಕಾರ ರಾಜ್ಯದಲ್ಲಿ ಮೇ ತಿಂಗಳು ದಾಖಲೆ ಪ್ರಮಾಣದಲ್ಲಿ ಮಳೆಯಾಗಿದ್ದು, ಒಂದೇ ತಿಂಗಳು ಸರಾಸರಿ 24.5 ಸೆಂ. ಮೀ. ಮಳೆ ಸುರಿದಿದೆ. 1901ರಿಂದ ಈವರೆಗೆ ಮೇ ತಿಂಗಳಲ್ಲಿ ಸುರಿದ ಗರಿಷ್ಠ ಮಳೆ ಪ್ರಮಾಣ ಇದಾಗಿದೆ.

1943ರಲ್ಲಿ ಮೇ ತಿಂಗಳು ಸರಾಸರಿ 18.5 ಸೆಂ.ಮೀ. ಮಳೆಯಾಗಿತ್ತು. ಬಳಿಕ ಇದಕ್ಕಿಂತ ಅಧಿಕ ಪ್ರಮಾಣದಲ್ಲಿ ಮಳೆ ಸುರಿದಿರಲಿಲ್ಲ. ಈ ಬಾರಿ ಪೂರ್ವ ಮುಂಗಾರು ಚುರುಕುಗೊಂಡ ಪರಿಣಾಮ ರಾಜ್ಯದ ವಿವಿಧೆಡೆ ಭಾರಿ ಮಳೆಯಾಗಿದ್ದು, ಹೊಸ ದಾಖಲೆ ನಿರ್ಮಾಣವಾಗಿದೆ. ಕರಾವಳಿಯಲ್ಲಿ ಗರಿಷ್ಠ ಮಳೆಯಾಗಿದ್ದು, ಮೇ ತಿಂಗಳ ಸರಾಸರಿ ಮಳೆ 76.4 ಸೆಂ.ಮೀ.ಗೆ ತಲುಪಿದೆ. 1918ರಲ್ಲಿ 69 ಸೆಂ.ಮೀ. ಮಳೆಯಾಗಿತ್ತು.

ಮಾರ್ಚ್‌ನಿಂದ ಮೇ ಅವಧಿಗೆ ಹೋಲಿಸಿದರೂ ಈ ಬಾರಿ ದಾಖಲೆ ಮಳೆ ಸುರಿದಿದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ಸರಾಸರಿ 32.2 ಸೆಂ.ಮೀ. ಮಳೆಯಾಗಿದೆ. 2022ರಲ್ಲಿ ಮಾರ್ಚ್–ಮೇ ಅವಧಿಯಲ್ಲಿ 25.5 ಸೆಂ.ಮೀ. ಮಳೆ ಸುರಿದಿತ್ತು. ಕರಾವಳಿಯಲ್ಲಿ ಈ ಬಾರಿ ಮೂರು ತಿಂಗಳಲ್ಲಿ ಸರಾಸರಿ 83.5 ಸೆಂ.ಮೀ. ಮಳೆಯಾಗಿದೆ. ಈ ಭಾಗದಲ್ಲಿ 1918ರಲ್ಲಿ 70.6 ಸೆಂ. ಮೀ. ಮಳೆಯಾಗಿತ್ತು. ಉತ್ತರ ಒಳನಾಡಿನಲ್ಲಿಯೂ ಮೂರು ತಿಂಗಳು ದಾಖಲೆ ಪ್ರಮಾಣದಲ್ಲಿ ಮಳೆಯಾಗಿದ್ದು, 23.1 ಸೆಂ.ಮೀ. ಮಳೆಯಾಗಿದೆ. 1943ರಲ್ಲಿ 18.9 ಸೆಂ.ಮೀ. ಮಳೆಯಾಗಿತ್ತು.

ಬೆಂಗಳೂರು ನಗರದಲ್ಲಿ ಮೇ ಒಂದೇ ತಿಂಗಳು 31.5 ಸೆಂ.ಮೀ. ಮಳೆಯಾಗಿದ್ದು, ಇದು ಸಾರ್ವಕಾಲಿಕ ದಾಖಲೆಯಾಗಿದೆ. 2023ರಲ್ಲಿ 30.5 ಸೆಂ.ಮೀ. ಮಳೆಯಾಗಿತ್ತು.

ಮಳೆ ಮುಂದುವರಿಕೆ: ಕರಾವಳಿ–ಮಲೆನಾಡಿನ ಕೆಲವೆಡೆ ಸೋಮವಾರದಿಂದ ಮೂರು ದಿನಗಳು ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸೋಮವಾರದಂದು ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಿದರೆ, ಮಂಗಳವಾರ ಹಾಗೂ ಬುಧವಾರ ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಈ ಜಿಲ್ಲೆಗಳ ಒಂದೆರಡು ಕಡೆ ಮೂರು ದಿನಗಳು ನಿರಂತರ ಗಾಳಿಯೊಂದಿಗೆ ಭಾರಿ ಮಳೆ ಸುರಿಯುವ ಸಂಭವವಿದೆ. ಜೂನ್ 4ರಿಂದ ಈ ಭಾಗದಲ್ಲಿ ಮಳೆಯ ತೀವ್ರತೆ ಕಡಿಮೆಯಾಗಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯ ಒಂದೆರಡು ಕಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಮಂಗಳವಾರದಿಂದ ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಯ ಒಂದೆರಡು ಕಡೆ ಸಾಧಾರಣ ಮಳೆ ಹೊರತುಪಡಿಸಿದರೆ ಉಳಿದೆಡೆ ಒಣಹವೆ ಇರಲಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಕನ್ನಡ: ತಗ್ಗಿದ ಮಳೆ ಅಬ್ಬರ

ಮಂಗಳೂರು: ಜಿಲ್ಲೆಯಲ್ಲಿ ಸುಮಾರು ಹತ್ತು ದಿನ ಅಬ್ಬರಿಸಿದ್ದ ಮಳೆ ಶನಿವಾರ ತಣ್ಣಗಾಗಿದೆ. ಬೆಳಿಗ್ಗೆ ಜಿಲ್ಲೆಯ ಕೆಲವು ಕಡೆಗಳಲ್ಲಿ ಒಂದು ತಾಸು ಸಾಮಾನ್ಯ ಪ್ರಮಾಣದಲ್ಲಿ ಸುರಿದಿದ್ದು ದಿನವಿಡೀ ಬಿಟ್ಟುಬಿಟ್ಟು ಜಿಟಿಜಿಟಿ ಮಳೆಯಾಗಿದೆ. ಗುಡ್ಡ ಕುಸಿತದ ಘಟನೆಗಳು ಮುಂದುವರಿದಿವೆ.

ಬೆಳ್ತಂಗಡಿ ತಾಲ್ಲೂಕಿನ ಲಾಯಿಲ ಗ್ರಾಮದ ಅಂಕಾಜೆ ಬಳಿ ಲಾಯಿಲ-ನಿನ್ನಿಕಲ್ಲು ಚಂದ್ಕೂರು ರಸ್ತೆಯಲ್ಲಿ ಬಂಡೆಕಲ್ಲು ಸಮೇತ ಗುಡ್ಡ ಕುಸಿದು ರಸ್ತೆಗೆ ಬಿದ್ದಿದ್ದು ಸಂಪರ್ಕ ಕಡಿತಗೊಂಡಿದೆ. ಇಳಂತಿಲ ಗ್ರಾಮದ ಹಾರಕೆರೆ ಬಳಿ ಗುಡ್ಡ ಜರಿದು ಬಿದ್ದು ರಸ್ತೆ ಸಂಪೂರ್ಣ ಬಂದ್ ಆಗಿದೆ. ಬಂದಾರು ಗ್ರಾಮದ ಪೆರ್ಲ-ಬೈಪಾಡಿ ರಸ್ತೆಯ ಬೋಲೋಡಿಯಲ್ಲಿ ಗುಡ್ಡ ಕುಸಿದಿದೆ. ಕಳೆದ ವರ್ಷವೂ ಇಲ್ಲಿ ಗುಡ್ಡ ಕುಸಿದಿತ್ತು. ಇದೇ ಗ್ರಾಮದ ಮುರ್ತಾಜೆಯ ಸೇಸಪ್ಪ ಪೂಜಾರಿ ಅವರ ಕೋಳಿ ಶೆಡ್ ಬಳಿಯೂ ಗುಡ್ಡ ಜರಿದಿದೆ. ಬಂಟ್ವಾಳ ಬಳಿ ನೇತ್ರಾವತಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗುತ್ತಿದ್ದು, ತಗ್ಗು ಪ್ರದೇಶಗಳಲ್ಲಿ ನೆರೆಯ ಭೀತಿ ಎದುರಾಗಿದೆ.

ಬೆಳಂದೂರು– 48 ಸೆಂ.ಮೀ ಮಳೆ: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಬೆಳಂದೂರು ಗ್ರಾಮದಲ್ಲಿ ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ 48 ಸೆಂಟಿ ಮೀಟರ್ ಮಳೆಯಾಗಿದೆ. ಬೆಳ್ತಂಗಡಿಯಲ್ಲಿ 37, ಸುಳ್ಯ ತಾಲ್ಲೂಕು ಬೆಳ್ಳಾರೆಯಲ್ಲಿ 28, ಪುತ್ತೂರಿನ ರಾಮಕುಂಜದಲ್ಲಿ 27, ಬಂಟ್ವಾಳದ ಕಾವಳಮುಡೂರಿನಲ್ಲಿ 24, ಬೆಳ್ತಂಗಡಿಯ ಪಟ್ರಮೆಯಲ್ಲಿ 24 ಸೆಂ.ಮೀ ಮಳೆ ದಾಖಲಾಗಿದೆ. ಜಿಲ್ಲೆಯ 35 ಕೇಂದ್ರಗಳಲ್ಲಿ 10 ಸೆಂ.ಮೀಟರ್‌ಗೂ ಹೆಚ್ಚು ಮಳೆ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಡಿಕೇರಿಯಲ್ಲಿ 17 ಸೆಂ.ಮೀ. ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿಯಿಡೀ ಮಳೆ ಸುರಿಯಿತು. ಮಡಿಕೇರಿಯಲ್ಲಿ 17 ಸೆಂ.ಮೀ, ಭಾಗಮಂಡಲದಲ್ಲಿ 13, ಸಂಪಾಜೆ 11, ನಾಪೋಕ್ಲುವಿನಲ್ಲಿ 8 ಸೆಂ.ಮೀ ಮಳೆಯಾಗಿದೆ. ಇದರಿಂದ ಕೆಲವೆಡೆ ಮನೆಗಳಿಗೆ ಹಾನಿಯಾಗಿದೆ.

ಉಪವಿಭಾಗಾಧಿಕಾರಿ ವಿನಾಯಕ ನಾರ್ವಡೆ ಹಾನಿಯಾದ ಪ್ರದೇಶಗಳಿಗೆ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸೋಮವಾರಪೇಟೆ ತಾಲ್ಲೂಕಿನ ಕೂತಿ ಗ್ರಾಮದ ಡಿ.ಕೆ. ಪ್ರಕಾಶ್ ಅವರ ಕಾಫಿತೋಟದಲ್ಲಿ ಭೂಕುಸಿತ ಉಂಟಾಗಿದ್ದು, ಅನೇಕ ಕಾಫಿಗಿಡಗಳು ನಾಶವಾಗಿವೆ. ಈ ಪ್ರದೇಶವು ಶನಿವಾರಸಂತೆಗೆ ಸಂಪರ್ಕ ಕಲ್ಪಿಸುವ ಬೆಟ್ಟದ ರಸ್ತೆಯಾಗಿದೆ. ಮಳೆ ಹೀಗೆ ಮುಂದುವರಿದರೆ ರಸ್ತೆಯು ಕುಸಿದು ಸಂಪರ್ಕ ಕಡಿತಗೊಳ್ಳುವ ಆತಂಕ ಎದುರಾಗಿದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಕೂತಿ ಗ್ರಾಮದ ಕಾಫಿ ತೋಟದಲ್ಲಿ ಭೂಕುಸಿತ ಉಂಟಾಗಿದ್ದು, ಕಾಫಿ ಗಿಡಗಳು ನಾಶವಾಗಿವೆ

ವಿರಾಜಪೇಟೆ– ಮೂರ್ನಾಡು ನಡುವಿನ 33 ಕೆ.ವಿ ಸಾಮರ್ಥ್ಯದ ವಿದ್ಯುತ್ ಗೋಪುರದ ಮೇಲೆ ಮರ ಬಿದ್ದು ಹಾನಿಯಾಗಿತ್ತು. ಮಳೆಯಲ್ಲೇ ಸೆಸ್ಕ್ ಸಿಬ್ಬಂದಿ ಇದನ್ನು ಸರಿಪಡಿಸಿದರು. ಹಾರಂಗಿ ಜಲಾಶಯದ ನೀರಿನ ಮಟ್ಟ ಮತ್ತೆ 2 ಅಡಿ ಏರಿಕೆಯಾಗಿದೆ. 2,859 ಅಡಿ ಗರಿಷ್ಠ ಮಟ್ಟದ ಈ ಜಲಾಶಯದಲ್ಲಿ ಸದ್ಯ 2,848.67 ಅಡಿಗಳಷ್ಟು ನೀರಿದೆ. 6,050 ಕ್ಯೂಸೆಕ್ ಒಳಹರಿವಿದೆ.

ಚಪ್ಪಲಿಯಿಂದ ಆಟೊ ಚಾಲಕನಿಗೆ ಹೊಡೆದ ಹಿಂದಿ ಭಾಷಿಕ ಯುವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಸೆಂಟ್ರಲ್ ಮಾಲ್ ಬಳಿ ಶನಿವಾರ ಮಧ್ಯಾಹ್ನ ಆಟೊ ಚಾಲಕರೊಬ್ಬರಿಗೆ ಹಿಂದಿ ಭಾಷೆಯಲ್ಲಿ ಮಾತನಾಡುತ್ತಿದ್ದ ಯುವತಿ ಚಪ್ಪಲಿಯಿಂದ ಹೊಡೆದಿದ್ದು, ಆಕೆಯ ವಿರುದ್ಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲ್ಲೆಗೆ ಒಳಗಾದ ದೊಡ್ಡ ಸೋಮನಹಳ್ಳಿಯ ನಿವಾಸಿ, ಆಟೊ ಚಾಲಕ ಲೋಕೇಶ್ ಅವರು ನೀಡಿದ ದೂರು ಆಧರಿಸಿ ಅಪರಿಚಿತ ಯುವತಿ ವಿರುದ್ಧ ಪ್ರಕರಣ ದಾಖಲಾಗಿದೆ.

'ಶನಿವಾರ ಮಧ್ಯಾಹ್ನ 3.30ರ ಸುಮಾರಿಗೆ ಮಾಲ್ ಬಳಿ ಆಟೊವನ್ನು ಎಡಕ್ಕೆ ತಿರುವು ಪಡೆದುಕೊಂಡು ತೆರಳುವಾಗ ಬಲಭಾಗದಲ್ಲಿ ಬರುತ್ತಿದ್ದ ದ್ವಿಚಕ್ರ ವಾಹನ ಸವಾರರು, ಇಳಿದು ಗಲಾಟೆ ಮಾಡಿದರು. ದ್ವಿಚಕ್ರ ವಾಹನಕ್ಕೆ ಆಟೊ ತಾಗಿಸಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ದ್ವಿಚಕ್ರ ವಾಹನದ ಹಿಂದೆ ಕುಳಿತಿದ್ದ ಯುವತಿ ಚಪ್ಪಲಿ ಹಾಗೂ ಕೈಯಿಂದ ಹಲ್ಲೆ ನಡೆಸಿದ್ದಳು' ಎಂದು ಲೋಕೇಶ್ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಯುವತಿಯ ಹೆಸರು ಹಾಗೂ ವಿಳಾಸ ಪತ್ತೆಯಾಗಿಲ್ಲ. ಆಕೆ ಉತ್ತರ ಭಾರತದ ಮೂಲದವರು ಎಂಬುದು ಗೊತ್ತಾಗಿದೆ. ಚಪ್ಪಲಿಯಿಂದ ಹೊಡೆಯುತ್ತಿರುವ ದೃಶ್ಯವು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಅದನ್ನು ಪರಿಶೀಸಲಾಗುತ್ತಿದೆ. ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಯನ್ನು ಆಧರಿಸಿ ಯುವತಿಯನ್ನು ಪತ್ತೆ ಮಾಡಲಾಗುವುದು' ಎಂದು ಪೊಲೀಸರು ಹೇಳಿದರು.

ರಸ್ತೆಯಲ್ಲೇ ವಾಗ್ವಾದ: ಚಪ್ಪಲಿಯಿಂದ ಹೊಡೆದಿದ್ದನ್ನು ಗಮನಿಸಿದ ಸ್ಥಳೀಯರು ಯುವತಿಯನ್ನು ಪ್ರಶ್ನೆ ಮಾಡುತ್ತಾರೆ. ಆಕೆ ಆಟೊ ಚಾಲಕನ ಜೊತೆಗೆ ಸ್ಥಳೀಯರೊಂದಿಗೂ ವಾಗ್ವಾದ ನಡೆಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಪಿಯು 'ಅತಿಥಿ'ಗಳ ಮುಂದುವರಿಸಿ'

ಬೆಂಗಳೂರು: ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಕೆಲಸ ಮಾಡಿದ್ದ ಪಿಯು ಕಾಲೇಜಿನ ಎಲ್ಲ ಅತಿಥಿ ಉಪನ್ಯಾಸಕರನ್ನು 2025–26ನೇ ಸಾಲಿಗೂ ಮುಂದುವರಿಸಬೇಕು ಎಂದು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ಒತ್ತಾಯಿಸಿದೆ.

2024–25ನೇ ಸಾಲಿನಲ್ಲಿ 4 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕೆಲಸ ಮಾಡಿದ್ದಾರೆ. ದ್ವಿತೀಯ ಪಿಯುನಲ್ಲಿ ಉತ್ತಮ ಫಲಿತಾಂಶಕ್ಕೆ ಕಾರಣರಾಗಿದ್ದಾರೆ. ಅವರಿಗೆ ಆದ್ಯತೆ ನೀಡಬೇಕು. ಈ ಬಾರಿ ಶೈಕ್ಷಣಿಕ ವರ್ಷ ಆರಂಭವಾಗುತ್ತಿದ್ದರೂ ಇನ್ನೂ ನೇಮಕಾತಿ ಪ್ರಕ್ರಿಯೆ ಆರಂಭಿಸಿಲ್ಲ. ವಿಳಂಬ ಮಾಡಿದರೆ ಸರ್ಕಾರಿ ಕಾಲೇಜುಗಳ ದಾಖಲಾತಿ ಮೇಲೆ ಪರಿಣಾಮ ಬೀರುತ್ತದೆ. ತಕ್ಷಣ ನೇಮಕ ಪ್ರಕ್ರಿಯೆ ಆರಂಭಿಸಬೇಕು ಎಂದು ಸಂಘಟನೆಯ ಅಧ್ಯಕ್ಷ ಪದ್ಮಪ್ರಭ ಇಂದ್ರ, ಕಾರ್ಯದರ್ಶಿ ರಾಜೇಶ್ ಭಟ್ ಆಗ್ರಹಿಸಿದ್ದಾರೆ.

ಮಲಯಾಳ ಕಡ್ಡಾಯ ಮಸೂದೆ: ವಾಪಸ್

ಕಾಸರಗೋಡು: ಕೇರಳ ರಾಜ್ಯದ ಶಾಲೆಗಳಲ್ಲಿ ಮಲಯಾಳ ಭಾಷೆಯನ್ನು ಪ್ರಥಮ ಭಾಷೆಯಾಗಿ ಕಡ್ಡಾಯಗೊಳಿಸಿ ಕೇರಳದ ಹಿಂದಿನ ಐಕ್ಯರಂಗ ಸರ್ಕಾರ ಮಂಡಿಸಿದ್ದ ವಿಧೇಯಕಕ್ಕೆ ಅನುಮತಿ ನೀಡಲು ರಾಷ್ಟ್ರಪತಿ ದ್ರೌಪದಿ ಮುರ್ಮು ನಿರಾಕರಿಸಿದ್ದಾರೆ.

ಮಸೂದೆಯ ವಿರುದ್ಧ ಹೋರಾಟ ನಡೆಸಿದ್ದ ಕನ್ನಡ ಮತ್ತು ತಮಿಳು ಭಾಷಾ ಪರ ಸಂಘಟನೆಗಳ ಪ್ರತಿನಿಧಿಗಳು 'ರಾಜ್ಯದ ಕನ್ನಡ ಮತ್ತು ತಮಿಳು ಭಾಷಾ ಅಲ್ಪಸಂಖ್ಯಾತರ ಮೂಲಭೂತ ಹಕ್ಕು ನಿಷೇಧಿಸಲಾಗುತ್ತಿದೆ' ಎಂದು ಆರೋಪಿಸಿದ್ದರು. ಆಗ ಕೇರಳದ ರಾಜ್ಯಪಾಲರಾಗಿದ್ದ ಪಿ.ಸದಾಶಿವನ್ ಮಸೂದೆಗೆ ಅನುಮತಿ ನೀಡದೇ, ರಾಷ್ಟ್ರಪತಿ ಅವರ ಪರಿಶೀಲನೆಗೆ ಕಳುಹಿಸಿದ್ದರು.

ಈ ಮೂಸೂದೆ ಜಾರಿಗೊಂಡರೆ ರಾಜ್ಯದ ಎಲ್ಲ ಶಾಲೆಗಳಲ್ಲೂ ಮಲಯಾಳ ಭಾಷೆಯನ್ನು ಒಂದನೇ ಭಾಷೆಯಾಗಿ ಕಲಿಸಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಜಿಲ್ಲಾ ನ್ಯಾಯಾಲಯಗಳ ವ್ಯವಹಾರಗಳು, ಕೇರಳ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಮಲಯಾಳದಲ್ಲಿಯೇ ನಡೆಸಬೇಕು ಎಂಬ ಅಂಶಗಳು ಈ ಮಸೂದೆಯಲ್ಲಿವೆ.

ಕೋವಿಡ್: 63 ವರ್ಷದ ವ್ಯಕ್ತಿ ಸಾವು

ಬೆಂಗಳೂರು: ನಗರದ ಖಾಸಗಿ ಆಸ್ಪತ್ರೆಯಲ್ಲಿ ಇದೇ 29ರಂದು ಮರಣ ಹೊಂದಿದ 63 ವರ್ಷದ ವ್ಯಕ್ತಿಯೊಬ್ಬರು ಕೋವಿಡ್ ಪೀಡಿತರಾಗಿದ್ದರು ಎಂದು ಪರೀಕ್ಷಾ ವರದಿ ದೃಢಪಡಿಸಿದೆ.

ಇದರಿಂದಾಗಿ ರಾಜ್ಯದಲ್ಲಿ ಈ ವರ್ಷ ವರದಿಯಾದ ಒಟ್ಟು ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ. ಕ್ಯಾನ್ಸರ್ ಪೀಡಿತರಾಗಿದ್ದ ಅವರು, ಕಿಮೊಥೆರಪಿ ಪಡೆಯುತ್ತಿದ್ದರು. ಇದೇ 21ರಂದು ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಅಸ್ವಸ್ಥಗೊಂಡಿದ್ದ ಅವರಿಗೆ ಕೋವಿಡ್ ಪರೀಕ್ಷೆ ನಡೆಸಲು ಗಂಟಲ ದ್ರವದ ಮಾದರಿ ಸಂಗ್ರಹಿಸಲಾಗಿತ್ತು. ಪರೀಕ್ಷೆ ವರದಿಯಲ್ಲಿ ಸೋಂಕಿತರಾಗಿರುವುದು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಅಸ್ಸಾಂ, ಅರುಣಾಚಲದಲ್ಲಿ ಮಳೆ: 14 ಸಾವು

ಗುವಾಹಟಿ/ ಇಟಾನಗರ (ಪಿಟಿಐ): ಮಳೆ ಸಂಬಂಧಿತ ಅವಘಡಗಳಿಂದಾಗಿ ಅರುಣಾಚಲ ಪ್ರದೇಶ ಮತ್ತು ಅಸ್ಸಾಂನಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದ್ದು, 14 ಮಂದಿ ಮೃತಪಟ್ಟಿದ್ದಾರೆ.

ಅಸ್ಸಾಂನಲ್ಲಿ 24 ತಾಸಿನಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಸಂಭವಿಸಿದ ಭೂಕುಸಿತದಲ್ಲಿ ಸಿಲುಕಿ ಐವರು ಮೃತಪಟ್ಟಿದ್ದಾರೆ. ರಾಜ್ಯದ ಆರು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ಶನಿವಾರ ತಿಳಿಸಲಾಗಿದೆ.

10,000ಕ್ಕೂ ಅಧಿಕ ಮಂದಿ ಸಂಕಷ್ಟಕ್ಕೆ ಸಿಲುಕಿದ್ದು, ಸಂತ್ರಸ್ತರಿಗಾಗಿ ಎರಡು ಶಿಬಿರಗಳು ಮತ್ತು ಒಂದು ಪರಿಹಾರ ಸಾಮಗ್ರಿ ವಿತರಣಾ ಕೇಂದ್ರವನ್ನು ತೆರೆಯಲಾಗಿದೆ.

ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣೆ ಪ್ರಾಧಿಕಾರವು, 'ಕಾಮರೂಪ್ ಮೆಟ್ರೊಪಾಲಿಟನ್ ಜಿಲ್ಲೆಯಲ್ಲಿ ಈ ಸಾವುಗಳು ಸಂಭವಿಸಿವೆ' ಎಂದು ತಿಳಿಸಿದೆ.

> **ಅರುಣಾಚಲ ಪ್ರದೇಶ, ಮೇಘಾಲಯದಲ್ಲೂ ಭಾರಿ ಮಳೆಯಾಗುತ್ತಿರುವುದು ಅಸ್ಸಾಂನಲ್ಲಿ ಅದರಲ್ಲೂ ಗುವಾಹಟಿಯಲ್ಲಿ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ**
>
> **ಹಿಮಂತ್ ಬಿಸ್ವಾ ಶರ್ಮಾ,** ಮುಖ್ಯಮಂತ್ರಿ

ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಸಿಬ್ಬಂದಿ ಸಂಕಷ್ಟದಲ್ಲಿ ಸಿಲುಕಿರುವ ಜನರ ಸ್ಥಳಾಂತರ ಮಾಡುವ ಕಾರ್ಯದಲ್ಲಿ ನಿರತರಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸರ್ಕಾರಿ ನೌಕರರಿಗೆ ರಜೆ: ಕಾಮರೂಪ್ ಮತ್ತು ಕಾಮರೂಪ್ ಮೆಟ್ರೊಪಾಲಿಟನ್ ಜಿಲ್ಲೆಗಳ ಸರ್ಕಾರಿ ನೌಕರರಿಗೆ ಶನಿವಾರ ವಿಶೇಷ ಸಾಂದರ್ಭಿಕ ರಜೆ ನೀಡಲಾಗಿದೆ. ಎರಡು ಜಿಲ್ಲೆಗಳ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿದೆ.

ಭಾರಿ ಮಳೆ ಮತ್ತು ಗಾಳಿಯಿಂದಾಗಿ ಶುಕ್ರವಾರ ಗುವಾಹಟಿ ವಿಮಾನ ನಿಲ್ದಾಣದಲ್ಲಿ ವಿಮಾನ ಸೇವೆಯಲ್ಲಿ ವ್ಯತ್ಯಯ ಉಂಟಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅರುಣಾಚಲದಲ್ಲಿ 9 ಮಂದಿ ಸಾವು: ಕಳೆದ ಕೆಲವು ದಿನಗಳಿಂದ ಅರುಣಾಚಲ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದ್ದು, ಇದರಿಂದ ಸಂಭವಿಸಿದ ಪ್ರವಾಹ ಮತ್ತು ಭೂಕುಸಿತದಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಪೂರ್ವ ಕಮೆಂಗ್ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ದಿಢೀರ್ ಭೂಕುಸಿತದಿಂದಾಗಿ ವಾಹನವು ರಸ್ತೆಯಿಂದ ಉರುಳಿ ಕಂದಕಕ್ಕೆ ಬಿದ್ದ ಪರಿಣಾಮ ಎರಡು ಕುಟುಂಬದ ಏಳು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಳಗಿನ ಸುಬನ್‌ಸಿರಿ ಜಿಲ್ಲೆಯಲ್ಲಿ ಗುರುವಾರ ತಡರಾತ್ರಿ ಸಂಭವಿಸಿದ ಭೂಕುಸಿತದಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ.

ಮೇಲಿನ ಸುಬನ್‌ಸಿರಿ ಜಿಲ್ಲೆಯ ಪ್ರವಾಹದ ನೀರಿನಿಂದಾಗಿ ಜಿಲ್ಲಾ ಕೇಂದ್ರವಾದ ದಾಪೋರಿಜೋದಲ್ಲಿ ಅಪಾರ ಪ್ರಮಾಣದ ಹಾನಿಯಾಗಿದೆ. ಸಿಗಿನ್ ನದಿಯು ಉಕ್ಕಿ ಹರಿದ ಪರಿಣಾಮ ತಗ್ಗು ಪ್ರದೇಶಗಳು ನೀರಿನಿಂದ ಆವೃತವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಕ್ಕಿಂ ರಾಜಧಾನಿ ಗ್ಯಾಂಗ್ಟಕ್ ನಲ್ಲಿ ಪ್ರವಾಸಕ್ಕೆ ಬಂದಿದ್ದ 500ಕ್ಕೂ ಹೆಚ್ಚಿನ ಪ್ರವಾಸಿಗರು ಪ್ರವಾಹದಿಂದ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆ.

ಕೇರಳ: ನೂರಾರು ಜನರ ಸ್ಥಳಾಂತರ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಮಳೆಯ ಅಬ್ಬರ ಜೋರಾಗಿದ್ದು, ತಗ್ಗು ಪ್ರದೇಶಗಳ ನೂರಾರು ಜನರನ್ನು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಕಾಸರಗೋಡಿನಲ್ಲಿ ಮಧುವಾಹಿನಿ ನದಿಯು ತುಂಬಿ ಹರಿಯುತ್ತಿದ್ದು, ಹಲವು ಪ್ರದೇಶಗಳ ರಸ್ತೆಗಳು, ಮನೆಗಳು ಜಲಾವೃತವಾಗಿವೆ.

ಮನೆಗಳ ನೆಲಮಹಡಿಗೆ ನೀರು ನುಗ್ಗುತ್ತಿದ್ದಂತೆಯೇ ಕೆಲವು ಜನರು ಮೊದಲ ಮಹಡಿಗೆ ಸ್ಥಳಾಂತರಗೊಂಡಿದ್ದಾರೆ.

ಕಣ್ಣೂರಿನಲ್ಲಿ ಹಲವು ಮನೆಗಳ ಮುಂಭಾಗ ಮರದ ಕಂಟ್ರಿ ಬೋಟ್ ಮತ್ತು ಫೈಬರ್ ಬೋಟ್ ಕಟ್ಟಿರುವುದು ಕಂಡುಬರುತ್ತಿದೆ.

ಕೋಟಯಂ ಜಿಲ್ಲೆಯಲ್ಲಿ 46 ಆಶ್ರಯ ಶಿಬಿರಗಳನ್ನು ತೆರೆಯಲಾಗಿದೆ. 1,136 ಮಂದಿ ಇಲ್ಲಿ ನೆಲಸಿದ್ದಾರೆ ಎಂದು ಜಿಲ್ಲೆಯ ಅಧಿಕಾರಿಗಳು ತಿಳಿಸಿದ್ದಾರೆ.

ಆಲಪ್ಪುಳದಲ್ಲಿ 26 ಶಿಬಿರಗಳನ್ನು ತೆರೆಯಲಾಗಿದ್ದು, 851 ಮಂದಿ ಆಶ್ರಯ ಪಡೆದಿದ್ದಾರೆ. ಇಲ್ಲಿ ಶುಕ್ರವಾರ ಒಂದೇ ದಿನ 19 ಮನೆಗಳು ಕುಸಿದುಬಿದ್ದಿದ್ದವು.

ಠಾಣಾಧಿಕಾರಿ, ಸಿಬ್ಬಂದಿಗೆ ಡಿಜಿಪಿ ಸೂಚನೆ

'ಸಕಾರಣವಿದ್ದರಷ್ಟೇ ವಾಹನ ತಪಾಸಣೆ'

ಪ್ರಜಾವಾಣಿ ವಾರ್ತೆ

ಎಂ.ಎ. ಸಲೀಂ

ಬೆಂಗಳೂರು: ಸಕಾರಣವಿದ್ದರಷ್ಟೇ ವಾಹನಗಳ ದಾಖಲೆಗಳನ್ನು ಪೊಲೀಸರು ಪರಿಶೀಲನೆ ನಡೆಸಬೇಕೇ ವಿನಾ, ಅನಗತ್ಯವಾಗಿ ತಪಾಸಣೆ ನಡೆಸಬಾರದು ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಠಾಣಾ ವ್ಯಾಪ್ತಿಯ ಅಧಿಕಾರಿ ಮತ್ತು ಸಿಬ್ಬಂದಿಗೆ ಸೂಚನೆ ನೀಡಿದ್ದಾರೆ.

ಮಂಡ್ಯದಲ್ಲಿ ಮಗು ಸಾವು ಹಾಗೂ ದಾವಣಗೆರೆಯಲ್ಲಿ ಪೊಲೀಸ್ ಸಿಬ್ಬಂದಿಗೆ ಕ್ಯಾಂಟರ್ ಚಾಲಕ ಡಿಕ್ಕಿ ಹೊಡೆದ ಪ್ರಕರಣವನ್ನು ಉಲ್ಲೇಖಿಸಿ ಆದೇಶ ಹೊರಡಿಸಿರುವ ಅವರು, ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲಿಸುವ ವೇಳೆ ರಸ್ತೆ ಸುರಕ್ಷತಾ ಕ್ರಮಗಳನ್ನು ಗಮನದಲ್ಲಿರಿಸಿಕೊಳ್ಳುತ್ತಿಲ್ಲ. ಇದರಿಂದ ಸಾರ್ವಜನಿಕರ ಹಾಗೂ ಪೊಲೀಸರ ಜೀವಕ್ಕೆ ಕುತ್ತು ಉಂಟಾಗುತ್ತಿದೆ. ಹಾಗಾಗಿ ಅಧಿಕಾರಿ, ಸಿಬ್ಬಂದಿಗೆ ಕೆಲವು ನಿರ್ದೇಶನಗಳನ್ನು ಪಾಲಿಸುವಂತೆ ಹೇಳಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಕಂಡುಬಂದಾಗ ಮಾತ್ರವೇ ವಾಹನಗಳನ್ನು ನಿಲ್ಲಿಸಿ ಪ್ರಕರಣ ದಾಖಲಿಸಬೇಕು. ಹೆದ್ದಾರಿಗಳಲ್ಲಿ ಜಿಗ್ ಜಾಗ್ ಬ್ಯಾರಿಕೇಡ್‌ಗಳನ್ನು ಹಾಕಿ ವಾಹನಗಳನ್ನು ತಡೆಯಬಾರದು. ರಸ್ತೆ ಮಧ್ಯೆ ದಿಢೀರ್ ಅಡ್ಡ ಬಂದು ವಾಹನ ನಿಲ್ಲಿಸುವಂತೆ ಹೇಳಬಾರದು ಹಾಗೂ ಬೈಕ್‌ನ ಹಿಂಬದಿ ಸವಾರನನ್ನು ಹಿಡಿದು ಎಳೆಯುವುದು ಹಾಗೂ ವಾಹನದ ಕೀಲಿ ಕೈ ತೆಗೆದುಕೊಳ್ಳುವುದನ್ನು ಮಾಡಬಾರದು ಎಂದು ಸ್ಪಷ್ಟ ಸೂಚನೆ ನೀಡಿದ್ದಾರೆ.

ವೇಗವಾಗಿ ವಾಹನ ಚಲಾಯಿಸಿಕೊಂಡು ಬರುವ ಸವಾರರನ್ನು ಬೆನ್ನಟ್ಟದೇ ಆ ವಾಹನಗಳ ನೋಂದಣಿ ಸಂಖ್ಯೆ ಗುರುತು ಮಾಡಿ, ವಿವಿಧ ನಿಯಂತ್ರಣ ಕೊಠಡಿಗಳಿಗೆ ಮಾಹಿತಿ ರವಾನಿಸಿ, ವಾಹನ ಸವಾರನ ಪತ್ತೆಹಚ್ಚಿ ಪ್ರಕರಣ ದಾಖಲಿಸಬೇಕು. ವಾಹನಗಳ ತಪಾಸಣೆ ವೇಳೆ ಪೊಲೀಸರು ಸುರಕ್ಷತೆಗಾಗಿ ರಿಫ್ಲೆಕ್ಟಿವ್ ಜಾಕೆಟ್ ಧರಿಸಬೇಕು ಮತ್ತು ಬಾಡಿ ವೋರ್ನ್ ಕ್ಯಾಮೆರಾ ಧರಿಸಬೇಕು ಎಂದು ಹೇಳಿದ್ದಾರೆ.

ರಾಜ್ಯ, ರಾಷ್ಟ್ರೀಯ ಹೆದ್ದಾರಿ ಹಾಗೂ ಇತರೆ ರಸ್ತೆಗಳಲ್ಲಿ ಯಾವುದೇ ಕಾರಣಕ್ಕೂ ಅತಿ ವೇಗವಾಗಿ ಚಲಿಸುವ ವಾಹನಗಳನ್ನು ತಡೆಯುವ ಪ್ರಯತ್ನ ಮಾಡಬಾರದು ಹಾಗೂ ಇಂತಹ ವಾಹನಗಳ ವಿರುದ್ಧ ಎಫ್‌ಟಿವಿಆರ್ ದಾಖಲಿಸಲು ತಂತ್ರಜ್ಞಾನ ಆಧಾರಿತ ನಿಯಮಗಳ ಜಾರಿ ಅನುಸರಿಸಬೇಕು. ರಾತ್ರಿ ಮತ್ತು ತಡರಾತ್ರಿಯಲ್ಲಿ ಸಂಚಾರ ಜಂಕ್ಷನ್ ಬದಿಯೇ ವಾಹನ ತಪಾಸಣೆ ಮಾಡಬೇಕು. ವಾಹನ ವೇಗ ತಗ್ಗಿಸಲು ತಪಾಸಣೆ ಸ್ಥಳದ ಸುಮಾರು 100–150 ಮೀಟರ್ ಮೊದಲೇ ರಿಫ್ಲೆಕ್ಟಿವ್ ರಬ್ಬರ್ ಕೋನ್ ಮತ್ತು ಸುರಕ್ಷತಾ ಸಲಕರಣೆ ಅಳವಡಿಸುವಂತೆ ಸೂಚಿಸಿದ್ದಾರೆ.

ಮುಕ್ತ ವಿ.ವಿ: ಕೌಶಲ ತರಬೇತಿ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಆರಂಭಗೊಂಡಿರುವ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯೂಚರ್ ಸ್ಕಿಲ್ಸ್' (ಭಾರತೀಯ ಭವಿಷ್ಯದ ಕೌಶಲಗಳ ಸಂಸ್ಥೆ) ಉದ್ಘಾಟನೆಗೊಂಡಿತು.

ಕೆಎಸ್‌ಒಯು, ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ ಹಾಗೂ ಕೇಂದ್ರ ಸರ್ಕಾರದ ಸ್ಕಿಲ್ ಇಂಡಿಯಾ ಯೋಜನೆಯ ಸಹಯೋಗದಲ್ಲಿ ಪ್ರಾರಂಭಗೊಂಡಿರುವ ಈ ಕೇಂದ್ರವು ಗ್ರಾಮೀಣ ಯುವಜನರಿಗೆ ಭವಿಷ್ಯದಲ್ಲಿ ಬೇಡಿಕೆ ಇರುವ ಕೌಶಲಗಳ ತರಬೇತಿ ನೀಡುವ ಆಶಯ ಹೊಂದಿದೆ.

'ಕೃತಕ ಬುದ್ಧಿಮತ್ತೆ(ಎಐ)ಯಂತಹ ತಂತ್ರಜ್ಞಾನಗಳ ಬಳಕೆ ಹೆಚ್ಚುತ್ತಿರುವ ಈ ಕಾಲದ ಅಗತ್ಯಗಳಿಗೆ ತಕ್ಕಂತೆ, ಯುವಜನರಿಗೆ ಕೈಗಾರಿಕಾ ಕೇಂದ್ರಿತ ಕೌಶಲವನ್ನು ಒದಗಿಸುವ ಕೆಲಸವನ್ನು ಕೇಂದ್ರವು ಮಾಡಲಿದೆ. ಹಲವು ಬಗೆಯ ತರಬೇತಿಗಳು ಒಂದೇ ವೇದಿಕೆಯಲ್ಲಿ ಸಿಗಲಿದೆ. 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕೌಶಲ ಶಿಕ್ಷಣ ಒದಗಿಸುವ ಗುರಿ ಇದೆ' ಎಂದು ಎಥ್ನೋಟೆಕ್ ಗ್ರೂಪ್‌ನ ಸಿಇಒ ಕಿರಣ್ ರಾಜಣ್ಣ ತಿಳಿಸಿದರು.

ಉದ್ಘಾಟಿಸಿದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮಾತನಾಡಿ, 'ದೇಶವು ಶೇ 65ರಷ್ಟು ಯುವಜನರನ್ನು ಹೊಂದಿದ್ದು, 2047ರ ಹೊತ್ತಿಗೆ ವಿಕಸಿತ ಭಾರತ ನಿರ್ಮಾಣದ ಗುರಿ ತಲುಪಲು ಇವರಿಗೆಲ್ಲ ಉತ್ತಮ ಕೌಶಲ ತರಬೇತಿ ನೀಡುವ ಅಗತ್ಯವಿದೆ. ಈ ಆಶಯಕ್ಕೆ ಪೂರಕವಾಗಿ ಈ ಕೇಂದ್ರವು ಕಾರ್ಯನಿರ್ವಹಿಸಲಿ' ಎಂದು ಆಶಿಸಿದರು.

'ನಾನು ರಾಜಕಾರಣಕ್ಕೆ ಬರುವ ಮುನ್ನ ಬಿರ್ಲಾ ಕಂಪನಿಯಲ್ಲಿ ಕಾರ್ಮಿಕನಾಗಿದ್ದೆ. ಫಿಲ್ಟರ್, ವೆಲ್ಡಿಂಗ್ ಸೇರಿದಂತೆ ಹಲವು ತಳಮಟ್ಟದ ಕೆಲಸಗಳನ್ನು ನಿರ್ವಹಿಸುವ ಮೂಲಕ ನನ್ನ ಕೌಶಲ ಹೆಚ್ಚಿಸಿಕೊಂಡೆ. ಇದು ಮುಂದೆ ಉಪಯೋಗಕ್ಕೆ ಬಂದಿತು' ಎಂದು ನೆನೆದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಬಿಜಿಎಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ಕೆಎಸ್‌ಡಿಸಿ ವ್ಯವಸ್ಥಾಪಕ ನಿರ್ದೇಶಕ ಎನ್.ಎಂ. ನಾಗರಾಜ, ಕೆಎಸ್‌ಒಯು ಕುಲಪತಿ ಪ್ರೊ.ವಿ. ಶರಣಪ್ಪ ಹಲಸೆ, ಕುಲಸಚಿವ ಎಸ್.ಕೆ. ನವೀನ್‌ಕುಮಾರ್ ಪಾಲ್ಗೊಂಡಿದ್ದರು.

ಲಿಫ್ಟ್‌ನಲ್ಲಿ ಸಿಲುಕಿದ ರಾಜ್ಯಪಾಲರು

ರಾಜ್ಯಪಾಲರು ಕೇಂದ್ರದ ಉದ್ಘಾಟನೆ ಸಂದರ್ಭದಲ್ಲಿ ಕೆಲ ನಿಮಿಷ ಲಿಫ್ಟ್‌ನಲ್ಲಿ ಸಿಲುಕಿದ್ದರು.

ಆತಂಕಗೊಂಡ ರಾಜ್ಯಪಾಲರ ಭದ್ರತಾ ಸಿಬ್ಬಂದಿ ಕೂಡಲೇ ಬೇಸ್‌ಮೆಂಟ್‌ಗೆ ತೆರಳಿ ಲಿಫ್ಟ್ ಬಾಗಿಲು ತೆರೆಯಲು ಪ್ರಯತ್ನಿಸಿದರಾದರೂ ಬಾಗಿಲು ತೆರೆದುಕೊಳ್ಳಲಿಲ್ಲ. ಅಲ್ಲಿನ ತಾಂತ್ರಿಕ ಸಿಬ್ಬಂದಿ ಕೂಡಲೇ ಎಚ್ಚೆತ್ತು ಕೆಲವು ನಿಮಿಷಗಳಲ್ಲಿ ಲಿಫ್ಟ್ ಸರಿಪಡಿಸಿದರು.ಬೇಸ್‌ಮೆಂಟ್‌ನಲ್ಲಿ ಲಿಫ್ಟ್‌ನಿಂದ ಹೊರಬಂದ ರಾಜ್ಯಪಾಲರು ಮೆಟ್ಟಿಲು ಏರಿ ಮೊದಲ ಮಹಡಿಗೆ ತೆರಳಿದರು.

ಅಬ್ದುಲ್ ರಹಿಮಾನ್ ಹತ್ಯೆ ಖಂಡಿಸಿ ಎಸ್‌ಕೆಎಸ್‌ಎಸ್‌ಎಫ್ ಪ್ರತಿಭಟನೆ

ಕೊಲೆ ಆರೋಪಿಗಳ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೊಳತ್ತಮಜಲುವಿನ ಅಬ್ದುಲ್ ರಹಿಮಾನ್ ಕೊಲೆ ಮಾಡಿದ ಎಲ್ಲ ಆರೋಪಿಗಳನ್ನು ಹಾಗೂ ಕೊಲೆಗೆ ಪ್ರಚೋದನೆ ನೀಡಿದವರನ್ನು ಬಂಧಿಸಿ ಗರಿಷ್ಠ ಕಾನೂನು ಶಿಕ್ಷೆ ನೀಡಬೇಕು ಎಂದು ಸಮಸ್ತ ಕೇರಳ ಸುನ್ನಿ ಸ್ಟೂಡೆಂಟ್ ಫೆಡರೇಷನ್ (ಎಸ್‌ಕೆಎಸ್‌ಎಸ್‌ಎಫ್) ನವರು ಇಲ್ಲಿ ಪ್ರತಿಭಟನೆ ನಡೆಸಿದರು.

ಶನಿವಾರ ಇಲ್ಲಿನ ಕ್ಲಾಕ್ ಟವರ್ ಎದುರು ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಮುಖಂಡರು, 'ನಾವು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದವರು, ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ನಮಗೆ ನ್ಯಾಯ ಕೊಡಿಸಬೇಕು. ಕರಾವಳಿಯ ಕೋಮು ದ್ವೇಷ ತಾರ್ಕಿಕ ಅಂತ್ಯ ಕಾಣಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಲಕ್ಷಾಂತರ ಕಾರ್ಯಕರ್ತರನ್ನು ಒಗ್ಗೂಡಿಸಿ ಬೀದಿಗಿಳಿದು ಹೋರಾಟ ನಡೆಸುತ್ತೇವೆ' ಎಂದರು.

ಎಸ್‌ಕೆಎಸ್‌ಎಸ್‌ಎಫ್ ಮುಖಂಡ ಉಮ್ಮರ್ ದಾರಿಮಿ ತೋಕೆ ಮಾತನಾಡಿ, 'ಎಸ್‌ಕೆಎಸ್‌ಎಸ್‌ಎಫ್ ಕಾರ್ಯಕರ್ತರಾಗಿದ್ದ ಅಬ್ದುಲ್ ರಹಿಮಾನ್, ಸಂಘಟನೆಯ ಆಶಯದಂತೆ ಸಾಮಾಜಿಕ ಕೆಲಸಗಳಲ್ಲಿ ಸಕ್ರಿಯರಾಗಿದ್ದರು. ಕೊಳತ್ತಮಜಲುವಿನ ತನ್ನ ಊರಿನಲ್ಲಿ ಸೌಹಾರ್ದ ಕೊಂಡಿಯಾಗಿದ್ದ ಅವರು, ಊರಿನ ಶಾರದೋತ್ಸವದ ವೇಳೆ ಶಾರದ ಮೂರ್ತಿ ಮೆರವಣಿಗೆ ಕೊಂಡೊಯ್ಯುವ ವಾಹನದ ಚಾಲಕನಾಗಿ 22 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದರು. ಗೆಳೆಯರನ್ನು ಸಂಘಟಿಸಿ ಮೆರವಣಿಗೆಯ ವೇಳೆ ತಂಪು ಪಾನೀಯ ವಿತರಿಸಿ ಸೌಹಾರ್ದ ಮೆರೆದವರು. ಅಬ್ದುಲ್ ರಹಿಮಾನ್ ಕೊಲೆಗಡುಕರಿಗೂ ಈ ವ್ಯಕ್ತಿ ಅಮಾಯಕ ಎಂಬುದು ಗೊತ್ತಿದೆ' ಎಂದರು.

'ಕೋಮು ಪ್ರಚೋದನೆ ಭಾಷಣ ಮಾಡುವವರನ್ನು ಹೆಡೆಮುರಿ ಕಟ್ಟಬೇಕು. ಇಂತಹ ಭಾಷಣ ಮಾಡುವವರ ಮೇಲೆ ಪ್ರಕರಣ ದಾಖಲಿಸಿದರೆ ಅವರಿಗೆ ಜಾಮೀನು ಸಿಗುತ್ತದೆ ಎಂದು ಸಚಿವರೊಬ್ಬರು ಹೇಳುತ್ತಾರೆ. ನಿಮಗೆ ಅಧಿಕಾರ ನೀಡಿದ್ದು, ಬಣ್ಣಿಸಿಕೊಂಡು ಕುಳಿತುಕೊಳ್ಳಲು ಅಲ್ಲ. ಅಧಿಕಾರದಲ್ಲಿ ಕುಳಿತುಕೊಂಡು ಕಠಿಣ ಕ್ರಮ ಕೈಗೊಳ್ಳಿ' ಎಂದು ಆಕ್ರೋಶದಿಂದ ಹೇಳಿದರು.

ಎಸ್‌ಕೆಎಸ್‌ಎಸ್‌ಎಫ್ ಮುಖಂಡ ರಿಯಾಜ್ ರಹ್ಮಾನಿ ಮಾತನಾಡಿ, 'ರಾಜಕೀಯ ಮುಖಂಡರು ಪರಿಹಾರ ಘೋಷಿಸಿ ಹೋಗುತ್ತಾರೆ, ನಂತರ ಅವರ ಕುಟುಂಬದ ಕಷ್ಟ, ಕಾರ್ಪಣ್ಯಗಳಿಗೆ ಸ್ಪಂದಿಸುವುದಿಲ್ಲ ಎಂದರು.

ಅಬ್ದುಲ್ ರಹಿಮಾನ್ ಹತ್ಯೆ ಖಂಡಿಸಿ ಮಂಗಳೂರಿನ ಕ್ಲಾಕ್ ಟವರ್ ಬಳಿ ಶನಿವಾರ ಎಸ್‌ಕೆಎಸ್‌ಎಸ್‌ಎಫ್ ಸಂಘಟನೆ ನೇತೃತ್ವದಲ್ಲಿ ಪ್ರತಿಭಟನಾ ಸಮಾವೇಶ ನಡೆಯಿತು ಪ್ರಜಾವಾಣಿ ಚಿತ್ರ

ಮತ್ತೆ ಇಬ್ಬರ ಸೆರೆ

ಮಂಗಳೂರು: ಕೊಳತ್ತಮಜಲುವಿನ ಅಬ್ದುಲ್ ರಹಿಮಾನ್ ಕೊಲೆ ಮತ್ತು ಅವರ ಜೊತೆಗಿದ್ದ ಕಲಂದರ್ ಶಾಫಿ ಅವರ ಮೇಲೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಟ್ವಾಳ ತಾಲ್ಲೂಕು ತಂಕಬೆಳ್ಳೂರು ಗ್ರಾಮದ ಸುಮಿತ್ ಆಚಾರ್ಯ (27), ಬಡಗಬೆಳ್ಳೂರು ಗ್ರಾಮದ ರವಿರಾಜ್ (23) ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ. ಈಗಾಗಲೇ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು.

ದ್ವೇಷ ಭಾಷಣ ಕಡಿವಾಣಕ್ಕೆ ಕಾನೂನು: ಸಚಿವ

'ಜಾತಿ- ಧರ್ಮದ ಹೆಸರಿನಲ್ಲಿ ನಿಂದನೆ ಮತ್ತು ಪ್ರಚೋದನೆ, ದ್ವೇಷ ಭಾಷಣಗಳಿಗೆ ಕಡಿವಾಣ ಹಾಕಲು ಕಠಿಣ ಕಾನೂನಿನ ಅಗತ್ಯವಿದೆ. ಪ್ರತ್ಯೇಕ ಕಾನೂನು ರಚನೆ ಸಂಬಂಧ ಮುಂದಿನ ಅಧಿವೇಶನದಲ್ಲಿ ಚರ್ಚಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ದಿನೇಶ್ ಗುಂಡೂರಾವ್

ಶನಿವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ದ್ವೇಷ ಭಾಷಣ ಮಾಡುವವರ ಮೇಲೆ ಪ್ರಕರಣ ದಾಖಲಿಸಿದರೂ, ಅವರಿಗೆ ಸುಲಭವಾಗಿ ನ್ಯಾಯಾಲಯದಲ್ಲಿ ಜಾಮೀನು ಸಿಗುತ್ತದೆ. ಅವರಿಗೆ ಸಂಘಟನೆಗಳ ಬೆಂಬಲ ಇದೆ. ಅವರಿಗೆ ವಕೀಲರನ್ನು ನೇಮಿಸಿಕೊಡಲಾಗುತ್ತದೆ, ನ್ಯಾಯಾಧೀಶರ ಬಳಿ ಮಾತನಾಡುತ್ತಾರೆ. ಹೀಗೆ ಅವರಿಗೆ ಬೇಕಾದ ಎಲ್ಲ ಸೌಲಭ್ಯ ಒದಗಿಸುವ ವ್ಯವಸ್ಥೆ ಇದೆ' ಎಂದರು.

'ಈ ರೀತಿ ಮಾತನಾಡುವವರಿಗೆ ರಾಜಕೀಯ ರಕ್ಷಣೆ ಸಿಗುತ್ತಿದೆ. ದ್ವೇಷ ಭಾಷಣ ಮಾಡುವವರಲ್ಲಿ ದೊಡ್ಡ ನಾಯಕರೇ ಇದ್ದಾರೆ. ಕಲಬುರಗಿಯಲ್ಲಿ ಬಿಜೆಪಿ ನಾಯಕರೊಬ್ಬರು ಇಂತಹದೇ ಮಾತನ್ನು ಆಡಿದ್ದಾರೆ. ಕಾನೂನು ಬದಲಾವಣೆಯಿಂದ ಮಾತ್ರ ಇವನ್ನು ನಿಯಂತ್ರಣಕ್ಕೆ ತರಲು ಸಾಧ್ಯ. ಕಟ್ಟುನಿಟ್ಟಿನ ಕ್ರಮ ವಹಿಸುವಂತೆ ಮಂಗಳೂರು ಪೊಲೀಸ್ ಕಮಿಷನರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಲಾಗಿದೆ' ಎಂದರು.

ಅಬ್ದುಲ್ ಮನೆಗೆ ಸಚಿವರ ಭೇಟಿ: ಮೃತ ಅಬ್ದುಲ್ ರಹಿಮಾನ್ ಮನೆಗೆ ಸಚಿವ ದಿನೇಶ್ ಗುಂಡೂರಾವ್ ಶುಕ್ರವಾರ ಭೇಟಿ ನೀಡಿದ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಅಬ್ದುಲ್ ರಹಿಮಾನ್ ಹತ್ಯೆ ಸಂದರ್ಭದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಕಲಂದರ್ ಶಾಫಿ ಅವರನ್ನು ಸಚಿವರು ಆಸ್ಪತ್ರೆಯಲ್ಲಿ ಭೇಟಿ ಮಾಡಿದರು.

ಒಪಾಲ್ ಸುಚಾತಾ ವಿಶ್ವಸುಂದರಿ

ಹೈದರಾಬಾದ್ (ಪಿಟಿಐ): ಥಾಯ್ಲೆಂಡ್‌ನ ಒಪಾಲ್ ಸುಚಾತಾ ಚೌಂಗ್‌ಶ್ರೀ ಅವರು 2025ರ ಸಾಲಿನ ವಿಶ್ವ ಸುಂದರಿ ಕಿರೀಟ ಮುಡಿಗೇರಿಸಿಕೊಂಡರು. ಇಥಿಯೋಪಿಯಾದ ಹಾಸೆಟ್ ಡೆರೆಜ್ ಅಡ್ಮಾಸ್ಸು 'ರನ್ನರ್ ಅಪ್' ಆದರು.

ವಿಶ್ವಸುಂದರಿ ಸ್ಪರ್ಧೆಯ 72ನೇ ಆವೃತ್ತಿಯ ಗ್ರ್ಯಾಂಡ್ ಫಿನಾಲೆ ಶನಿವಾರ ಸಂಜೆ ಇಲ್ಲಿನ ಹೈಟೆಕ್ ಎಕ್ಸಿಬಿಷನ್ ಸೆಂಟರ್‌ನಲ್ಲಿ ನಡೆಯಿತು.

ಭಾರತವನ್ನು ಪ್ರತಿನಿಧಿಸಿದ್ದ ನಂದಿನಿ ಗುಪ್ತಾ ಅವರು ಅಗ್ರ 8ರಲ್ಲಿ ಸ್ಥಾನ ಪಡೆಯುವ ಮುನ್ನವೇ ಹೊರಬಿದ್ದರು.

'ಪ್ಲಾಸ್ಟಿಕ್ ತ್ಯಜಿಸಿ'

ಕೆ.ಆರ್.ಪುರ: 'ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಅನ್ನು ಬಳಸದಂತೆ ನಾವೆಲ್ಲ ಸಂಕಲ್ಪ ಮಾಡೋಣ' ಎಂದು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮಹದೇವಪುರ ವಿಭಾಗದ ಪರಿಸರ ಅಧಿಕಾರಿ ಡಾ.ಕೆ.ಎಂ.ರಾಜು ತಿಳಿಸಿದರು.

ಗರುಡಾಚಾರ್ ಪಾಳ್ಯದಲ್ಲಿ ಆಯೋಜಿಸಿದ್ದ ಪ್ಲಾಸ್ಟಿಕ್ ಮುಕ್ತ ಪರಿಸರಕ್ಕಾಗಿ ಸೈಕ್ಲೋಥಾನ್ ಹಾಗೂ ಓಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಿಥಿಕ ಫೌಂಡೇಶನ್ ಅಧ್ಯಕ್ಷ ಪರಿಸರ ಮಂಜು ಮಾತನಾಡಿ, 'ನಾವು ಪರಿಸರವನ್ನು ಎಷ್ಟು ಸ್ವಚ್ಛವಾಗಿಟ್ಟು ಕೊಳ್ಳುತ್ತೇವೋ, ಅದು ಮುಂದಿನ ಪೀಳಿಗೆಗೆ ಸಹಕಾರಿಯಾಗುತ್ತದೆ' ಎಂದು ಹೇಳಿದರು.

ಕಾಲ್ನಡಿಗೆ ಜಾಥಾದಲ್ಲಿ ದೊರೆತ ಪ್ಲಾಸ್ಟಿಕ್ ಬಾಟಲಿಗಳು ಹಾಗೂ ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸಲಾಯಿತು. ಮಹದೇವಪುರದ ಡೆಕಥ್ಲಾನ್‌ನಿಂದ ಕಾಡುಗೋಡಿ ಟ್ರೀ ಪಾರ್ಕ್‌ವರೆಗೂ ಸ್ವಯಂಪ್ರೇರಿತರಾಗಿ ಸುಮಾರು 200ಕ್ಕೂ ಹೆಚ್ಚು ಪರಿಸರ ಪ್ರೇಮಿಗಳು ಸೈಕಲ್ ಜಾಥಾದಲ್ಲಿ ಭಾಗಿಯಾಗಿದ್ದರು.

ನಾರಾಯಣ ಹೆಲ್ತ್ ಸಂಸ್ಥೆ ಅಧ್ಯಕ್ಷ ಡಾ. ದೇವಿ ಶೆಟ್ಟಿ ಹೇಳಿಕೆ

ಮನೆಗೆಲಸದ ಕುಟುಂಬಗಳಿಗೆ ಆರೋಗ್ಯ ವಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡು ಬಡವರಿಗೂ ಸಮಗ್ರ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ನಾರಾಯಣ ಹೃದಯಾಲಯ ಮನೆಗೆಲಸ ಮಾಡುವ ಐದು ಸಾವಿರ ಕುಟುಂಬಗಳಿಗೆ ಆರೋಗ್ಯ ವಿಮೆ ಒದಗಿಸಲು ಕಾರ್ಯೋನ್ಮುಖವಾಗಿದೆ ಎಂದು ನಾರಾಯಣ ಹೆಲ್ತ್ ಸಂಸ್ಥೆ ಅಧ್ಯಕ್ಷ ಡಾ. ದೇವಿ ಪ್ರಸಾದ್ ಶೆಟ್ಟಿ ಹೇಳಿದ್ದಾರೆ.

ನಗರದಲ್ಲಿ ಶನಿವಾರ ಇನ್ಫೊಸಿಸ್ ಸಹ ಸಂಸ್ಥಾಪಕ ಕೆ.ದಿನೇಶ್ ಅವರ ಆಶ್ರಯ ಹಸ್ತ ಟ್ರಸ್ಟ್‌ನ (ಎಚ್‌ಟಿಯು) 25ನೇ ವಾರ್ಷಿಕೋತ್ಸವದಲ್ಲಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿದ ದೇಶದ ಪ್ರಮುಖ 12 ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ನಾರಾಯಣ ಹೆಲ್ತ್ ಸಂಸ್ಥೆಗೆ ವಿಮಾ ಕಂಪನಿ ಆರಂಭಿಸಲು ಸರ್ಕಾರ ಅನುಮತಿ ನೀಡಿದ್ದು, ಮೊದಲ ಹಂತದಲ್ಲಿ ಪ್ರಾಯೋಗಿಕವಾಗಿ ಮನೆಗೆಲಸ ಮಾಡುವ ಐದು ಸಾವಿರ ಕುಟುಂಬದವರಿಗೆ ಅತಿ ಕಡಿಮೆ ವಂತಿಕೆಯಲ್ಲಿ ಆರೋಗ್ಯ ವಿಮೆ ಒದಗಿಸಲು ತೀರ್ಮಾನಿಸಿದೆ. ಕ್ರಮೇಣ ಈ ಯೋಜನೆಯನ್ನು ಹಂತ ಹಂತವಾಗಿ ವಿಸ್ತರಿಸಲಾಗುವುದು ಎಂದರು.

ಆಶ್ರಯ ಹಸ್ತ ಟ್ರಸ್ಟ್‌ನ 25ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸುಧಾಮೂರ್ತಿ ಅವರನ್ನು ಡಾ. ದೇವಿ ಪ್ರಸಾದ್ ಶೆಟ್ಟಿ ಸ್ವಾಗತಿಸಿದರು

ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಮಾತನಾಡಿ, 'ಆಶ್ರಯ ಹಸ್ತ' ಅಗತ್ಯವಿರುವವರ ಶ್ರೇಯೋಭಿವೃದ್ಧಿಗೆ ನೆರವಾಗುತ್ತಿದೆ. ಮತ್ತೊಬ್ಬರ ಸಂಕಷ್ಟಗಳಿಗೆ ಸ್ಪಂದಿಸುವ, ನೋವು ಆಲಿಸುವ, ಕಣ್ಣೀರು ಒರೆಸುವ ಕೆಲಸವನ್ನು ಮಾಡಿದರೆ ಜೀವನದಲ್ಲಿ ಆತ್ಮತೃಪ್ತಿ ದೊರೆಯುತ್ತದೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಮಾನವೀಯ ಸೇವೆ ಸಲ್ಲಿಸಿದರೆ ಜೀವನ ಸಾರ್ಥಕವಾಗುತ್ತದೆ ಎಂದು ನುಡಿದರು.

ಆಶ್ರಯ ಹಸ್ತ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಕೆ.ದಿನೇಶ್ ಮಾತನಾಡಿದರು. ಇದೇ ವೇಳೆ 'ಸಿ' ಕ್ಯಾಂಪ್ (ಸೆಂಟರ್ ಫಾರ್ ಸೆಲ್ಯೂಲರ್ ಮತ್ತು ಮಾಲಿಕ್ಯುಲಾರ್ ಪ್ಲಾಟ್‌ಫಾರ್ಮ್ಸ್) ನೊಂದಿಗೆ ಹವಾಮಾನ, ಆರೋಗ್ಯ ಮತ್ತು ಕೃಷಿ ಕ್ಷೇತ್ರದಲ್ಲಿ ಕ್ಲಿನಿಕಲ್ ಸಂಶೋಧನೆ ಕೈಗೊಳ್ಳುವ ನಿಟ್ಟಿನಲ್ಲಿ ಆಶ್ರಯ ಹಸ್ತ ಟ್ರಸ್ಟ್ ನ ಟ್ರಸ್ಟಿ ಆಶಾ ದಿನೇಶ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

ದಿವ್ಯ ದಿನೇಶ್, ದೀಕ್ಷಾ ದಿನೇಶ್, ಆಶ್ರಯ ಹಸ್ತ ಟ್ರಸ್ಟ್‌ನ ಪದಾಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಮೇಲ್ಸೇತುವೆ: 3 ತಿಂಗಳ ಗಡುವು

ಬೆಂಗಳೂರು: ಹೊಸಕೆರೆಹಳ್ಳಿ ಜಂಕ್ಷನ್ ಮೇಲ್ಸೇತುವೆ ಕಾಮಗಾರಿಯನ್ನು 3 ತಿಂಗಳಲ್ಲಿ ಮುಗಿಸಬೇಕು, ರಾಜರಾಜೇಶ್ವರಿ ನಗರ ಆರ್ಚ್ ಬಳಿಯ ಮೇಲ್ಸೇತುವೆಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿ ಮುಂದುವರಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಅವರು ಶನಿವಾರ ಪರಿಶೀಲನೆ ನಡೆಸಿದರು.

ಹೊರ ವರ್ತುಲ ರಸ್ತೆಯ ಪಿಇಎಸ್ ಕಾಲೇಜು ಬಳಿಯ ಹೊಸಕೆರೆಹಳ್ಳಿ ಜಂಕ್ಷನ್‌ನಲ್ಲಿ ಕೈಗೆತ್ತಿಕೊಂಡಿರುವ ಮೇಲ್ಸೇತುವೆ ಕಾಮಗಾರಿಗೆ ವೇಗ ನೀಡಿ ಮೂರು ತಿಂಗಳಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಹೊಸರೆರೆಹಳ್ಳಿ ಜಂಕ್ಷನ್‌ನಲ್ಲಿ 500 ಮೀಟರ್ ಉದ್ದದ ಮೇಲ್ಸೇತುವೆ ಕಾಮಗಾರಿ ಪ್ರಗತಿಯಲ್ಲಿದ್ದು, ಈಗಾಗಲೇ ಶೇ 75 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಇನ್ನು ಒಂದು ಭಾಗದಲ್ಲಿ ಡೌನ್ ರ್‍ಯಾಂಪ್ ಕಾಮಗಾರಿ ಪ್ರಗತಿಯಲ್ಲಿದ್ದು, ಸರ್ವೀಸ್ ರಸ್ತೆಯ ವಿಸ್ತರಣೆ ಮಾಡುವ ವಿಚಾರವಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಿ ಸಂಚಾರ ಪೊಲೀಸ್ ವಿಭಾಗದ ಜೊತೆ ಮಾತನಾಡಿ, ತ್ವರಿತಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಾಯಂಡಹಳ್ಳಿ ಜಂಕ್ಷನ್ ಬಳಿಯ ಸರ್ವೀಸ್ ರಸ್ತೆಯ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಅನುಪಯುಕ್ತ ವಸ್ತುಗಳಿರುವುದನ್ನು ಕಂಡು, ಅದನ್ನು ಕೂಡಲೇ ತೆರವು ಮಾಡಲು ಸೂಚಿಸಿದರು. ವೃಷಭಾವತಿ ವ್ಯಾಲಿ ಮೇಲ್ಭಾಗದಲ್ಲಿ ಹೆಚ್ಚುವರಿಯಾಗಿ ಬ್ರಿಡ್ಜ್ ವೆಂಟ್ ನಿರ್ಮಿಸಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಕಾಮಗಾರಿಯನ್ನು ಆರಂಭಿಸಲು ಸೂಚಿಸಿದರು.

ಕಮಲ್ ಹೇಳಿಕೆಗೆ ಭಾವುಕವಾಗಬೇಕಿಲ್ಲ

ಯಾರಿಗೂ ಅವಮಾನವಾಗಿಲ್ಲ: ನಟ ಕಿಶೋರ್ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಕಮಲ್ ಹಾಸನ್ ತುಂಬಾ ತಿಳಿದಂತಹ ಮನುಷ್ಯ. ಅವರು ಏನೂ ಹೇಳಿದ್ದಾರೆ ಎಂದರೆ ಅದ್ಕೊಂದು ತರ್ಕವಿರಲಿದೆ. ಏನೋ ಅರ್ಥ ವಿರಬೇಕು. ಅದೇನೆಂಬುದನ್ನು ಕೇಳಿ ತಿಳಿದುಕೊಳ್ಳಬೇಕು. ಅವರ ಹೇಳಿಕೆಯನ್ನು ಅಷ್ಟೊಂದು ಭಾವುಕವಾಗಿ ನೋಡುವ ಅಗತ್ಯವಿಲ್ಲ' ಎಂದು ಚಲನಚಿತ್ರ ನಟ ಕಿಶೋರ್ ಹೇಳಿದರು.

ಕಿಶೋರ್

'ಕನ್ನಡ ತಮಿಳು ಭಾಷೆಯಿಂದ ಹುಟ್ಟಿದ್ದು' ಎಂಬ ಚಲನಚಿತ್ರ ನಟ ಕಮಲ್ ಹಾಸನ್ ಹೇಳಿಕೆಗೆ ಇಲ್ಲಿ ಶನಿವಾರ ಪ್ರತಿಕ್ರಿಯಿಸಿದ ಅವರು, 'ನನ್ನ ತಾಯಿಯ ಹೊಟ್ಟೆಯಲ್ಲಿ ನಾನು ಜನಿಸಿದೆ ಎಂದರೆ ನನಗೆ ಹಾಗೂ ನನ್ನ ತಾಯಿಗೆ ಅವಮಾನವೇನಲ್ಲ. ಹಾಗೆಯೇ ಕಮಲ್ ಹೇಳಿಕೆಯನ್ನು ಅವಹೇಳನಕಾರಿ ಎಂದೇಕೆ ಭಾವಿಸಬೇಕು?' ಎಂದು ಕೇಳಿದರು.

'ಎಲ್ಲಾ ಭಾಷೆಗಳೂ ಎಲ್ಲಿಂದಲೋ ಹುಟ್ಟಿ ಬಂದಿರುತ್ತವೆ. ಹಾಗೆಂದು ಯಾವುದೂ ಮೇಲೂ ಅಲ್ಲ, ಕೀಳೂ ಅಲ್ಲ. ಕನ್ನಡವೂ ಎಲ್ಲಿಂದಲೋ ಹುಟ್ಟಿ ಬಂದಿದೆ. ಹಾಗೆಯೇ ತಮಿಳು ಕೂಡ ಎಲ್ಲಿಂದಲೂ ಹುಟ್ಟಿ ಬಂದಿದೆ. ಈ ವಿಷಯದಲ್ಲಿ ಜನರನ್ನು ಭಾವುಕವಾಗಿ ರೊಚ್ಚಿಗೆಬ್ಬಿಸಬಾರದು' ಎಂದರು.

'ಈಗಾಗಲೇ ನಮ್ಮಲ್ಲಿ ಭಾಷೆ, ಜಾತಿ, ಧರ್ಮ ಎಲ್ಲವನ್ನೂ ಬಂಡವಾಳವಾಗಿಸಿ-ಕೊಂಡು ರಾಜಕೀಯ ಮಾಡಲಾಗುತ್ತಿದೆ. ಭಾಷೆಯನ್ನು ಭಾವುಕತೆಯಿಂದ ನೋಡದೆ ಭಾಷೆಯಾಗಿ ನೋಡಬೇಕು' ಎಂದು ಹೇಳಿದರು.

'ಕಮಲ್ ಹೇಳಿಕೆಯಿಂದ ಯಾರಿಗೂ ಅವಮಾನವಾಗಿಲ್ಲ' ಎಂದರು.

ವಿಷಾದ ವ್ಯಕ್ತಪಡಿಸಲಿ: ಸಂತೋಷ್ ಹೆಗ್ಡೆ

ದಾವಣಗೆರೆ: 'ಕನ್ನಡ ಭಾಷೆಯು ತಮಿಳಿನಿಂದ ಹುಟ್ಟಿದೆ ಎಂಬ ನಟ ಕಮಲ್ ಹಾಸನ್ ಹೇಳಿಕೆ ಖಂಡನೀಯ. ಇದಕ್ಕಾಗಿ ಅವರು ಸಾರ್ವಜನಿಕವಾಗಿ ವಿಷಾದ ವ್ಯಕ್ತಪಡಿಸಬೇಕು' ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಒತ್ತಾಯಿಸಿದರು.

'ಕರ್ನಾಟಕ ಹಾಗೂ ಕನ್ನಡದ ಬಗೆಗೆ ಕಮಲ್ ಆಡಿರುವ ಮಾತು ಬೇಜವಾಬ್ದಾರಿಯಿಂದ ಕೂಡಿದೆ. ಈ ನುಡಿ ಸ್ವೀಕಾರಾರ್ಹವಲ್ಲ' ಎಂದು ಶನಿವಾರ ತಿಳಿಸಿದರು.

ಸಂತೋಷ್ ಹೆಗ್ಡೆ

'ಕ್ಷಮೆ ಕೇಳುವುದು ಕಮಲ್‌ಗೆ ಬಿಟ್ಟಿದ್ದು'

ಬೆಂಗಳೂರು: 'ಕಮಲ್ ಹಾಸನ್ ಹಿರಿಯ ನಟ. ಅವರಿಗೆ ಏನು ಮಾತನಾಡಬೇಕೆಂದು ನಾವು ಹೇಳಲು ಸಾಧ್ಯವಿಲ್ಲ. ಕ್ಷಮೆ ಕೇಳುವುದು ಅವರಿಗೆ ಬಿಟ್ಟಿದ್ದು. ಕಾರ್ಯಕ್ರಮದಲ್ಲಿ ನಾನು ಇದ್ದೆ ಎಂಬ ಕಾರಣಕ್ಕೆ ವಿಡಿಯೊ ಎಡಿಟ್ ಮಾಡಿ ನನ್ನನ್ನು ವಿವಾದದಲ್ಲಿ ಎಳೆದು ತರುತ್ತಿದ್ದಾರೆ. ಕನ್ನಡವೇ ನನ್ನ ಮೊದಲ ಆದ್ಯತೆ' ಎಂದು ನಟ ಶಿವರಾಜ್ ಕುಮಾರ್ ತಿಳಿಸಿದರು.

ಶಿವರಾಜ್ ಕುಮಾರ್

ಕ್ಷಮೆ ಕೇಳದಿದ್ದರೆ ಬಿಡಲ್ಲ: ತಂಗಡಗಿ

ಬೆಂಗಳೂರು: 'ನಟ ಕಮಲ್ ಹಾಸನ್ ಕ್ಷಮೆ ಕೇಳಲ್ಲ ಅಂದರೆ ಬಿಡುವವರು ಯಾರು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ವಿಷಯವನ್ನು ನಾವು ಸುಮ್ಮನೆ ಬಿಡಲ್ಲ. ಚಲನಚಿತ್ರ ವಾಣಿಜ್ಯ ಮಂಡಳಿಯ ಜೊತೆ ಮಾತನಾಡಿದ್ದೇನೆ. ನಮ್ಮ ಭಾಷೆ ವಿಚಾರದಲ್ಲಿ ಯಾರೇ ಮಾತನಾಡಿದರೂ ಸುಮ್ಮನೇ ಬಿಡುವ ಮಾತೇ ಇಲ್ಲ' ಎಂದರು.

'ತ್ವರಿತ ನ್ಯಾಯ ಪ್ರಕ್ರಿಯೆಗೆ ಎ.ಐ ಅವಶ್ಯಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತ್ವರಿತ ನ್ಯಾಯ ಪ್ರಕ್ರಿಯೆಗೆ ಕೃತಕ ಬುದ್ಧಿಮತ್ತೆ (ಎ.ಐ)ಯಂತಹ ಉನ್ನತ ತಂತ್ರಜ್ಞಾನಗಳ ಬಳಕೆ ಅವಶ್ಯಕವಾಗಿದೆ. ಡಿಜಿಟಲ್ ನ್ಯಾಯಾಲಯಗಳೂ ಸ್ಥಾಪನೆಯಾಗಬೇಕಾಗಿದೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಅಭಿಪ್ರಾಯಪಟ್ಟರು.

ಜ್ಞಾನಭಾರತಿ ಆವರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು, ಕಾನೂನು ಅಧ್ಯಯನ ವಿಭಾಗ ಮತ್ತು ಸೊಸೈಟಿ ಆಫ್ ಮೂಟರ್ಸ್ ಆಯೋಜಿಸಿದ್ದ '29ನೇ ಆಲ್ ಇಂಡಿಯಾ ಮೂಟ್ ಕೋರ್ಟ್ ಸ್ಪರ್ಧೆ - 2025' ಉದ್ಘಾಟಿಸಿ ಅವರು ಮಾತನಾಡಿದರು.

'ಕಾಲಮಿತಿಯೊಳಗೆ ನೊಂದವರಿಗೆ ನ್ಯಾಯ ಒದಗಿಸಲು ನ್ಯಾಯಾಲಯಗಳು ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ' ಎಂದರು.

'ಮೂಟ್ ಕೋರ್ಟ್ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಹಂತದಲ್ಲಿಯೇ ನ್ಯಾಯಾಲಯದ ಪರಿಸರ, ವಾತಾವರಣ, ಕಾನೂನು ಪ್ರಕ್ರಿಯೆ, ವಾದ ಪ್ರತಿವಾದದ ಪರಿಚಯ ಮಾಡಿಸುತ್ತದೆ. ಕಾನೂನು ವಿದ್ಯಾರ್ಥಿಗಳಲ್ಲಿ ವಾದ ಕೌಶಲ, ನ್ಯಾಯತಂತ್ರ, ನ್ಯಾಯಾಲಯದ ಶಿಷ್ಟಾಚಾರ ಮತ್ತು ನೈತಿಕತೆಗಳನ್ನು ಬೆಳೆಸುವ ವೇದಿಕೆಯಾಗಿದೆ' ಎಂದು ತಿಳಿಸಿದರು.



ಎಚ್.ಕೆ.ಪಾಟೀಲ

'ದಶಕಗಳಿಂದ ನ್ಯಾಯಾಲಯಗಳಲ್ಲಿ 10 ಲಕ್ಷಕ್ಕೂ ಅಧಿಕ ಪ್ರಕರಣಗಳು ಬಾಕಿ ಉಳಿದಿವೆ. ವೇಗ ಮತ್ತು ಪರಿಣಾಮಕಾರಿ ನ್ಯಾಯ ಪ್ರಕ್ರಿಯೆಗೆ ಸಹಕಾರಿಯಾಗಲು, ಉತ್ತಮ ಸೌಲಭ್ಯಗಳೊಂದಿಗೆ ನ್ಯಾಯಾಲಯಗಳನ್ನು ಸ್ಥಾಪಿಸಬೇಕು, ವಕೀಲರ ತರಬೇತಿ ಅಕಾಡೆಮಿಗಳನ್ನು ಆರಂಭಿಸಬೇಕು ಮತ್ತು ಕಾಲಕ್ಕೆ ತಕ್ಕಂತೆ ಕಾನೂನು ವ್ಯವಸ್ಥೆಯನ್ನು ನವೀಕರಿಸಬೇಕು' ಎಂದು ಸಲಹೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ. ಅವರು ಸರ್ಕಾರದ ಜನಪರ ಕಾನೂನು ಸುಧಾರಣೆಯನ್ನು ಶ್ಲಾಘಿಸಿದರು. ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ (ಗದಗ) ಕುಲಪತಿ ಪ್ರೊ. ಸುರೇಶ್ ವಿ. ನಾಡಗೌಡರ್ ಮಾತನಾಡಿದರು.

ಮೂರು ದಿನಗಳು ನಡೆಯುವ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ದೇಶದಾದ್ಯಂತ 40ಕ್ಕಿಂತ ಹೆಚ್ಚು ಕಾನೂನು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಕಾನೂನು ಕಾಲೇಜಿನ ಪ್ರಾಚಾರ್ಯ ಪ್ರೊ.ಎನ್.ದಶರಥ್, ಕಾನೂನು ನಿಕಾಯದ ಡೀನ್ ಪ್ರೊ. ವಿ. ಸುದೇಶ್, ಕಾನೂನು ವಿಭಾಗದ ಮುಖ್ಯಸ್ಥ ಎನ್. ಸತೀಶ್ ಗೌಡ, ಸಿ.ಆರ್.ಪಾಟೀಲ್ ಸೇರಿದಂತೆ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಅನರ್ಹ ಕಾರ್ಡ್‌ಗಳನ್ನು ತಡೆ ಹಿಡಿಯಿರಿ: ಸಿ.ಎಂ

ಒಂದನೇ ಪುಟದಿಂದ...

'ಶಿಕ್ಷಕರು, ಸರ್ಕಾರಿ ನೌಕರರ ಬಳಿಯೂ ಬಿಪಿಎಲ್ ಪಡಿತರ ಚೀಟಿಗಳಿವೆ. ಆ ಪೈಕಿ, ಹಲವರು ಪಡಿತರ ಪಡೆಯುವುದಿಲ್ಲ. ಆದರೆ, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಸೇರಿದಂತೆ ಇತರೆ ಅಗತ್ಯಗಳಿಗೆ ಬಳಸುತ್ತಿದ್ದಾರೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಅರ್ಹರಿಗೆ ಸವಲತ್ತು ತಪ್ಪದಂತೆ ಅನರ್ಹ ಕಾರ್ಡ್‌ಗಳನ್ನು ರದ್ದುಪಡಿಸಲು ಏನೇನು ಮಾಡಬಹುದು' ಎಂದು ಪ್ರಶ್ನಿಸಿದ ಮುಖ್ಯಮಂತ್ರಿ, 'ಪ್ರಾಯೋಗಿಕ ಅನುಭವದಲ್ಲಿ ಏನೇನು ಸಮಸ್ಯೆಗಳನ್ನು ಎದುರಿಸಿದ್ದೀರಿ, ಆ ಸಮಸ್ಯೆಗಳ ಪರಿಹಾರಕ್ಕೆ ಏನೇನು ಕ್ರಮ ಕೈಗೊಂಡಿದ್ದೀರಿ' ಎಂದು ಕೇಳಿ ಮಾಹಿತಿ ಪಡೆದರು.

ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಕೇಸು: 'ಹಿಂದುಳಿದವರು, ದಲಿತರು, ಅಶಿಕ್ಷಿತರು ಇರುವ ಕಡೆ ಬಾಲ್ಯ ವಿವಾಹ, ಬಾಲ ಗರ್ಭಿಣಿ ಪ್ರಕರಣ ನಡೆಯುತ್ತಿದ್ದು, ಅವುಗಳನ್ನು ತಡೆಯಲು ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಕೇಸು ಹಾಕಬೇಕು' ಎಂದು ಸೂಚಿಸಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನೆಗಳಿಗೆ ಭೂಸ್ವಾಧೀನ ವೇಳೆ ತಾಂತ್ರಿಕ ಸಮಸ್ಯೆಗಳು ಎದುರಾಗುತ್ತಿರುವ ಬಗ್ಗೆ ಅಧಿಕಾರಿಗಳು ಪ್ರಸ್ತಾಪಿಸಿದಾಗ ಗರಂ ಆದ ಸಿ.ಎಂ, 'ಅಗತ್ಯ ಬಿದ್ದರೆ ಭೂಸ್ವಾಧೀನಕ್ಕಾಗಿಯೇ ವಿಶೇಷ ಅಧಿಕಾರಿಯನ್ನು ನೇಮಿಸಲಾಗುವುದು' ಎಂದರು.

'ಶೇ 60 ಫಲಿತಾಂಶ ಪಡೆಯದ ಡಿಡಿಪಿಐಗಳಿಗೆ ನೋಟಿಸ್'

'ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾ 60ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಜಿಲ್ಲೆಗಳ ಡಿಡಿಪಿಐಗಳಿಗೆ ನೋಟಿಸ್ ನೀಡಬೇಕು. ನೋಟಿಸ್‌ಗೆ ಸಮರ್ಪಕ ಉತ್ತರ ನೀಡದಿದ್ದರೆ ಕ್ರಮ ಕೈಗೊಳ್ಳಬೇಕು' ಎಂದು ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚನೆ ನೀಡಿದರು.

'ಫಲಿತಾಂಶ ಕಡಿಮೆ ಬರಲು ಶಿಕ್ಷಕರ ಕೊರತೆ, ಸಿಬ್ಬಂದಿ ಕೊರತೆ ಎನ್ನುವ ನೆಪ ಹೇಳಬೇಡಿ. ಡಿಡಿಪಿಐಗಳು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ಡಿಡಿಪಿಐಗಳು ತಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಬೇಕು. ಸಿಇಒಗಳು ಕಡ್ಡಾಯವಾಗಿ ನಿಗಾ ವಹಿಸಬೇಕು' ಎಂದು ಸಿದ್ದರಾಮಯ್ಯ ತಾಕೀತು ಮಾಡಿದರು.

'ದ್ವೇಷ ಭಾಷಣ: ಯಾಕೆ ಕ್ರಮ ಕೈಗೊಳ್ಳುತ್ತಿಲ್ಲ?'

'ದ್ವೇಷ ಭಾಷಣದ ಬಗ್ಗೆ ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದ್ದರೂ ದ್ವೇಷ ಭಾಷಣದ ವಿರುದ್ಧ ಯಾಕೆ ಕ್ರಮ ಕೈಗೊಳ್ಳುತ್ತಿಲ್ಲ? ತಕ್ಷಣ ದೂರು ದಾಖಲಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು' ಎಂದು ಸಿದ್ದರಾಮಯ್ಯ ನಿರ್ದೇಶನ ನೀಡಿದರು. 'ಸರ್ಕಾರದ ಯೋಜನೆಗಳ ಬಗ್ಗೆ, ಕೈಗೊಂಡಿರುವ ಕ್ರಮಗಳ ಬಗ್ಗೆ ಸುಳ್ಳು ಸುದ್ದಿಗಳನ್ನು, ಮಾಹಿತಿಗಳನ್ನು ಹರಡುವ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಬೇಕು' ಎಂದರು.

'ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕಾರ್ಯನಿರ್ವಹಣೆ ಅಷ್ಟು ಸರಿ ಇಲ್ಲ. ಮಾರುಕಟ್ಟೆ ದರ, ಮಾರ್ಗಸೂಚಿ ದರಕ್ಕೂ ಅಧಿಕಾರಿಗಳು ಪ್ರಸ್ತಾಪಿಸುವ ದರಕ್ಕೂ ಯದ್ವಾತದ್ವಾ ವ್ಯತ್ಯಾಸ ಇರುತ್ತದೆ. ಹೀಗಾಗಿ, ಇವರನ್ನು ಜಿಲ್ಲಾಧಿಕಾರಿಗಳ ಅಧೀನಕ್ಕೆ ತರುವುದು ಉತ್ತಮ ಎನ್ನುವ ಅಭಿಪ್ರಾಯವನ್ನು ಸಚಿವರು ಮತ್ತು ಅಧಿಕಾರಿಗಳು ವ್ಯಕ್ತಪಡಿಸಿದಾಗ, ಈ ಬಗ್ಗೆ ಸುತ್ತೋಲೆ ಹೊರಡಿಸಲು ಸೂಚಿಸಿದರು.

'ಜಿಲ್ಲಾಧಿಕಾರಿಗಳು ಡೈರಿ ಬರೆಯುವಂತೆ ಕಳೆದ ವರ್ಷದ ಸಭೆಯಲ್ಲಿ ಮತ್ತು ಎಲ್ಲ ಕೆಡಿಪಿ ಸಭೆಗಳಲ್ಲಿ ಸೂಚನೆ ನೀಡಿದ್ದೆ. ಕೆಲವರು ಡೈರಿಗಳನ್ನು ಬರೆದಿಲ್ಲ ಎನ್ನುವ ಮಾಹಿತಿ ಇದೆ. ಆ ಡೈರಿ ಮುಖ್ಯ ಕಾರ್ಯದರ್ಶಿಗೆ ತಲುಪಬೇಕು' ಎಂದರು.

'ಕುರಿಗಾಹಿಗಳಿಗೆ ಕುರಿಗಳ ಮತ್ತು ತಮ್ಮ ಜೀವದ ರಕ್ಷಣೆಗೆ ಬಂದೂಕು ಪರವಾನಗಿ ಕೊಡಬೇಕೆಂಬ ಸೂಚನೆ ಕೆಲವು ಕಡೆ ಇನ್ನೂ ಜಾರಿಗೆ ಬಂದಿಲ್ಲ' ಎಂದು ಸಿ.ಎಂ ಹೇಳಿದಾಗ, 'ಈ ಕಾರ್ಯದ ಬಗ್ಗೆ ನಿಗಾ ವಹಿಸಲು ಅಧಿಕಾರಿಯೊಬ್ಬರನ್ನು ನಿಯೋಜಿಸಲಾಗುವುದು' ಎಂದು ಮುಖ್ಯ ಕಾರ್ಯದರ್ಶಿ ತಿಳಿಸಿದರು.

'ಆನೆ- ಮಾನವ ಸಂಘರ್ಷಕ್ಕೆ ಜೇನು ನೊಣ ಯೋಜನೆ'

ಹಲವು ಕಡೆ ಮಾನವ ಪ್ರಾಣಿ ಸಂಘರ್ಷದ ವೇಳೆ ಪ್ರಾಣಹಾನಿ ಆಗಿರುವ ಬಗ್ಗೆ ಮತ್ತು ಇದಕ್ಕೆ ವೈಜ್ಞಾನಿಕ ಪರಿಹಾರ ಒದಗಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಈ ವೇಳೆ ಸಚಿವ ಸಂತೋಷ್ ಲಾಡ್, ಜೇನು ನೊಣ ಬೇಲಿ- ಜೇನು ಕೃಷಿ ಬಗ್ಗೆ ವಿವರಿಸಿದರು. 'ಜೇನು ನೊಣ ಇರುವ ಪ್ರದೇಶಕ್ಕೆ ಆನೆಗಳು ಬರುವುದಿಲ್ಲ. ಹೀಗಾಗಿ, ಆನೆ ಬ್ಯಾರಿಕೇಡ್ ಹಾಕಿರುವ ಮಾರ್ಗದುದ್ದಕ್ಕೂ ಜೇನು ಕೃಷಿ ಮಾಡಿದರೆ ರೈತರಿಗೂ ಅನುಕೂಲ, ಆನೆಗಳ ಕಾಟವೂ ತಪ್ಪುತ್ತದೆ' ಎಂದು ಸಲಹೆ ನೀಡಿದರು.

'ಸಿಎಸ್‌ಆರ್ ನಿಧಿಯಲ್ಲಿ ಅಕ್ರಮ'

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳ ಮಾದರಿಯಲ್ಲಿ ಸಿಎಸ್‌ಆರ್ ಶಾಲೆಗಳ ನಿರ್ಮಾಣ ಯೋಜನೆ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಕಾಣದಿರುವ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

'ಪ್ರತಿವರ್ಷ ₹ 8 ಸಾವಿರ ಕೋಟಿ ಸಿಎಸ್‌ಆರ್ ನಿಧಿ ಲಭ್ಯವಿದೆ. ಇದನ್ನು ಶಾಲೆಗಳ ನಿರ್ಮಾಣಕ್ಕೆ ಬಳಸಿಕೊಳ್ಳುವಂತೆ ಹಿಂದೆಯೇ ಸೂಚನೆ ನೀಡಲಾಗಿತ್ತು. ಆದರೆ, ರಾಜ್ಯದ ಕಾರ್ಪೊರೇಟ್ ಸಂಸ್ಥೆಗಳು ಈ ನಿಧಿಯನ್ನು ಅನ್ಯ ರಾಜ್ಯಗಳ ಸರ್ಕಾರೇತರ ಸಂಸ್ಥೆಗಳಿಗೆ ಚೆಕ್‌ನಲ್ಲಿ ಕೊಟ್ಟು, ಅದರಲ್ಲಿ ಶೇ 50ರಷ್ಟನ್ನು ನಗದು ರೂಪದಲ್ಲಿ ವಾಪಸ್ ಪಡೆಯುತ್ತಿರುವುದು ಗಮನಕ್ಕೆ ಬಂದಿದೆ. ಇದು ಅಕ್ರಮ' ಎಂದರು.

ಹೆಸರು ಹಾಕಿಕೊಳ್ಳಲಿ: 'ಕಾರ್ಪೊರೇಟ್ ಸಂಸ್ಥೆಗಳು ಸಿಎಸ್‌ಆರ್ ನಿಧಿಯನ್ನು ನಗದು ಸ್ವರೂಪದಲ್ಲಿ ಕೊಡುವ ಬದಲು ಪಬ್ಲಿಕ್ ಶಾಲೆ ಕಟ್ಟಿಕೊಡಲಿ. ಅದರ ಮೇಲೆ ಆಯಾ ಸಂಸ್ಥೆಗಳ ಹೆಸರಿನ ಫಲಕ ಹಾಕಿಕೊಳ್ಳಲಿ' ಎಂದರು.

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080-22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ತಾಂ.ಶಾ/ಕ್ರೀಯೋ/30/2025-26 ದಿನಾಂಕ : 31.05.2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಉಪ-ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು- 560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾ ಸಂಕೀರ್ಣದಲ್ಲಿರುವ ಒಳಾಂಗಣ ಬ್ಯಾಡ್ಮಿಂಟನ್ ಹಾಲ್‌ನ ಮೇಲ್ಛಾವಣಿಗೆ ಶೀಟ್ ಅಳವಡಿಸುವುದು ಹಾಗೂ ಇತರೆ ಕಾಮಗಾರಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್ದಾರರಿಂದ ಟೆಂಡರ್ ನ್ನು ಆಹ್ವಾನಿಸಿದೆ.
ಕಾಮಗಾರಿ ವಿವರ : ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾ ಸಂಕೀರ್ಣದಲ್ಲಿರುವ ಒಳಾಂಗಣ ಬ್ಯಾಡ್ಮಿಂಟನ್ ಹಾಲ್‌ನ ಮೇಲ್ಛಾವಣಿಗೆ ಶೀಟ್ ಅಳವಡಿಸುವುದು ಹಾಗೂ ಇತರೆ ಕಾಮಗಾರಿ.
ಟೆಂಡರ್‌ಗಿಟ್ಟ ಮೊತ್ತ : ರೂ. 63.24 ಲಕ್ಷಗಳು, ಇಎಂಡಿ ಮೊತ್ತ : ರೂ. 1,26,480/-.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 13.06.2025 ಸಮಯ : 16.30 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 16.06.2025 ಸಮಯ: 11.30 ಗಂಟೆ.
ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/-
ಉಪ ನಿರ್ದೇಶಕರು (ಆಡಳಿತ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
DIPR/CP/959/NR/2025-26

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು-9.
ದೂರವಾಣಿ ಸಂ: 080-29710021, 29710022, 29710023, 29710024 ಫ್ಯಾಕ್ಸ್: 080-29710025
ಇ-ಮೇಲ್: coo.krrda.karbng@kar.nic.in, ವೆಬ್ ಸೈಟ್ : http://www.krrda.in

ಸಂಖ್ಯೆ: ಕೆಆರ್‌ಆರ್‌ಡಿಎ/ತಾಂತ್ರಿಕ/11/208/ಟೆಂಡರ್ ನೋ-2/2025-26/452 ದಿನಾಂಕ: 31.05.2025

ಟೆಂಡರ್ ಪ್ರಕಟಣೆ – 2

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ 2024-25ನೇ ಸಾಲಿನ ಪಿ.ಎಂ ಜನ್‌ಮನ್ ಯೋಜನೆಯ ಬ್ಯಾಚ್-2, ಮುಖ್ಯಮಂತ್ರಿ ವಿಶೇಷ ಅನುದಾನ, ಪಿ.ಎಂ.ಜಿ.ಎಸ್.ವೈ-2 ಮರುಡಾಂಬರೀಕರಣ ಕಾಮಗಾರಿ ಮತ್ತು ಕಲ್ಯಾಣ ಪಥ ಯೋಜನೆಗಳಡಿ ಪ್ಯಾಕೇಜ್ ಕಾಮಗಾರಿಗಳಿಗೆ ಐಟಂ ರೇಟ್ ದರಗಳ ಟೆಂಡರ್‌ನ್ನು ಕರೆದಿದ್ದು, ಟೆಂಡರ್ ವೇಳಾಪಟ್ಟಿಯ ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ಯೋಜನೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷ)		ಇ.ಎಮ್.ಡಿ ಮೊತ್ತ, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ	ಕಾಮಗಾರಿ ಪೂರ್ಣಗೊಳಿಸುವ ಅವಧಿ
		ಕನಿಷ್ಠ	ಗರಿಷ್ಠ		
1.	ಪಿ.ಎಂ ಜನ್‌ಮನ್	40.00	700.00	• ಟೆಂಡರ್‌ಗಿಟ್ಟ ಮೊತ್ತಕ್ಕೆ ಶೇ. 2%	11 ತಿಂಗಳು (ಮಳೆಗಾಲ ಸೇರಿ)
2.	ಮುಖ್ಯಮಂತ್ರಿ ವಿಶೇಷ ಅನುದಾನ	150.00	300.00	• ರೂ.100.00 ಲಕ್ಷದಿಂದ ರೂ. 1000.00 ಲಕ್ಷದ ವರೆಗಿನ ಮೊತ್ತದ ಕಾಮಗಾರಿಗಳಿಗೆ- ಶೇ. 1.50%, ಕನಿಷ್ಠ ರೂ.2.00 ಲಕ್ಷದ ವರೆಗೆ. • ರೂ.1000.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ- ಶೇ. 1.00%, ಕನಿಷ್ಠ ರೂ.15.00 ಲಕ್ಷದ ವರೆಗೆ.	
3.	ಪಿ.ಎಂ.ಜಿ. ಎಸ್.ವೈ-2 ಮರುಡಾಂ- ಬರೀಕರಣ ಕಾಮಗಾರಿ	-	175.00		
4.	ಕಲ್ಯಾಣ ಪಥ	800.00	1300.00		

ಟೆಂಡರ್ ಪ್ಯಾಕೇಜಿನ ಇಂಡೆಂಟ್ ಸಂಖ್ಯೆಗಳು:
i 2024-25ನೇ ಸಾಲಿನ ಪಿ.ಎಂ ಜನ್‌ಮನ್ ಯೋಜನೆಯ ಬ್ಯಾಚ್-2 – ರಸ್ತೆ ಅಭಿವೃದ್ಧಿ ಕಾಮಗಾರಿ. ಅ. ಟೆಂಡರ್ ಪ್ಯಾಕೇಜಿನ ಇಂಡೆಂಟ್ ಸಂಖ್ಯೆಗಳು: KRRDA/2025-26/RD/WORK_INDENT 206, 207, 214 & 217
ii ಮುಖ್ಯಮಂತ್ರಿಯವರ ವಿಶೇಷ ಅನುದಾನ – ರಸ್ತೆ ಅಭಿವೃದ್ಧಿ ಕಾಮಗಾರಿ. ಅ. ಟೆಂಡರ್ ಪ್ಯಾಕೇಜಿನ ಇಂಡೆಂಟ್ ಸಂಖ್ಯೆಗಳು: KRRDA/2025-26/RD/WORK_INDENT 220 to 222
iii ಪಿ.ಎಂ.ಜಿ.ಎಸ್.ವೈ-2ರ – 6ನೇ ವರ್ಷದ ಮರುಡಾಂಬರೀಕರಣ ಕಾಮಗಾರಿ. ಅ. ಟೆಂಡರ್ ಪ್ಯಾಕೇಜಿನ ಇಂಡೆಂಟ್ ಸಂಖ್ಯೆಗಳು: KRRDA/2025-26/RD/WORK_INDENT_223

ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿಯ ವಿವರಗಳು ಕೆಳಕಂಡಂತಿವೆ:

1.	ಪ್ರಿ-ಬಿಡ್ ಸಭೆಯ ದಿನಾಂಕ	12-06-2025, ಗುರುವಾರ ಬೆಳಿಗ್ಗೆ 11.00 ಗಂಟೆಗೆ
2.	ಬಿಡ್‌ಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ	24-06-2025, ಮಂಗಳವಾರ ಸಂಜೆ 5.30 ರವರೆಗೆ
3.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	25-06-2025, ಬುಧವಾರ ಸಂಜೆ 5.30ರ ನಂತರ
4.	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	ಆಯಾ ಕಾಮಗಾರಿಗಳ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.

IV. ಕಲ್ಯಾಣ ಪಥ ಯೋಜನೆಯ – ರಸ್ತೆ/ಸೇತುವೆ ಕಾಮಗಾರಿ
ಟೆಂಡರ್ ಪ್ಯಾಕೇಜಿನ ಇಂಡೆಂಟ್ ಸಂಖ್ಯೆಗಳು:
ಅ. KRRDA/2024-25/RD/WORK_INDENT 151 - Call-6
ಆ. KRRDA/2024-25/RD/WORK_INDENT 116 - Call-2
ಅಲ್ಪಾವಧಿ ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿಯ ವಿವರಗಳು ಕೆಳಕಂಡಂತಿವೆ:

1.	ಪ್ರಿ-ಬಿಡ್ ಸಭೆಯ ದಿನಾಂಕ	05-06-2025, ಗುರುವಾರ ಬೆಳಿಗ್ಗೆ 11.00 ಗಂಟೆಗೆ
2.	ಬಿಡ್‌ಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ	11-06-2025, ಬುಧವಾರ ಸಂಜೆ 5.30 ರವರೆಗೆ
3.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	12-06-2025, ಗುರುವಾರ ಸಂಜೆ 5.30ರ ನಂತರ
4.	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	ಆಯಾ ಕಾಮಗಾರಿಗಳ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.

(1) KPWD D-code ರಂತೆ ಅರ್ಹರಾದ ಲೋಕೋಪಯೋಗಿ ಇಲಾಖೆ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿಕೊಂಡ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಗುತ್ತಿಗೆ ನೀಡುವಿಕೆಯು ಗುತ್ತಿಗೆ ನಿಯಮಗಳಂತೆ, ಗುತ್ತಿಗೆದಾರರ ತಾಂತ್ರಿಕ, ಆರ್ಥಿಕ ಸಂಪನ್ಮೂಲ ಮತ್ತು ಕಾಮಗಾರಿ ನಿರ್ವಹಿಸುವ ಸಾಮರ್ಥ್ಯಗಳ ಮೇಲೆ ಅವಲಂಭಿತವಾಗಿರುತ್ತದೆ. (2) ಕೆ.ಆರ್.ಆರ್.ಡಿ.ಎ ಸಂಸ್ಥೆ ವತಿಯಿಂದ ಪಿ.ಎಂ.ಜಿ.ಎಸ್.ವೈ/ಎನ್.ಜಿ.ಎನ್.ಆರ್.ವೈ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಫಲರಾದ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸದೇ ಟೆಂಡರ್ ರದ್ದುಪಡಿಸಲಾದ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ. (3) ಟೆಂಡರ್ ಕರೆಯಲಾದ ಕಾಮಗಾರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ ಇವರನ್ನು ಸಂಪರ್ಕಿಸಬಹುದು. (4) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಪ್ರಕ್ರಿಯೆ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (5) ಪ್ಯಾಕೇಜ್ ಕಾಮಗಾರಿಗಳ ವಿವರಗಳನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಟಿಪ್ಪಣಿ : ಅ. ಈ ಅಧಿಸೂಚನೆಯಲ್ಲಿ ಎಸ್.ಸಿ, ಎಸ್.ಟಿ, ಪ್ರವರ್ಗ-1, ಪ್ರವರ್ಗ-2ಎ ವರ್ಗಗಳಿಗೆ ಮೀಸಲಿರಿಸಿದ ಇಂಡೆಂಟ್‌ಗಳಿಗೆ ಸಂಬಂಧಿತ ಗುತ್ತಿಗೆದಾರರು ಜಾತಿ ಪ್ರಮಾಣ ಪತ್ರ ಹಾಗೂ ಹತ್ತು ವರ್ಷಕ್ಕಿಂತ ಹೆಚ್ಚಾಗಿ ಕರ್ನಾಟಕದಲ್ಲಿ ವಾಸ ಮಾಡಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಅಪ್‌ಲೋಡ್ ಮಾಡತಕ್ಕದ್ದು, ಇಲ್ಲವಾದ್ದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

ಸಹಿ/-
ಟೆಂಡರಿಂಗ್ ಅಧಿಕಾರಿ ಮತ್ತು ಕಾರ್ಯಪಾಲಕ ಇಂಜಿನಿಯರ್,
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ,
ಬೆಂಗಳೂರು.
DIPR/CP/RO956/AAPL/2025-26

ಘೋಷಣೆ ಅಗಾಧ, ಹೂಡಿಕೆ ಅಲ್ಪ

ಎಐ ಚಿತ್ರ: ಕಣಕಾಲಮಠ

ಒಂದನೇ ಪುಟದಿಂದ...

‘ಘೋಷಣೆ ಮತ್ತು ವಾಸ್ತವ ಹೂಡಿಕೆ ಮಧ್ಯೆ ಇಷ್ಟು ದೊಡ್ಡ ಮಟ್ಟದ ವ್ಯತ್ಯಾಸ ಕಾಣಲು ಸರ್ಕಾರದ ನೀತಿ ಮತ್ತು ಉದ್ಯಮಿಗಳ ಬೇಡಿಕೆ ನಡುವೆ ಹೊಂದಾಣಿಕೆ ಆಗದೇ ಇರುವುದೇ ಕಾರಣ. ಉದ್ಯಮಿಗಳು ಕಾರ್ಯಸಾಧುವಲ್ಲದ ಮತ್ತು ರಾಜ್ಯದ ಆರ್ಥಿಕತೆಗೆ ಅನುಕೂಲವಾಗದೇ ಇರುವಂತಹ ಬೇಡಿಕೆಗಳನ್ನು ಇಡುತ್ತಾರೆ. ಕೈಗಾರಿಕೆಗಳೇ ಇಲ್ಲದ ರಾಜ್ಯಗಳು ಅಂತಹ ಬೇಡಿಕೆಗಳನ್ನು ಒಪ್ಪುತ್ತವೆ. ಆದರೆ ಕರ್ನಾಟಕದಲ್ಲಿ ಹಾಗೆ ಮಾಡಲಾಗುವುದಿಲ್ಲ. ಇಲ್ಲಿ ಎಲ್ಲ ಸವಲತ್ತುಗಳು, ಸೌಕರ್ಯಗಳು ಇವೆ. ಭೂಮಿಗೂ ಹೆಚ್ಚಿನ ಮೌಲ್ಯವಿದೆ. ಹೀಗಾಗಿ ವಿಪರೀತ ಎನಿಸುವಷ್ಟು ವಿನಾಯತಿ ಮತ್ತು ರಿಯಾಯತಿಗಳನ್ನು ಕೊಡಲು ಸಾಧ್ಯವಿಲ್ಲ ಎಂದು ಎಂ.ಬಿ.ಪಾಟೀಲ ಅವರು ಈಗಾಗಲೇ ಸಾಕಷ್ಟು ಬಾರಿ ಹೇಳಿದ್ದಾರೆ. ಅದು ನಿಜವೂ ಹೌದು. ಉದ್ಯಮಿಗಳ ಎಲ್ಲ ಬೇಡಿಕೆಗಳಿಗೆ ಒಪ್ಪದೇ ಇದ್ದಾಗ, ಅವರು ಒಪ್ಪಂದ ರದ್ದುಪಡಿಸಿದ ಹಲವು ಉದಾಹರಣೆಗಳು ಇವೆ’ ಎಂಬುದು ಕೈಗಾರಿಕಾ ಇಲಾಖೆಯ ಉನ್ನತ ಅಧಿಕಾರಿಯೊಬ್ಬರ ಸ್ಪಷ್ಟನೆ.

‘ಈ 25 ವರ್ಷಗಳಲ್ಲಿ ರಾಜ್ಯದಲ್ಲಿ ಆಡಳಿತ ನಡೆಸಿ ಹೋದ ಮತ್ತು ಆಡಳಿತ ನಡೆಸುತ್ತಿರುವ ಪಕ್ಷ–ಸರ್ಕಾರಗಳಿಗೆ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಎಂಬುದು ಪ್ರತಿಷ್ಠೆಯ ವಿಷಯವೇ ಆಗಿದೆ. ಹೀಗಾಗಿ ಸಮಾವೇಶ ಆಯೋಜನೆಗೂ ಮುನ್ನ ದೇಶ–ದೇಶ ತಿರುಗಿ, ಹೂಡಿಕೆ ಸಾಧ್ಯತೆಗಳ ಬಗ್ಗೆ ಮಾತುಕತೆ ನಡೆಸಲಾಗುತ್ತದೆ. ಹೂಡಿಕೆದಾರರನ್ನು ಸಮಾವೇಶಕ್ಕೆ ಆಹ್ವಾನಿಸಲಾಗುತ್ತದೆ. ರಾಜ್ಯದಲ್ಲಿ ಹೂಡಿಕೆ ಮಾಡಬೇಕೇ ಎಂಬುದು ಆ ಮಾತುಕತೆಗಳಲ್ಲೇ ಅಂತಿಮವಾಗಿರುತ್ತದೆ. ಒಪ್ಪಂದ ಪತ್ರಗಳ ಹಸ್ತಾಂತರ, ಘೋಷಣೆ ಪ್ರಕ್ರಿಯೆಯನ್ನು ಸಮಾವೇಶಕ್ಕೆ ಉಳಿಸಿಕೊಳ್ಳಲಾಗಿರುತ್ತದೆ. ಆ ಹೂಡಿಕೆ ಒಪ್ಪಂದಗಳು ಸಮಾವೇಶದಲ್ಲಿ ಘೋಷಣೆಯಾಗುತ್ತವೆ’ ಎಂಬುದು ಇನ್ವೆಸ್ಟ್ ಕರ್ನಾಟಕ–2025ರಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದ ಅಧಿಕಾರಿಯೊಬ್ಬರು ನೀಡಿದ ವಿವರಣೆ.

ಸರ್ಕಾರಗಳು ಇಷ್ಟೇ ದತ್ತಾಂಶವನ್ನು ನೀಡಿದರೆ, ಘೋಷಣೆ ಮತ್ತು ವಾಸ್ತವಿಕ ಹೂಡಿಕೆ ಮಧ್ಯೆ ಬಹಳ ವ್ಯತ್ಯಾಸ ಇರುವುದಿಲ್ಲ. ಪ್ರತಿಷ್ಠೆಯ ಕಾರಣಕ್ಕೆ ಆಸಕ್ತಿ ತೋರಿದ ಕಂಪನಿಗಳ, ಹೂಡಿಕೆ ಮೊತ್ತವನ್ನೂ ಘೋಷಣೆಯಲ್ಲಿ ಸೇರಿಸಿಬಿಡುತ್ತವೆ. ಜನರನ್ನು ಹಾದಿತಪ್ಪಿಸುವುದು ಇದೇ ಘೋಷಣೆಗಳು. 2025ರ ಹೂಡಿಕೆದಾರರ ಸಮಾವೇಶವನ್ನೇ ಉದಾಹರಣೆಗೆ ತೆಗೆದುಕೊಂಡರೆ, ಇಲ್ಲಿ ಒಪ್ಪಂದವಾಗಿದ್ದು ₹7.20 ಲಕ್ಷ ಕೋಟಿಯಷ್ಟು. ನೂರಕ್ಕೂ ಹೆಚ್ಚು ಕಂಪನಿಗಳು ಅಂದಾಜು ₹3 ಲಕ್ಷ ಕೋಟಿಯಷ್ಟು ಹೂಡಿಕೆಗೆ ಆಸಕ್ತಿ ತೋರಿಸಿವೆ. ಸರ್ಕಾರ ಇದನ್ನು ₹10.27 ಲಕ್ಷ ಕೋಟಿ ಹೂಡಿಕೆ ಘೋಷಣೆ ಎಂದು ಹೇಳಿದೆ. ಈ ಹಿಂದಿನ ಎಲ್ಲ ಸಮಾವೇಶಗಳಲ್ಲೂ ಹೀಗೇ ಆಗಿದೆ. ಒಪ್ಪಂದ ಮತ್ತು ಆಸಕ್ತಿ ಎರಡನ್ನೂ ಒಟ್ಟು ಸೇರಿಸಿಕೊಂಡು ಅಂದಂದಿನ ಸರ್ಕಾರಗಳು ಹೂಡಿಕೆ ಘೋಷಣೆ ಮಾಡಿವೆ. ಅವೆಲ್ಲವೂ ಹೂಡಿಕೆ ಆಗದೇ ಇರುವ ಕಾರಣಕ್ಕೆ, ಅದರ ಪ್ರಮಾಣ ಕಡಿಮೆಯಾಗಿ ಕಾಣುತ್ತದೆ ಎಂಬುದು ಆ ಅಧಿಕಾರಿಯ ವಿಶ್ಲೇಷಣೆ.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ವಿಧಾನಸಭೆಯಲ್ಲಿ ಆಡಿದ್ದ ಮಾತೂ, ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ. ‘2022ರ ಹೂಡಿಕೆದಾರರ ಸಮಾವೇಶದಲ್ಲಿ ಘೋಷಣೆಯಾದ ₹ 9.81 ಕೋಟಿಯಲ್ಲಿ, ಅಂದಾಜು ₹22,000 ಕೋಟಿಯಷ್ಟು ಮಾತ್ರ ಹೂಡಿಕೆಯಾಗಿದೆ. ಇನ್ನೂ ₹5.20 ಲಕ್ಷ ಕೋಟಿಯಷ್ಟು ಹೂಡಿಕೆ ಒಪ್ಪಂದಗಳು ಅನುಮತಿ ಪಡೆಯುವ ವಿವಿಧ ಹಂತಗಳಲ್ಲಿ ಇವೆ’ ಎಂದು ಅವರು ಸದನಕ್ಕೆ ಉತ್ತರಿಸಿದ್ದರು.

ಆದರೆ ಉದ್ಯಮಿಗಳು ಹೇಳುವ ಮಾತು ಬಂಡವಾಳ ಆಕರ್ಷಣೆಯಲ್ಲಿನ ತೊಡಕಿನ ಮತ್ತಷ್ಟು ಆಯಾಮಗಳನ್ನು ತೆರೆದಿಡುತ್ತವೆ.

‘ಇನ್ನು ಒಪ್ಪಂದ ಆದ ನಂತರವೂ, ಹೂಡಿಕೆ ಆಗೇ ಆಗುತ್ತದೆ ಎಂದು ಹೇಳಲಾಗದು. ಒಪ್ಪಂದ ಎಂಬುದು ಎರಡನೇ ಹಂತದ ಪ್ರಕ್ರಿಯೆ ಅಷ್ಟೆ. ಆನಂತರ ರಾಜ್ಯದಲ್ಲಿ ಲಭ್ಯವಿರುವ ಮೂಲಸೌಕರ್ಯ, ತೆರಿಗೆ ವಿನಾಯತಿ, ಕಾರ್ಮಿಕರ ಲಭ್ಯತೆ, ವಿವಿಧ ಸ್ವರೂಪದ ಅನುಮತಿಗಳ ಕುರಿತಾದ ವಿಸ್ತೃತ ಪರಿಶೀಲನೆ ನಡೆಯುತ್ತದೆ. ಬಹುತೇಕ ಒಪ್ಪಂದಗಳು ಈ ಹಂತದಲ್ಲಿ ಬಿದ್ದು ಹೋಗುತ್ತವೆ. ರಾಜ್ಯದಲ್ಲಿ ಕೈಗಾರಿಕೋದ್ಯಮಗಳ ಸ್ಥಾಪನೆಗೆ ಪರಿಸರ ಅನುಮತಿ ಪಡೆಯುವುದೇ ದೊಡ್ಡ ತೊಡಕು. ಬಹುತೇಕ ಸಂದರ್ಭದಲ್ಲಿ ಅನುಮತಿಗಳು ಸಿಗದೇ ಹೋಗುತ್ತವೆ. ಪರಿಸರ ಅನುಮತಿಗಾಗಿ ಸಲ್ಲಿಸಿದ ಅರ್ಜಿಗಳು ಅರಣ್ಯ ಮತ್ತು ಪರಿಸರಜೀವಿ ವಿಜ್ಞಾನ ಇಲಾಖೆ ಮತ್ತು ಮಾಲಿನ್ಯ ನಿಯಂತ್ರಣ ಮಂಡಲಿಯಲ್ಲೇ ಕೊಳೆಯುತ್ತವೆ. ವಿಪರೀತ ಎನಿಸುವಷ್ಟು ಲಂಚಕ್ಕೆ ಬೇಡಿಕೆ ಇಡುತ್ತಾರೆ. ಲಂಚ ನೀಡದೇ ಇದ್ದರೆ ಅನುಮತಿ ದೊರೆಯುವುದಿಲ್ಲ. ಇಲ್ಲವೇ ಹತ್ತಾರು ಕಾರಣಗಳನ್ನು ಮುಂದೊಡ್ಡಿ ಅರ್ಜಿ ತಿರಸ್ಕರಿಸುತ್ತಾರೆ. ಈ ಹಂತದಲ್ಲೇ ಬಹುತೇಕ ಒಪ್ಪಂದಗಳು ಬಿದ್ದು ಹೋಗುತ್ತವೆ. ಜತೆಗೆ ವಿನಾಯತಿಗಳ ವಿಚಾರದಲ್ಲಿ ಹೂಡಿಕೆದಾರರು ಮತ್ತು ಸರ್ಕಾರದ ಮಧ್ಯೆ ಒಮ್ಮತ ಬರದೇ ಹೋಗುತ್ತದೆ. ಒಪ್ಪಂದ ರದ್ದಾಗಲು ಇದೂ ಒಂದು ಪ್ರಧಾನ ಕಾರಣ’ ಎನ್ನುವುದು ಹೆಸರೇಳಲು ಬಯಸದ ಪೀಣ್ಯ ಕೈಗಾರಿಕಾ ಸಂಘದ ಪದಾಧಿಕಾರಿ ಮತ್ತು ಮಾಜಿ ಅಧ್ಯಕ್ಷರೊಬ್ಬರ ಅಭಿಪ್ರಾಯ.

‘ವಿವಿಧ ಅನುಮತಿಗಳನ್ನು ಪಡೆಯುವ ಸಂಬಂಧ ಕರ್ನಾಟಕದಲ್ಲಿ ಇರುವ ವ್ಯವಸ್ಥೆಯೇ ಸರಿ ಇಲ್ಲ. ಏಕಗವಾಕ್ಷಿ ವ್ಯವಸ್ಥೆ ಇದ್ದರೂ, ಹತ್ತಾರು ಕಚೇರಿಗೆ ಅಲೆಯಬೇಕಾಗಿದೆ. ರಾಜ್ಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣ ಮಾಡುವಲ್ಲಿಯೂ ತೊಡಕುಗಳಿವೆ. ಮೂಲಸೌಕರ್ಯ ಒದಗಿಸುವಲ್ಲಿ ಸಾಕಷ್ಟು ಕೊರತೆಗಳಿವೆ. ಇವೆಲ್ಲಕ್ಕೂ ಅನುಕೂಲವಾಗಲಿ ಎಂದು ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತರಲಾಗಿದೆಯಾದರೂ, ಅದು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ. ರಾಜ್ಯದಲ್ಲಿನ ಕೈಗಾರಿಕಾ ನೀತಿಗಳು ಕಾಗದದ ಮೇಲಷ್ಟೇ ಉದ್ಯಮಿಸ್ನೇಹಿಯಾಗಿವೆ. ವಾಸ್ತವದಲ್ಲಿ ಅಧಿಕಾರಿಗಳಿಗೆ ಹೂಡಿಕೆ ಸಂಬಂಧ ವಿಳಂಬ ಮತ್ತು ನಿರ್ಲಕ್ಷ್ಯವೇ ಹೆಚ್ಚು’ ಎಂಬುದು ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ.ಬಾಲಕೃಷ್ಣ ಅವರ ಅಸಮಾಧಾನ.

‘ಇನ್ನು ಹೂಡಿಕೆದಾರರು ಮತ್ತು ಸರ್ಕಾರದ ನಡುವಣ ಮಾತುಕತೆ ಫಲಪ್ರದವಾಗಿ, ಒಪ್ಪಂದಕ್ಕೆ ಅಗತ್ಯ ಅನುಮತಿಗಳೂ ದೊರೆತುಬಿಡುತ್ತವೆ. ಅನುಷ್ಠಾನದ ಹಂತದಲ್ಲಿ ಸ್ಥಳೀಯ ಜನರ, ರೈತರ, ಸ್ವಯಂಸೇವಾ ಸಂಸ್ಥೆಗಳ ತಕರಾರು ಆರಂಭವಾಗುತ್ತದೆ. ಕೊಪ್ಪಳದಲ್ಲಿ ಬಲ್ದೋಟ ಸಮೂಹವು ₹54,000 ಕೋಟಿ ಮೊತ್ತದ ಉಕ್ಕು ಸ್ಥಾವರ ಸ್ಥಾಪನೆಗೆ ಎದುರಾಗಿರುವ ವಿರೋಧವು, ಇಂಥದ್ದಕ್ಕೆ ಸ್ಪಷ್ಟ ನಿದರ್ಶನ. ಈ ರೀತಿಯ ತಕರಾರುಗಳು ಎದುರಾಗಲು ಸರ್ಕಾರದ ವೈಫಲ್ಯವೇ ಕಾರಣ. ಮಾತುಕತೆ ಹಂತದಲ್ಲೇ ಸ್ಥಳೀಯರನ್ನು, ಭೂಮಿ ಕಳೆದುಕೊಂಡ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರೆಯಬೇಕಾದ ಹೊಣೆಗಾರಿಕೆ ಸರ್ಕಾರದ್ದು. ಸರ್ಕಾರಗಳು ಈ ಎಚ್ಚರಿಕೆ ವಹಿಸದೇ ಇರುವುದರಿಂದಲೇ ಹೂಡಿಕೆ ಹಂತದಲ್ಲಿ ತಕರಾರುಗಳು ಆರಂಭವಾಗುತ್ತವೆ. ಇಂಥದ್ದೇ ಕಾರಣಕ್ಕೆ ಘೋಷಣೆಯಾಗಿದ್ದ ಹಲವು ಹೂಡಿಕೆಗಳು ರದ್ದಾಗುತ್ತವೆ’ ಎಂಬುದು ಎಫ್‌ಕೆಸಿಸಿಐ ಪದಾಧಿಕಾರಿಯೊಬ್ಬರ ಅಭಿಪ್ರಾಯ.

ಈ ಎಲ್ಲ ಕಾರಣಗಳ ಮಧ್ಯೆ, ಹೂಡಿಕೆದಾರರ ಸಮಾವೇಶದಲ್ಲಿ ಘೋಷಣೆಯಾದ ಬಂಡವಾಳವು ಪೂರ್ಣ ಪ್ರಮಾಣದಲ್ಲಿ ಹೂಡಿಕೆ ಆಗುತ್ತಿಲ್ಲ ಎಂಬುದು ವಾಸ್ತವ.

ಇದು ಘೋಷಣೆಯಾಗಿ ಆನಂತರ ಕೈತಪ್ಪಿದ ಹೂಡಿಕೆಗಳ ಕತೆಯಾದರೆ, ಕರ್ನಾಟಕದಲ್ಲೇ ಮೊದಲ ಉದ್ದಿಮೆ ಆರಂಭಿಸಿ ಆನಂತರ ಬೇರೆ ರಾಜ್ಯಗಳಲ್ಲಿ ದೊಡ್ಡಮಟ್ಟದ ಹೂಡಿಕೆ ಮಾಡಿದ ಕತೆಗಳೂ ಸಾಕಷ್ಟಿವೆ. ದೇಶದಲ್ಲಿ ಅತಿಹೆಚ್ಚು ನವೋದ್ಯಮಗಳು ಇರುವುದು ಬೆಂಗಳೂರಿನಲ್ಲಿ. ಇಲ್ಲಿ ಕಾರ್ಯಾರಂಭ ಮಾಡಿದ ಹಲವು ನವೋದ್ಯಮಗಳು ಇಂದು ದೇಶದಲ್ಲಿ ದೊಡ್ಡ ಹೆಸರು ಮಾಡಿವೆ. ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಅಂತಹ ನವೋದ್ಯಮಗಳು, ನೆರೆ ರಾಜ್ಯಗಳಲ್ಲಿ ದೊಡ್ಡಮಟ್ಟದ ಕೈಗಾರಿಕೆಗಳನ್ನು ಸ್ಥಾಪಿಸಿವೆ.

ವಿದ್ಯುತ್ ಚಾಲಿತ ಸ್ಕೂಟರ್ ತಯಾರಿಕಾ ಕಂಪನಿ, ‘ಏಥರ್ ಎನರ್ಜಿ’ಯ ಕೇಂದ್ರ ಕಚೇರಿ ಇರುವುದು ಬೆಂಗಳೂರಿನಲ್ಲಿ. ಇಲ್ಲಿಯೇ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ, ಮಧ್ಯಮ ಮಟ್ಟದ ತಯಾರಿಕಾ ಘಟಕ ಹೊಂದಿರುವ ಕಂಪನಿಯು ಈಚೆಗೆ ಮಹಾರಾಷ್ಟ್ರದಲ್ಲಿ ಬೃಹತ್ ತಯಾರಿಕಾ ಘಟಕವನ್ನು ಸ್ಥಾಪಿಸಿದೆ. ಮಹಾರಾಷ್ಟ್ರ ಸರ್ಕಾರವು ಕಡಿಮೆ ದರದಲ್ಲಿ ಭೂಮಿ ಒದಗಿಸಿದೆ ಮತ್ತು ಹೆಚ್ಚಿನ ಮಟ್ಟದ ತೆರಿಗೆ ವಿನಾಯತಿ ನೀಡಿದೆ. ಇನ್ನು ಬೆಂಗಳೂರಿನಲ್ಲೇ ಕೇಂದ್ರ ಕಚೇರಿ ಹೊಂದಿರುವ ‘ಓಲಾ’, ಪಕ್ಕದ ತಮಿಳುನಾಡಿನ ಹೊಸೂರಿಗೆ ಹೊಂದಿಕೊಂಡಂತೆ ವಿದ್ಯುತ್ ಚಾಲಿತ ಸ್ಕೂಟರ್ ತಯಾರಿಕಾ ಘಟಕ ‘ಗಿಗಾ ಫ್ಯಾಕ್ಟರಿ’ಯನ್ನು ಆರಂಭಿಸಿದೆ. ಈ ಘಟಕದ ವಿಸ್ತರಣೆ ಕಾರ್ಯವನ್ನೂ ಈಚೆಗೆ ಆರಂಭಿಸಿದೆ.

‘ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರದಲ್ಲಿ ಕೈಗಾರಿಕಾ ಭೂಮಿಯ ಬೆಲೆ ಕರ್ನಾಟಕಕ್ಕಿಂತ ಕಡಿಮೆ ಇದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ಅತ್ಯಂತ ತ್ವರಿತವಾಗಿ ನಡೆಸಿ, ಉದ್ಯಮಿಗಳಿಗೆ ಹಸ್ತಂತರಿಸಲಾಗುತ್ತದೆ. ಕೈಗಾರಿಕಾ ನಿವೇಶನ ಹಸ್ತಾಂತರಕ್ಕೂ ಮುನ್ನವೇ ಬಹುತೇಕ ಮೂಲಸೌಕರ್ಯಗಳನ್ನು ಒದಗಿಸಿರುತ್ತಾರೆ. ಉದ್ಯಮಗಳ ಸ್ಥಾಪನೆಗೆ ತುದಿಗಾಲಲ್ಲಿ ನಿಂತಿರುವ ಆ ರಾಜ್ಯಗಳು, ಅಗತ್ಯವಿರುವ ಸವಲತ್ತುಗಳನ್ನು ಕೆಲವೇ ತಿಂಗಳುಗಳಲ್ಲಿ ಒದಗಿಸಿಕೊಡುತ್ತವೆ. ಪರಿಣಾಮವಾಗಿ ಉದ್ಯಮಗಳು ಕರ್ನಾಟಕಕ್ಕಿಂತ, ಈ ರಾಜ್ಯಗಳನ್ನೇ ಹೂಡಿಕೆಗೆ ಆಯ್ಕೆ ಮಾಡಿಕೊಳ್ಳುತ್ತಿವೆ’ ಎನ್ನುತ್ತಾರೆ ಎಫ್‌ಕೆಸಿಸಿಐ ಹಿಂದಿನ ಅಧ್ಯಕ್ಷರೊಬ್ಬರು.

‘ದಕ್ಷಿಣ ಭಾರತದಲ್ಲಿ ವಿದೇಶಿ ಆಟೊಮೊಬೈಲ್ ಕಂಪನಿಯೊಂದು ಕಾರು ತಯಾರಿಕಾ ಘಟಕ ತರೆದು, ಕಾರ್ಯಾರಂಭ ಮಾಡಿದ್ದು ಕರ್ನಾಟಕದಲ್ಲೇ. 1999ರಲ್ಲಿ ಬಿಡದಿ ಸಮೀಪ ಟೊಯೊಟಾ ಕಾರು ತಯಾರಿಕಾ ಘಟಕ ಆರಂಭವಾಗಿತ್ತು. ಸರಿಸುಮಾರು ಅದೇ ಸಮಯದಲ್ಲಿ ಚೆನ್ನೈನಲ್ಲಿ ಹುಂಡೈ ಕಾರು ತಯಾರಿಕಾ ಘಟಕ ಆರಂಭವಾಗಿತ್ತು. ಬಿಡದಿ ಘಟಕದಲ್ಲಿ ಬೇರೆ–ಬೇರೆ ಕಾರಣಗಳಿಗೆ ವರ್ಷವೊಂದರಲ್ಲಿ ಹಲವು ದಿನ ಕೆಲಸ ನಡೆಯುವುದೇ ಇಲ್ಲ. ಇಂತಹ ಬೆಳವಣಿಗೆಯನ್ನು ವಿದೇಶಿ ಹೂಡಿಕೆದಾರರು ಗಮನಿಸುತ್ತಿರುತ್ತಾರೆ. ಈ ಕಾರಣದಿಂದಲೇ ಆನಂತರದಲ್ಲಿ ಬೇರೆ ಯಾವುದೇ ಕಾರು ತಯಾರಿಕಾ ಘಟಕಗಳು ಕರ್ನಾಟಕಕ್ಕೆ ಬಂದಿಲ್ಲ’ ಎಂಬುದು ಅವರು ನೀಡುವ ವಿವರಣೆ.

‘ಆನಂತರದಲ್ಲಿ ತಮಿಳುನಾಡಿನಲ್ಲಿ ಫೋರ್ಡ್, ಆಂಧ್ರ ಪ್ರದೇಶದಲ್ಲಿ ಐಸೂಜೂ ಮತ್ತು ಕಿಯಾ ಕಾರು ತಯಾರಿಕಾ ಘಟಕಗಳನ್ನು ಆರಂಭಿಸಿವೆ. ಕರ್ನಾಟಕದಲ್ಲಿ ಹೀರೊ ಮೋಟೊಕಾರ್ಪ್ ದ್ವಿಚಕ್ರ ತಯಾರಿಕಾ ಘಟಕ ಆರಂಭಿಸುವ ಸಂಬಂಧ ಮಾತುಕತೆಯೂ ನಡೆಯಿತು. ಕಂಪನಿ ಕೇಳಿದಷ್ಟು ವಿನಾಯತಿ–ರಿಯಾಯತಿಗಳನ್ನು ಕರ್ನಾಟಕ ಸರ್ಕಾರ ನೀಡಲಿಲ್ಲ. ಈ ವಿಚಾರದಲ್ಲಿ ಕಂಪನಿ ಮತ್ತು ಸರ್ಕಾರ ವರ್ಷ ಕಾಲ ಜಗ್ಗಾಡಿದವು. ಆ ಅವಕಾಶವನ್ನು ಬಳಸಿಕೊಳ್ಳಲು ತೆಲಂಗಾಣ ಮತ್ತು ಆಂಧ್ರ ಪ್ರದೇಶ ಸರ್ಕಾರ ಪೈಪೋಟಿಗೆ ಬಿದ್ದವು. ವಿಪರೀತ ಎನಿಸುವಷ್ಟು ರಿಯಾಯತಿ ಘೋಷಿಸಿದವು. ಕಡೆಗೆ ಹೀರೋ ಮೋಟೊಕಾರ್ಪ್ ತಯಾರಿಕಾ ಘಟಕ ಆಂಧ್ರ ಪ್ರದೇಶದ ಪಾಲಾಯಿತು. ಕೈಗಾರಿಕೆ–ಉದ್ಯಮ ಸ್ಥಾಪನೆ ಸಂಬಂಧ ಆ ರಾಜ್ಯಗಳಿಗೆ ಇರುವ ಹಸಿವನ್ನು ಅದು ತೋರಿಸುತ್ತದೆ. ಆದರೆ ಕರ್ನಾಟಕದಲ್ಲಿ ಅಂತಹ ಹಸಿವು ಇಲ್ಲ. ಈ ಕಾರಣದಿಂದಲೇ ಇಲ್ಲಿ ಘೋಷಣೆಯಾಗುವ ಹೂಡಿಕೆಗಳಲ್ಲಿ ಬಹುತೇಕವು ಕಾಗದದ ಮೇಲಷ್ಟೇ ಉಳಿಯುತ್ತವೆ’ ಎಂಬುದು ಅವರ ವಿಶ್ಲೇಷಣೆ.

ಒಟ್ಟಾರೆ ಬಂಡವಾಳ ಆಕರ್ಷಣೆಗೆ ಇರುವ ವಿಪುಲ ಅವಕಾಶಗಳನ್ನು ಸರ್ಕಾರದ ಕೈಗಾರಿಕಾ ನೀತಿ, ವಿಳಂಬ ಧೋರಣೆಯ ಕಾರಣಕ್ಕೆ ಕೈಚೆಲ್ಲಬೇಕಾಗಿದೆ ಎಂಬುದರತ್ತ ಉದ್ಯಮಿಗಳ ಅಭಿಪ್ರಾಯಗಳು ಬೊಟ್ಟು ಮಾಡುತ್ತವೆ. ಭೂಸ್ವಾಧೀನ ಮತ್ತು ವಿವಿಧ ಅನುಮತಿ ನೀಡುವ ಪ್ರಕ್ರಿಯೆಗಳನ್ನು ಸರಳ ಹಾಗೂ ತ್ವರಿತಗೊಳಿಸಿದರೆ ಬಂಡವಾಳವು ಬೇರೆಡೆಗೆ ಹೋಗುವುದನ್ನು ತಪ್ಪಿಸಬಹುದು ಎಂಬುದರತ್ತಲೂ ಗಮನ ಸೆಳೆಯುತ್ತವೆ.

₹5.20 ಲಕ್ಷ ಕೋಟಿ
ಅನುಮೋದನೆ ಹಂತದಲ್ಲಿರುವ ಹೂಡಿಕೆ ಪ್ರಸ್ತಾವಗಳು

₹7.26 ಲಕ್ಷ ಕೋಟಿ
2025ರ ಸಮಾವೇಶದ ಘೋಷಣೆಯಲ್ಲಿ ವಾಸ್ತವೀಕರಿಸಬೇಕಾದ ಹೂಡಿಕೆ ಗುರಿ

‘ಕಾಗದದ ಮೇಲಷ್ಟೇ ಉದ್ಯಮಸ್ನೇಹಿ’



ಕರ್ನಾಟಕವು ಕೈಗಾರಿಕೆ ಮತ್ತು ಉದ್ಯಮಗಳ ಸ್ಥಾಪನೆಯಲ್ಲಿ ದೇಶದ ಬೇರೆಲ್ಲಾ ರಾಜ್ಯಗಳಿಗಿಂತ ಬಹಳ ಮುಂದೆ ಇದೆ. ಆದರೆ ರಾಜ್ಯವು ಉದ್ಯಮಸ್ನೇಹಿ ಎಂಬುದು ಕಾಗದದ ಮೇಲಷ್ಟೇ ಇರುವ ಘೋಷಣೆ. ಕರ್ನಾಟಕವು ಉದ್ಯಮಸ್ನೇಹಿ ಎಂದಾಗಿದ್ದರೆ, ಹೂಡಿಕೆದಾರರ ಸಮಾವೇಶದಲ್ಲಿ ಘೋಷಣೆಯಾದ ಹೂಡಿಕೆಗಳೆಲ್ಲವೂ ಸ್ಥಾಪನೆಯಾಗಬೇಕಿತ್ತು. ಆದರೆ ಹಾಗೆ ಆಗುತ್ತಿಲ್ಲ. ಇದು ನಮ್ಮೆಲ್ಲರ ಎದುರು ದೊಡ್ಡ ಪ್ರಶ್ನೆಗಳನ್ನು ಇರಿಸಿದೆ. ಉದ್ಯಮಗಳ ಸ್ಥಾಪನೆಗೆ ಅಗತ್ಯವಿರುವ ಅನುಮತಿಗಳನ್ನು ಪಡೆಯುವುದೇ ದೊಡ್ಡ ಸಮಸ್ಯೆಯಾಗದೆ. ಅನುಮತಿಗಾಗಿಯೇ ಹಲವು ತಿಂಗಳು ಅಲೆದಾಡಬೇಕಾದ ಸ್ಥಿತಿ ಇದೆ. ಇವುಗಳ ಜತೆಗೆ ಮೂಲಸೌಕರ್ಯಗಳನ್ನು ಒದಗಿಸುವಲ್ಲಿಯೂ ಹಲವು ಸಮಸ್ಯೆಗಳಿವೆ. ಉತ್ತಮ ರಸ್ತೆ ಸಂಪರ್ಕ, ನೀರು ಮತ್ತು ವಿದ್ಯುತ್ ನಿರಂತರ ಪೂರೈಕೆಯಲ್ಲಿ ಕೊರತೆಗಳಿವೆ. ಅದನ್ನು ಸರ್ಕಾರ ನೀಗಿಸಬೇಕು. ಹೊಸತಲೆಮಾರಿನ ಕೈಗಾರಿಕೆ–ಉದ್ಯಮಗಳಿಗೆ ಅಗತ್ಯವಿರುವಂತಹ ಕೌಶಲಭರಿತ ಉದ್ಯೋಗಿಗಳನ್ನು ಒದಗಿಸುವಲ್ಲಿ ರಾಜ್ಯ ಹಿಂದೆ ಬಿದ್ದಿದೆ. ಕೌಶಲ ಅಭಿವೃದ್ಧಿಗೆ ಸರ್ಕಾರ ಇನ್ನಷ್ಟು ಒತ್ತು ನೀಡಬೇಕು. ತಂತ್ರಜ್ಞಾನ, ಕೈಗಾರಿಕೆ, ಸೇವಾ ವಲಯವೇ ಕರ್ನಾಟಕದ ಶಕ್ತಿ. ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು ಅಷ್ಟೆ. ಈ ಎಲ್ಲ ಸಮಸ್ಯೆಗಳನ್ನು ನಿವಾರಿಸಿಕೊಂಡು ಸರ್ಕಾರವು, ಉದ್ಯಮಿಗಳೊಂದಿಗೆ ಸಮನ್ವಯ ಸಾಧಿಸಿದರೆ ಘೋಷಣೆಯಾದ ಒಪ್ಪಂದವನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಹೆಚ್ಚು ಗಮನ ಹರಿಸಬೇಕು.

ಎಂ.ಜಿ. ಬಾಲಕೃಷ್ಣ, ಅಧ್ಯಕ್ಷ, ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಫಿಕ್ಕಿ)

‘ಗರಿಷ್ಠ ಪ್ರಮಾಣದ ಅನುಷ್ಠಾನಕ್ಕೆ ಯತ್ನ’

2022ರ ಹೂಡಿಕೆದಾರರ ಸಮಾವೇಶದಲ್ಲಿ, ಹಸಿರು ಜಲಜನಕ ಕ್ಷೇತ್ರಕ್ಕೆ ₹2 ಲಕ್ಷ ಕೋಟಿಗೂ ಹೆಚ್ಚು ಹೂಡಿಕೆ ಘೋಷಣೆಗಳು ಆಗಿದ್ದವು. ಕಾರ್ಯಸಾಧ್ಯತೆ ಅಧ್ಯಯನದ ವೇಳೆ ಅವುಗಳಿಂದ ರಾಜ್ಯಕ್ಕಾಗಲೀ, ಜನರಿಗಾಗಲೀ ಹೆಚ್ಚಿನ ಉಪಯೋಗ ಇಲ್ಲ ಎಂಬುದು ಗೊತ್ತಾಯಿತು. ಹೂಡಿಕೆ ಘೋಷಿಸಿದ್ದವರೂ, ಹಿಂದೆ ಸರಿದಿದ್ದಾರೆ. ಹೀಗಾಗಿ ಹಿಂದಿನ ಹೂಡಿಕೆದಾರರ ಸಮಾವೇಶದ ಘೋಷಣೆಗೂ, ವಾಸ್ತವಿಕ ಹೂಡಿಕೆಗೂ ಬಹಳ ಅಂತರವಿದೆ.

ಆದರೆ ಈ ಬಾರಿ ಹಾಗೆ ಆಗದಂತೆ ಎಚ್ಚರವಹಿಸಿದ್ದೇವೆ. ಕಾರ್ಯಸಾಧ್ಯತೆ ಮತ್ತು ಹೂಡಿಕೆ ಸಾಮರ್ಥ್ಯವನ್ನು ಪರಿಗಣಿಸಿ, ಸಮಾವೇಶಕ್ಕೆ ಕರೆಸಿದ್ದೆವು. ಬರಿಯ ಘೋಷಣೆ ಮಾಡುವವರನ್ನು ಆರಂಭದ ಹಂತದಲ್ಲೇ ಹೊರಗಿಟ್ಟಿರುವ ಕಾರಣ, ಈ ಬಾರಿ ಗರಿಷ್ಠ ಪ್ರಮಾಣದ ಹೂಡಿಕೆ ಆಗಲಿದೆ. 2025ರ ಹೂಡಿಕೆದಾರರ ಸಮಾವೇಶದಲ್ಲಿ ಘೋಷಣೆಯಾದ ಹೂಡಿಕೆಗಳಲ್ಲಿ ಶೇ 70ಕ್ಕಿಂತಲೂ ಹೆಚ್ಚು ಅನುಷ್ಠಾನಕ್ಕೆ ತರಬೇಕು ಎಂಬ ಗುರಿ ಹಾಕಿಕೊಳ್ಳಲಾಗಿದೆ. ಅದನ್ನು ಸಾಧಿಸುತ್ತೇವೆ. ರಾಜ್ಯದಲ್ಲಿ ಹೂಡಿಕೆಗೆ ಅವಕಾಶ ಉತ್ತಮವಾಗಿದೆ.

ಬೆಂಗಳೂರಿನಲ್ಲಿ ಎಂಆರ್‌ಒ ಘಟಕ ಆರಂಭಿಸುವುದಾಗಿ, ಇಂಡಿಗೊ ಯಾವ ಸಮಾವೇಶದಲ್ಲೂ ಘೋಷಿಸಿರಲಿಲ್ಲ. ಈಗ ನೇರವಾಗಿ ₹1,100 ಕೋಟಿಗೂ ಹೆಚ್ಚು ಹೂಡಿಕೆಗೆ ಕ್ರಮ ತೆಗೆದುಕೊಂಡಿದೆ.

ಕೈಗಾರಿಕೆ, ಉದ್ಯಮಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ನಡೆಸಲು ಈ ಹಿಂದೆ ಇದ್ದ ಏಕಗವಾಕ್ಷಿ ವ್ಯವಸ್ಥೆಯಲ್ಲಿ ಹಲವು ತೊಡಕುಗಳು ಇದ್ದವು. ಅದರಿಂದಲೇ ವಿಳಂಬವಾಗುತ್ತಿದೆ ಎಂದು ಉದ್ಯಮವಲಯದಿಂದ ದೂರುಗಳು ಬರುತ್ತಿದ್ದವು. ಅದನ್ನೆಲ್ಲಾ ಕೂಲಂಕಷವಾಗಿ ಪರಿಗಣಿಸಿ, ನೂತನ ಏಕಗವಾಕ್ಷಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಉದ್ಯಮಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ 150ಕ್ಕೂ ಹೆಚ್ಚು ಅನುಮೋದನೆ ಮತ್ತು ಅನುಮತಿಗಳಿಗೆ ಒಂದೆಡೆಯೇ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯ ಸರ್ಕಾರದ 30ಕ್ಕೂ ಹೆಚ್ಚು ಇಲಾಖೆಗಳು ಮತ್ತು ವಿವಿಧ ನಿಗಮ ಮಂಡಳಿಗಳು ಈ ವ್ಯವಸ್ಥೆಯ ಅಡಿ ಕಾರ್ಯನಿರ್ವಹಿಸುತ್ತವೆ. ಈ ಮೂಲಕ ಏಕಗವಾಕ್ಷಿ ವ್ಯವಸ್ಥೆಯಲ್ಲಿ ಇದ್ದ ತೊಡಕುಗಳನ್ನು ನಿವಾರಿಸಲಾಗಿದೆ.

ಎಂ.ಬಿ.ಪಾಟೀಲ, ಬೃಹತ್ ಕೈಗಾರಿಕಾ ಸಚಿವ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 1-6-2000

- **ಕೃಷ್ಣಾ ಮೇಲ್ದಂಡೆ: 2ನೇ ಹಂತಕ್ಕೆ ಕೇಂದ್ರ ಒಪ್ಪಿಗೆ**

ನವದೆಹಲಿ, ಮೇ 31– ಕೃಷ್ಣಾ ಮೇಲ್ದಂಡೆಯ ಎರಡನೇ ಹಂತದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಇಂದು ತಾಂತ್ರಿಕ ಮತ್ತು ಆರ್ಥಿಕ ಅನುಮತಿಯನ್ನು ನೀಡಿತು.

ಇಲ್ಲಿ ಇಂದು ಸೇರಿದ ಉನ್ನತಮಟ್ಟದ ಸಭೆಯಲ್ಲಿ ನಡೆದ ಚರ್ಚೆಯ ನಂತರ ಆಲಮಟ್ಟಿ ಬಲದಂಡೆ ಕಾಲುವೆ (130 ಕಿ.ಮೀ. ಉದ್ದ). ಆಲಮಟ್ಟಿ ಎಡದಂಡೆ ಕಾಲುವೆ (77 ಕಿ.ಮೀ. ನಿಂದ 103 ಕಿ.ಮೀ) ಮುಳವಾಡ ಏತ ನೀರಾವರಿ ಕಾಲುವೆ (100 ಕಿ.ಮೀ.) ಹಾಗೂ ನಾರಾಯಣಪುರ ಬಲದಂಡೆ ಕಾಲುವೆಗೆ (96 ಕಿ.ಮೀ.) ತಾಂತ್ರಿಕ ಮತ್ತು ಆರ್ಥಿಕ ಅನುಮತಿಯನ್ನು ನೀಡಲಾಯಿತು.

50 ವರ್ಷಗಳ ಹಿಂದೆ

ಭಾನುವಾರ, 1-6-1975

- **‘ಡಿಎಂಕೆ ಸರ್ಕಾರದಿಂದ ಅನಗತ್ಯ ರಾಜಕೀಯ’**

ಮದರಾಸು, ಮೇ 31– ಸೇಲಂ ಉಕ್ಕು ಕಾರ್ಖಾನೆ ಪ್ರಶ್ನೆಯನ್ನು ತಮಿಳುನಾಡಿನ ಡಿ.ಎಂ.ಕೆ. ಸರ್ಕಾರ ಅನಗತ್ಯವಾಗಿ ‘ರಾಜಕೀಯ’ ಮಾಡಲು ಯತ್ನಿಸುತ್ತಿದೆ ಎಂದು ಕೇಂದ್ರ ಉಕ್ಕು ಮತ್ತು ಗಣಿಗಳ ಸಚಿವ ಚಂದ್ರಜಿತ್ ಯಾದವ್ ಹೇಳಿದರು.

ಯೋಜನೆಯನ್ನು ಕೇಂದ್ರ ತಾತ್ಕಾಲಿಕವಾಗಿ ಕೈಬಿಟ್ಟಿದೆ ಎಂಬ ತಮಿಳುನಾಡು ಸರ್ಕಾರದ ವಾದವನ್ನು ನಿರಾಕರಿಸಿದ ಯಾದವ್, ಈ ವರ್ಷ ಯೋಜನೆಗಾಗಿ ಮೂರು ಕೋಟಿ ರೂಪಾಯಿಗಳ ವೆಚ್ಚ ಹೆಚ್ಚಿಸಲು ತಾವು ಯೋಜನಾ ಆಯೋಗ ಮತ್ತು ಹಣಕಾಸು ಖಾತೆಯನ್ನು ಒತ್ತಾಯ ಮಾಡುತ್ತಿರುವುದಾಗಿ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜೂನ್ 1, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಷಷ್ಠಿ ಗಂ. 20-00 ನಕ್ಷತ್ರ: ಆಶ್ಲೇಷ ಗಂ. 21-37 ಯೋಗ: ಧ್ರುವ ಗಂ. 9-11 ಕರಣ: ಕೌಲವ ಗಂ. 8-01, ವೃಷಭ ಮಾಸದ 18 ನೇ ದಿನ. ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-06 **ಸೂರ್ಯಾಸ್ತ :** 06-51
ಮುಸ್ಲಿಂ ದಿನಾಂಕ : 04 ಜುಲ್‌ಹಿಜಾ
ದಿನ ವಿಶೇಷ: ವಿಂಧ್ಯವಾಸಿನಿ ಪೂಜಾ, ಅರಣ್ಯ ಷಷ್ಠಿ
ಅದೃಷ್ಟ ಸಂಖ್ಯೆ : 5, 8

ಮೇಷ: ಪರಿಶ್ರಮ ಮತ್ತು ಬುದ್ಧಿವಂತಿಕೆಯ ಜೊತೆಗೆ ಹೆಚ್ಚು ಸಮಯ ಕೆಲಸಕ್ಕೆ ಮೀಸಲಿಡಿ. ಆಲಸ್ಯತನವನ್ನು ದೂರಮಾಡಿದರೆ ಶುಭವಾಗುವುದು. ವ್ಯಾಪಾರ ವ್ಯವಹಾರಗಳ ಬಗೆಗೆ ಮುಂದಿನ ಪೀಳಿಗೆಗೆ ತಿಳಿಸಿ ಕೊಡುವಿರಿ.

ವೃಷಭ: ಮಕ್ಕಳ ವ್ಯಾಸಂಗದ ಬಗ್ಗೆ ಸಂಬಂಧಿಕರಲ್ಲಿ ಚರ್ಚೆ ನಡೆಸಿ, ಅವರಿಂದ ಉತ್ತಮ ಸಲಹೆ ದೊರಕುವುದು. ಕೃಷಿಗೆ ಸಹಾಯವಾಗುವ ಯಂತ್ರಗಳ ಖರೀದಿಯಿಂದ ಲಾಭ ಪಡೆಯುವಿರಿ. ದೂರ ಸಂಚಾರದ ಲಕ್ಷಣವಿದೆ.

ಮಿಥುನ: ನಾನಾ ರೀತಿಯಲ್ಲಿ ಉನ್ನತಿ ಗೋಚರಕ್ಕೆ ಬಂದರೂ ಲೆಕ್ಕಾಚಾರದ ಬಗ್ಗೆ ಗಮನವಿರಲಿ. ಹಿರಿಯರು ಮತ್ತು ಹಿತೈಷಿಗಳಿಂದ ಆಶೀರ್ವಾದ ಪಡೆಯುವುದು ಶುಭ ಸಮಾರಂಭಗಳಿಗೆ ನಾಂದಿಯಾಗುತ್ತದೆ. ಕಂಕಣ ಬಲ ಕೂಡಿಬರಲಿದೆ.

ಕರ್ಕಾಟಕ: ಗುತ್ತಿಗೆ ಕೆಲಸದಲ್ಲಿ ಹೆಚ್ಚು ಅವಕಾಶಗಳು ಒದಗಿ ಬರುವ ಸೂಚನೆ ಕಾಣುವಿರಿ. ಮಕ್ಕಳ ಸಂತೋಷ ಕಂಡು ಮನಸ್ಸಿಗೆ ನೆಮ್ಮದಿಯಾಗುವುದು. ದಿನಾಂತ್ಯದಲ್ಲಿ ತಲೆನೋವಿನಂತಹ ಸಮಸ್ಯೆ ಎದುರಾಗಬಹುದು.

ಸಿಂಹ: ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಅವಕಾಶ ಸಿಗಲಿದೆ. ಸಾಮಾಜಿಕ ಬದುಕಿನಲ್ಲಿ ಉತ್ತಮವಾದ ಸಾಧನೆಯನ್ನು ಮಾಡುವಿರಿ. ಮುಖ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಇಂದು ಉತ್ತಮ ದಿನ.

ಕನ್ಯಾ: ನೀವು ಆರಿಸಿಕೊಂಡ ಮಾರ್ಗದಲ್ಲಿ ಸರಿ ತಪ್ಪುಗಳ ಬಗ್ಗೆ ಯೋಚಿಸಿ ಏಕಾಗ್ರತೆಯಿಂದ ಮುನ್ನಡೆಯಿರಿ. ಇದರಿಂದ ಯಶಸ್ಸು ದೊರೆಯಲಿದೆ. ಶ್ರೀರಾಮ ನಾಮ ಸ್ಮರಣೆ ಮಾಡಿ ಯಶೋವಂತರಾಗಿ.

ತುಲಾ: ಪ್ರೀತಿಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಚರ್ಚೆ ನಡೆಸುವಿರಿ. ಬೆಟ್ಟದಂತೆ ಕಂಡು ಬಂದ ಸಮಸ್ಯೆಯು ನಿಮ್ಮ ಬುದ್ಧಿವಂತಿಕೆಯಿಂದ ಮಂಜಿನಂತೆ ಕರಗಿ ಹೋಗುವುದು.

ವೃಶ್ಚಿಕ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಇನ್ನೂ ಹೆಚ್ಚಿನ ಪೌಷ್ಟಿಕತೆ ಸಿಕ್ಕಿ ಮುಂದುವರೆಯಲಿ. ಮನೆಯ ಆಂತರಿಕ ಪರಿಸ್ಥಿತಿಯು ಸುಧಾರಿಸುವುದು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಧನು: ನಿರೀಕ್ಷಿಸಿದ ಕಾರ್ಯಗಳು ನೆರವೇರಿ, ಮನಸ್ಸಿಗೆ ನೆಮ್ಮದಿ ಸಿಗಲಿದೆ. ಬಿಡಿ ಯಂತ್ರೋಪಕರಣಗಳ ಮಾರಾಟದಿಂದ ಲಾಭವಾಗಲಿದೆ. ವಿವಾದಗಳಿಂದ ದೂರ ಉಳಿಯುವುದರಿಂದ ಗೌರವ ಕಾಪಾಡಿಕೊಳ್ಳಬಹುದು.

ಮಕರ: ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣ ಇರುವುದು. ಎಲ್ಲಾ ಕಿರಿ ಕಿರಿಗಳನ್ನೂ ಶಾಂತ ರೀತಿಯಿಂದ ಎದುರಿಸುವಿರಿ. ಎಂತಹ ದುಃಸ್ಥಿತಿಯಿಂದಲೂ ಹೊರಬರುವ ಸಾಮರ್ಥ್ಯ ನಿಮ್ಮಲ್ಲಿದೆ. ಹಸಿರು ಬಣ್ಣ ಅದೃಷ್ಟ ತರುವುದು.

ಕುಂಭ: ಬಹಳ ಬೇಗ ಗುರಿ ತಲುಪಬೇಕೆಂಬ ಹಂಬಲವು ನಿಮ್ಮ ಫಲಿತಾಂಶಕ್ಕೆ ಅಡ್ಡಿ ಮಾಡುವ ಸಾಧ್ಯತೆಯಿದೆ. ಮನೆಯಲ್ಲಿ ಧಾರ್ಮಿಕ ಕಾರ್ಯಗಳು ಜರುಗಲಿವೆ. ನಿಮ್ಮ ಹೆಸರನ್ನು ದುರುಪಯೋಗಪಡಿಸಿಕೊಳ್ಳಲು ಬಿಡಬೇಡಿ.

ಮೀನ: ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಈ ಸುಸಂದರ್ಭವನ್ನು ಸೂಕ್ತವಾಗಿ ಬಳಸಿಕೊಳ್ಳಿ. ಹಿಂದೆಂದೂ ಮಾಡದ ಕೆಲಸಗಳನ್ನು ಈಗ ಮಾಡಬೇಕಾಗ ಬಹುದು. ತಂದೆಯವರ ಆರೋಗ್ಯ ಸ್ಥಿತಿ ಗಂಭೀರವಾಗುವುದು.

ಪದಬಂಧ 6060

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ಬುದ್ಧಿಯಿಲ್ಲದವನು (4)
3.ಮಾವನವರ ಆದಾಯ! (4)
5.ಆಕಾಶ ಇಲ್ಲಿಯೇ ಕಾಣುತ್ತಿದೆ (3)
7.ಪ್ರೇಮಿಗಳ ಅಗಲಿಕೆಯ ನೋವು (3)
9.ಲಾಂಗೂಲ ಹಿಡಿದಿರುವ ಹುಡುಗ (3)
10.ಮೊದಲನೆಯ ಹಿಂದೂ ಸಂವತ್ಸರ (3)
11.ಆಸೆ ಈ ರೀತಿ ಮೂಡಿದೆ (3)
13.ನಯವಾಗಿ ಹೊಳೆಯುತ್ತಿರುವ ಅಕ್ಷಿ (3)
14.ಆನೆಯ ಮರಿ ಇಲ್ಲಿದೆ (3)
16.ಮಾತೆಯಲ್ಲಿರುವ ಗೌರವ! (3)
18.ಬರ ಬಿದ್ದಾಗ ಕಾಣಿಸಿದ ಶವ (4)
19.ಪಕ್ಕದ ಗೃಹವಿದು (4)

ಮೇಲಿಂದ ಕೆಳಕ್ಕೆ

1.ವಿನಯದಿಂದ ಮಾಡಿಕೊಂಡ ಅರಿಕೆ (3)
2.ನಗರದಿಂದ ತಂದಿರುವ ದಾಗೀನು (2)
3.ಭವನದ ಬಳಿರುವ ಕಾಡು (2)
4.ನಡುವೆಯೇ ಬಂದಿರುವ ಕಂಪನ (3)
6.ಬೆಟ್ಟದ ಗವಿ ಇಲ್ಲಿದೆ (3)
8.ಅಶ್ವದ ಮೊಗವಿದು (5)
9.ಬಾಲ ಹಿಡಿದು ಬಂದಿರುವ ಅನುಯಾಯಿ (5)
12.ಅದ್ವಿತೀಯವಾದುದನ್ನು ಹೀಗನ್ನಿ (3)
13.ಈತ ನೃತ್ಯ ಮಾಡುವವನು (3)
15.ದೇವರ ಸ್ತುತಿಯನ್ನು ಹಾಡುವುದು (3)
16.ಮನ್ಮಥನ ಇನ್ನೊಂದು ಹೆಸರು (2)
17.ಧಾನ್ಯದ ಹೊಡೆ ಇಲ್ಲಿದೆ (2)



6059ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಸ್ತಿಭಾರ 2.ಅಭಿಜಾತ
4.ವಿನಾಶ 6.ಪಲ್ಲವಿ
8.ಮರುಕ 9.ಲೋಕಕಲ್ಯಾಣ
10.ಗುಲಾಮ 11.ಕಡಸು
13.ಕಣಕ 14.ಹಿತಶತ್ರು
15.ಅನುಲೇಪ

ಮೇಲಿಂದ ಕೆಳಕ್ಕೆ:
1.ಅಪರೂಪ 3.ತಲೆಹೋಕ
5.ನಾಮಕರಣ 7.ವಿಲೋಮ
8.ಮಣಕ 10.ಗುಣಾಗ್ರಹಿ
12.ಸುರಚಾಪ

ಸುಡೊಕು 6444

7		5	9					
					2		9	
2		9	3	7		5		4
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6443 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜಮ್ಮು–ಕಾಶ್ಮೀರದಿಂದ ಮುಂಬೈಗೆ 'ಚೆರಿ' ಹಣ್ಣು ಹೊತ್ತು ಸಾಗಿದ ರೈಲು

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಕಾತ್ರಾ ರೈಲು ನಿಲ್ದಾಣದಿಂದ 24 ಟನ್ ಚೆರಿ ಹಣ್ಣುಗಳನ್ನು ಹೊತ್ತ ಮೊದಲ ಸರಕು ಸಾಗಣೆ (ಪಾರ್ಸಲ್) ರೈಲು ಶನಿವಾರ ಮುಂಬೈಗೆ ಪ್ರಯಾಣ ಬೆಳೆಸಿತು.

ಜಮ್ಮು ರೈಲ್ವೆ ವಿಭಾಗದ ಈ ಪ್ರಥಮ ಹೆಜ್ಜೆ ಐತಿಹಾಸಿಕ ಎಂದು ಉತ್ತರ ರೈಲ್ವೆ ಹೇಳಿದೆ. ರೈಲು 30 ಗಂಟೆಗಳಲ್ಲಿ ಮುಂಬೈನ ಬಾಂದ್ರಾ ರೈಲು ನಿಲ್ದಾಣವನ್ನು ತಲುಪಲಿದೆ.

ಕತ್ರಾದ ಮಾತಾ ವೈಷ್ಣೋದೇವಿ ರೈಲು ನಿಲ್ದಾಣ ಮತ್ತು ಜಮ್ಮು ನಿಲ್ದಾಣದಿಂದ ಇನ್ನೂ ಎರಡು ರೈಲುಗಳು ಎರಡು ದಿನದಲ್ಲಿ ಚೆರಿ ಹಣ್ಣು ಸಾಗಿಸಲು ಸಜ್ಜಾಗಿವೆ. ಕಾಶ್ಮೀರದ ಹಣ್ಣು ಬೆಳೆಗಾರರು ಇದನ್ನು ಸ್ವಾಗತಿಸಿ, ಬೇಗ ಹಾಳಾಗುವ ಹಣ್ಣುಗಳನ್ನು ದೇಶದ ವಿವಿಧ ಭಾಗಗಳಿಗೆ ಕಣಿವೆಯಿಂದ ಸಾಗಣೆ ಮಾಡಲು ನೇರ ರೈಲು ಸಂಪರ್ಕ ಕಲ್ಪಿಸಬೇಕು ಎಂಬ ಬಹುದಿನದ ನಿರೀಕ್ಷೆ ಈಡೇರುವ ವಿಶ್ವಾಸ ಇದೆ ಎಂದಿದ್ದಾರೆ.

'ಇತ್ತೀಚೆಗಷ್ಟೇ ರಚಿಸಲಾದ ಜಮ್ಮು ರೈಲು ನಿಗಮ 24 ಟನ್ ಚೆರಿ ಹಣ್ಣನ್ನು ಸಾಗಿಸುತ್ತಿರುವ ಈ ದಿನ ಐತಿಹಾಸಿಕ. ಮುಂದಿನ ದಿನಗಳಲ್ಲಿ ಮತ್ತಷ್ಟು ಭಾಗಗಳಿಂದ ಹಣ್ಣು ಸಾಗಣೆ ಮಾಡಲಾಗುವುದು' ಎಂದು ಉತ್ತರ ರೈಲ್ವೆ ಹಿರಿಯ ಅಧಿಕಾರಿ ಉಚಿತ್ ಸಿಂಘಾಲ್ ಹೇಳಿದ್ದಾರೆ.

ಜಮ್ಮುವಿನ ನವ ಕಾಶ್ಮೀರ ಹಣ್ಣು ಬೆಳೆಗಾರರ ಸಂಘದ ಅಲಿ ಮೊಹಮ್ಮದ್, 'ಈ ಹಿಂದೆ ಪಾರ್ಸಲ್ ರೈಲಿಗಾಗಿ ಅಮೃತಸರಕ್ಕೆ ಹೋಗಬೇಕಾಗಿತ್ತು. ಕಾಶ್ಮೀರದಿಂದ ದೇಶದ ಇತರೆ ಭಾಗಕ್ಕೆ ಶೀಘ್ರವಾಗಿ ನೇರ ರೈಲು ಸಂಪರ್ಕ ಕಲ್ಪಿಸುವಂತೆ ಪ್ರಧಾನಿ ಮೋದಿ ಅವರನ್ನು ಮನವಿ ಮಾಡುತ್ತೇವೆ' ಎಂದಿದ್ದಾರೆ.

ಈ ತಿಂಗಳ ಆರಂಭದಲ್ಲೇ ಕಾತ್ರಾದಲ್ಲಿ ಜಮ್ಮುವಿನಿಂದ ಶ್ರೀನಗರಕ್ಕೆ ನೇರ ರೈಲನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಬೇಕಿತ್ತು. ಆದರೆ ಹವಾಮಾನ ವೈಪರೀತ್ಯ ಕಾರಣಕ್ಕೆ ಮುಂದೂಡಲಾಗಿದೆ.

ಪಾಂಡುರಂಗ ಹೆಗಡೆಗೆ 'ಚಿಂತನಾ ನಾಯಕತ್ವ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಕೋಝಿಕ್ಕೋಡ್: ಅಪ್ಪಿಕೋ ಚಳವಳಿ ಸಂಸ್ಥಾಪಕ, ಪರಿಸರವಾದಿ ಮತ್ತು ಸಾಮಾಜಿಕ ಹೋರಾಟಗಾರ ಪಾಂಡುರಂಗ ಹೆಗಡೆ ಅವರು ಅರಣ್ಯ ಸಂರಕ್ಷಣೆಯ ಅಮೂಲ್ಯ ಸೇವೆ ಮತ್ತು ಸಮೂಹ ಆಧಾರಿತ ಪರಿಸರ ಚಟುವಟಿಕೆಗಳಿಗಾಗಿ 'ಸಂಸದ ವೀರೇಂದ್ರ ಕುಮಾರ್ ಸ್ಮಾರಕ ರಾಷ್ಟ್ರೀಯ ಚಿಂತನಾ ನಾಯಕತ್ವ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ಕೇರಳದ ಲೇಖಕ, ರಾಜಕಾರಣಿ ಮತ್ತು 'ಮಾತೃಭೂಮಿ' ಪತ್ರಿಕೆಯ ಮಾಜಿ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಎಂ.ಪಿ. ವೀರೇಂದ್ರ ಕುಮಾರ್ ಅವರ ಐದನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜಲ ಸಂರಕ್ಷಣಾವಾದಿ ಮತ್ತು ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ರಾಜಸ್ಥಾನದ ತರುಣ್ ಭಾರತ್ ಸಂಘದ ರಾಜೇಂದ್ರ ಸಿಂಗ್ ಅವರು ಪಾಂಡುರಂಗ ಹೆಗಡೆ ಅವರಿಗೆ ಚೊಚ್ಚಲ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಪರಿಸರವಾದಿ ಪಾಂಡುರಂಗ ಹೆಗಡೆ ಅವರಿಗೆ 'ವೀರೇಂದ್ರ ಕುಮಾರ್ ರಾಷ್ಟ್ರೀಯ ಚಿಂತನಾ ನಾಯಕತ್ವ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಎನ್. ರಾಮ್, ಎಂ.ವಿ. ಶ್ರೇಯಾಂಶ್ ಕುಮಾರ್, ರಾಜೇಂದ್ರ ಸಿಂಗ್ ಮತ್ತಿತರರು ಹಾಜರಿದ್ದರು. –ಪಿಟಿಐ ಚಿತ್ರ

ಪ್ರಶಸ್ತಿಯು ಪ್ರಶಂಸಾ ಪತ್ರ, ಫಲಕ ಮತ್ತು ₹5 ಲಕ್ಷ ನಗದು ಒಳಗೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ಶಿರಸಿ ಭಾಗದ ಪಶ್ಚಿಮ ಘಟ್ಟಗಳ ಸಂರಕ್ಷಣೆಯಲ್ಲಿ ತೊಡಗಿಕೊಂಡಿರುವ 'ಪ್ರಕೃತಿ' ಪರಿಸರ ಸಂಸ್ಥೆ ಸದಸ್ಯರೊಂದಿಗೆ ಪ್ರಶಸ್ತಿ ಮೊತ್ತವನ್ನು ಹಂಚಿಕೊಳ್ಳುವುದಾಗಿ ಪಾಂಡುರಂಗ ಹೆಗಡೆ ಅವರು ಪ್ರಕಟಿಸಿದರು.

ಅಪ್ಪಿಕೋ ಚಳವಳಿಯ ಸಂಸ್ಥಾಪಕ ಪಾಂಡುರಂಗ ಹೆಗಡೆ ಅವರು ಜೈವಿಕ ಸಂರಕ್ಷಣೆ ಮತ್ತು ಸುಸ್ಥಿರ ಜೀವನ ಪದ್ಧತಿಗಳ ಉಳಿವಿನ ಹೋರಾಟದಲ್ಲಿ ದಶಕಗಳಿಂದಲೂ ಮುಂಚೂಣಿ ಪಾತ್ರ ವಹಿಸುವ ಮೂಲಕ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ.

ಅಮೃತಾ ದೇವಿ ಬಿಷ್ಣೋಯಿ ಮತ್ತು ಸುಂದರ್ ಲಾಲ್ ಬಹುಗುಣ ಅವರ ಚಿಪ್ಕೋ ಚಳವಳಿಯಿಂದ ಪ್ರೇರಿತರಾಗಿ ಉತ್ತರ ಕನ್ನಡದಲ್ಲಿ ಪಾಂಡುರಂಗ ಹೆಗಡೆ ಅವರು ಅಪ್ಪಿಕೋ ಚಳವಳಿ ಆರಂಭಿಸಿದ್ದರು. ಇದು ಅರಣ್ಯ ನಾಶದ ವಿರುದ್ಧ ತಳಮಟ್ಟದ ಹೋರಾಟವಾಗಿ ಪರಿವರ್ತನೆಯಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ 'ದಿ ಹಿಂದೂ' ಪತ್ರಿಕೆಯ ಮಾಜಿ ಮುಖ್ಯ ಸಂಪಾದಕ ಎನ್.ರಾಮ್ ಅವರು, ಮಾಧ್ಯಮ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಉಳಿವಿಗಾಗಿ ವೀರೇಂದ್ರ ಕುಮಾರ್ ಅವರು ನಡೆಸಿದ ದಿಟ್ಟತನದ ಹೋರಾಟವನ್ನು ಸ್ಮರಿಸಿಕೊಂಡರು. ಅಲ್ಲದೇ ಐದು ದಶಕಗಳ ತಮ್ಮ ಮತ್ತು ವೀರೇಂದ್ರ ಕುಮಾರ್ ಅವರ ವೃತ್ತಿಪರ ಮತ್ತು ವೈಯಕ್ತಿಕ ಸ್ನೇಹವನ್ನು ನೆನಪಿಸಿಕೊಂಡರು.

'ಮಾತೃಭೂಮಿ' ಮುಖ್ಯಸ್ಥ ಮತ್ತು ವ್ಯವಸ್ಥಾಪಕ ಸಂಪಾದಕರಾದ ಪಿ.ವಿ. ಚಂದ್ರನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವ್ಯವಸ್ಥಾಪಕ ನಿರ್ದೇಶಕರಾದ ಎಂ.ವಿ. ಶ್ರೇಯಾಂಶ್ ಕುಮಾರ್ ಅವರು ಪ್ರಾಸ್ತಾವಿಕ ಮಾತುಗಳನ್ನು ಆಡಿದರು.

ವಂದನಾ ಶಿವ, ಜೈರಾಮ್ ರಮೇಶ್, ಕಾರ್ಯಕ್ರಮದಲ್ಲಿ ಹಾಜರಿದ್ದರು.

ಭಾರಿ ಗಾಳಿ: ಕೆಳಗೆ ಬಿದ್ದ ಪ್ಯಾರಾಗ್ಲೈಡರ್

ಮಂಡಿ (ಪಿಟಿಐ): ಬಾನಂಗಳದಲ್ಲಿ ಹಾರಾಟ ನಡೆಸುತ್ತಿದ್ದಾಗ ಭಾರಿ ಗಾಳಿ ಬೀಸಿದ್ದರಿಂದ, ನಿಯಂತ್ರಣ ಕಳೆದುಕೊಂಡ ಪ್ಯಾರಾಗ್ಲೈಡರ್ ಒಬ್ಬರು ಜಿಲ್ಲೆಯ ಗ್ರಾಮವೊಂದರ ಕಟ್ಟಡದ ಮಹಡಿ ಮೇಲೆ ಬಿದ್ದು ಗಾಯಗೊಂಡಿದ್ದಾರೆ.

ಬಿಹಾರದ ವಿಜಯ್‌ಕುಮಾರ್ ಗಾಯಗೊಂಡವರು. ಸ್ನೇಹಿತರೊಂದಿಗೆ ಪ್ಯಾರಾಗ್ಲೈಡಿಂಗ್‌ನಲ್ಲಿ ಪಾಲ್ಗೊಂಡಿದ್ದರು. ನಿಗದಿಪಡಿಸಿದ್ದ ಸ್ಥಳದಲ್ಲಿ ಸ್ನೇಹಿತರು ಇಳಿದರೆ, ಇವರು 20 ಕಿ.ಮೀ. ದೂರಕ್ಕೆ ತೆರಳಿದರು ಎಂದು ಪೊಲೀಸರು ತಿಳಿಸಿದ್ದಾರೆ. ಪ್ಯಾರಾಗ್ಲೈಡಿಂಗ್‌ನಲ್ಲಿ 18 ವರ್ಷಗಳ ಅನುಭವ ಹೊಂದಿರುವ ಇವರು, ಬಾನಿನಿಂದ ನೆಲಕ್ಕೆ ಇಳಿಯುವಾಗ ನಿಯಂತ್ರಣ ತಪ್ಪಿ ಕಟ್ಟಡವೊಂದರ ಮಹಡಿ ಮೇಲೆ ಬಿದ್ದರು. ಇದನ್ನು ಗಮನಿಸಿದ ಸ್ಥಳೀಯರು ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ : ಮೈಸೂರು

ಸಂ: ಕರಾಸಾ/ಕಾನಿಅ/ಮೈ/ಕಿಅ/122/2025–26 ದಿನಾಂಕ: 31.05.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ: 04/2025–26

ಕರ್ನಾಟಕ ಲೋಕೋಪಯೋಗಿ ಇಲಾಖೆ / ಸಿ.ಪಿ.ಡಬ್ಲ್ಯೂಡಿ ನಲ್ಲಿ ನೋಂದಾಯಿತರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಸಂ 04/2025–26ಕ್ಕೆ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ http://kppp.karnataka.gov.in ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕ್ರ ಸಂ.	ಕೆಲಸದ ಹೆಸರು	ಟೆಂಡರ್ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಮೊತ್ತ
1.	ನಾಗಮಂಗಲ ಬಸ್ ನಿಲ್ದಾಣದಲ್ಲಿ ಮಳೆ ನೀರು ಚರಂಡಿ ಮತ್ತು ಆರ್.ಸಿ.ಸಿ ಕಲ್ವರ್ಟ್ ನಿರ್ಮಿಸುವುದು.	ರೂ. 169.88	ರೂ.2,53,770/–

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18.06.2025. (2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ವಿವರಗಳನ್ನು ದಿನಾಂಕ: 03.06.2025ರ ನಂತರ ಪಡೆಯಬಹುದು. (3) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕ.ರಾ.ರ.ಸಾ.ನಿಗಮ, ಮೈಸೂರು, ನೆಲ್ಸನ್ ಮಂಡೇಲ ರಸ್ತೆ, ಬನ್ನಿಮಂಟಪ, ಮೈಸೂರು ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ.0821–2498828.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿ, ಕಾಮಗಾರಿ ವಿಭಾಗ, ಮೈಸೂರು.

DIPR/CP/964/Zen/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ
ಕಾರ್ಯಪಾಲಕ ಅಭಿಯಂತರವರ ಕಚೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ
Phone No: 08372-238782 Fax No. 08372-237268 E.Mail : eepwdgad@gmail.com

ನಂ:ಕಾನಿಇಂಗ:ಲೋಇ:ಪಿಬಿ–1 3: ವಿವಿಧ: 2025–26/828 ದಿನಾಂಕ: 30–05–2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ **ಒಟ್ಟು 753.20 ಲಕ್ಷ** ಮೊತ್ತದಲ್ಲಿ **ಒಟ್ಟು 10 ಕಾಮಗಾರಿಗೆ** (ಕನಿಷ್ಠ ಮೊತ್ತ **ರೂ: 4.00 ಲಕ್ಷ** ಹಾಗೂ ಗರಿಷ್ಠ **ಮೊತ್ತ ರೂ: 250.00 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ ಡಬ್ಲ್ಯೂ– 1, 2 ,3 ಹಾಗೂ 4,ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: Part-1)
21318, 18565/Call-4 & 17408/Call-3
ಮೇಲಿನ ಕಾಮಗಾರಿಗಳ ಟೆಂಡರ್ ವಿವರ ಪ್ರಶ್ನೋತ್ತರ **ದಿನಾಂಕ: 06–06–2025** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 09–06–2025** ಮಧ್ಯಾಹ್ನ **4:00** ಗಂಟೆಯ ವರೆಗೆ, ತಾಂತ್ರಿಕ /ಆರ್ಥಿಕ ಬಿಡ್ ತೆರೆಯುವ **ದಿನಾಂಕ: 10–06–2025** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 11–06–2025**

Work Indent No:- Part-2)
21702, 19395/Call-3 20046, 19847/Category-2a, and 20180/Category-1
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ: 13–06–2025** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 17–06–2025** ಮಧ್ಯಾಹ್ನ 4:00 ಗಂಟೆಯ ವರೆಗೆ, ತಾಂತ್ರಿಕ /ಆರ್ಥಿಕ ಬಿಡ್ ತೆರೆಯುವ **ದಿನಾಂಕ: 18–06–2025.**

Work Indent No:- Part-3)
19848 and 5239
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ: 27–06–2025** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 30–06–2025** ಮಧ್ಯಾಹ್ನ **4:00** ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 01–07–2025** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 02–7–2025**

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ವಾ.ಸಾ.ಇ/ಗದಗ/83/ ದೇಶಪಾಂಡೆಪಬ್ಲಿಸಿಟಿ/2025–26
ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಚಿಕೇರಿ ಉಪವಿಭಾಗ, ಯಲ್ಲಾಪುರ–581359
ನಂ. ಎ5/ಬಜೆಟ್/ಟೆಂಡರ್/Campa/Building/ವಿವ–40/2025–26. ದಿನಾಂಕ: 15.05.2025

ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ಲೆಕ್ಕಶೀರ್ಷಿಕೆ: 2406-04-103-1-06-Others-140-Minor works (Campa-06-Others) ಅಡಿಯಲ್ಲಿ ಮುಂಚೂಣಿ ಅರಣ್ಯ ಸಿಬ್ಬಂದಿ ವಸತಿ ಗೃಹ (Complex type Frontline Staff quarters) ಕಟ್ಟಡ ನಿರ್ಮಾಣ ಕಾಮಗಾರಿ ಕುರಿತು ಸಂಕ್ಷಿಪ್ತ ಅಲ್ಪಾವಧಿ ಇ–ಟೆಂಡರ (ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಕೆಡಬ್ಲ್ಯೂ–1 ದ್ವಿ ಲಕೋಟೆ ಪದ್ದತಿ) ಕರೆಯಲಾಗಿದೆ. ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09–06–2025 ಸಾಯಂಕಾಲ 4.00 ಗಂಟೆಗೆ ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಮಂಚಿಕೇರಿ ಉಪ ವಿಭಾಗ, ಮಂಚಿಕೇರಿ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (ದೂರವಾಣಿ ಸಂಖ್ಯೆ: 08419–261273).

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಮಂಚಿಕೇರಿ ಉಪ ವಿಭಾಗ, ಮಂಚಿಕೇರಿ.

DIPR/KWR/KSMCA/143/25-26 Dt.31.05.2025

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ–06/ಜೆಇ/2025–26/566 ದಿನಾಂಕ:– 30.05.2025

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–06/ಜೆಇ/2025–26 ದಿನಾಂಕ: 30.05.2025.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ, ಹರಿಹರ ಮತ್ತು ಚನ್ನಗಿರಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **ಲೆಕ್ಕಶೀರ್ಷಿಕೆ :5054–03–337–0–17–154 ಯೋಜನೆ (ರಾಜ್ಯ ಹೆದ್ದಾರಿ ಸುಧಾರಣೆ) ಅಡಿ 1) ದಾವಣಗೆರೆ ತಾಲ್ಲೂಕು ದಾವಣಗೆರೆ – ಹುಣಸೇಕಟ್ಟೆ ರಾಜ್ಯ ಹೆದ್ದಾರಿ ರಸ್ತೆಯ ಕಿ.ಮೀ. 12.50 ರಿಂದ 18.00 ರವರೆಗೆ (ಆಯ್ದ ಭಾಗಗಳಲ್ಲಿ) ರಸ್ತೆ ಅಭಿವೃದ್ಧಿ ಕಾಮಗಾರಿ. (PWD/2024-25/RD/WORK_INDENT 19130) (Call-3) ಕಾಮಗಾರಿಗೆ ಮೊತ್ತ ರೂ. 100.00 ಲಕ್ಷ ಮತ್ತು ಲೆಕ್ಕಶೀರ್ಷಿಕೆ : 5054–03–337–0–17–160 ಯೋಜನೆ(ರಾಜ್ಯ ಹೆದ್ದಾರಿ ನವೀಕರಣ) ಅಡಿ 2) ಹರಿಹರ ತಾ: ಎನ್.ಹೆಚ್–4 ರಿಂದ ಕೋಣನತಲೆ ಸೇರುವ ರಸ್ತೆ ಕಿಮೀ 26.50 ರಿಂದ 27.00 ಮತ್ತು 28.40 ರಿಂದ 29.60 ರವರೆಗೆ ಮರು ಡಾಂಬರೀಕರಣ (ಆಯ್ದಭಾಗಗಳಲ್ಲಿ) (PWD/2024-25/RD/WORK_INDENT 19374/CALL6) ರೂ. 100.00 ಲಕ್ಷ ಲೆಕ್ಕಶೀರ್ಷಿಕೆ : 5054–04–337–0–01–154 ಯೋಜನೆ (ಜಿಲ್ಲಾ ಮತ್ತು ಇತರೆ ರಸ್ತೆಗಳು ಸುಧಾರಣೆ) ಅಡಿ 3) ದಾವಣಗೆರೆ ತಾಲ್ಲೂಕು ಸಿರಿಗೆರೆ–ಸುಲ್ತಾನಿಪುರ ಮಾರ್ಗ ಚಿನ್ನಸಮುದ್ರ, ಗಂಗನಕಟ್ಟೆ, ನರಗನಹಳ್ಳಿ, ಬಾವಿಹಾಳ್ ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 16.80 ರಿಂದ 22.10 ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (PWD/2024-25/RD/WORK_INDENT 18947) (Call-3) ರೂ. 500.00 ಲಕ್ಷ 4) ದಾವಣಗೆರೆ ತಾಲ್ಲೂಕು ಕೂಡಗನೂರು–ಕೂಡು ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 0.00 ರಿಂದ 3.26ರವರೆಗೆ ರಸ್ತೆ ಅಭಿವೃದ್ಧಿ. (PWD/2024-25/RD/WORK_INDENT19751/CALL-5) ರೂ. 200.00 ಲಕ್ಷ ಮತ್ತು 5) ದಾವಣಗೆರೆ ತಾಲ್ಲೂಕು ಕೊಡಗನೂರು–ಕಾಶೀಪುರ ಮಾರ್ಗ ಕಬ್ಬೂರು, ರಾಮಗೊಂಡನಹಳ್ಳಿ ಜಿಲ್ಲಾ ಮುಖ್ಯ ರಸ್ತೆಯ ಕಿ.ಮೀ. 2.50 ರಿಂದ 5.80 ಮತ್ತು 6.60 ರಿಂದ 9.10 ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. (PWD/2024-25/RD/WORK_INDENT19743/CALL-2) ರೂ. 200.00 ಲಕ್ಷ 6) ಚನ್ನಗಿರಿ ತಾಲ್ಲೂಕು ಮಲ್ಲಿಗೆರೆ–ಹಿರೇಮಳಲಿ ರಸ್ತೆ ಮಾರ್ಗ ಲಕ್ಷ್ಮಿಸಾಗರ ಕಿ.ಮೀ 11.00 ರಿಂದ 13.00 ರವರೆಗೆ ಆಯ್ದಭಾಗಗಳಲ್ಲಿ ರಸ್ತೆ ಅಭಿವೃದ್ಧಿ (PWD/2024-25/RD/WORK_INDENT 19476 Call-3) ರೂ. 100.00 ಲಕ್ಷ** ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕ್ರ.ಸಂ. 3ರ ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 16.06.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 17.06.2025 ಸಂಜೆ 4.30 ಗಂಟೆಯವರೆಗೆ ಮತ್ತು ಕ್ರ.ಸಂ. 1,2,4,5 ಮತ್ತು 6ರ ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 09.06.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 10.06.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/108/ ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಆಯುಕ್ತರವರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560001

NO: DTE-PLAN0SPS1/41/2025 Dated: 31/05/2025

ಇ–ಟೆಂಡರ್ ಅಧಿಸೂಚನೆ

ಆಯುಕ್ತರು ಕಾಲೇಜು ಮತ್ತು ಶಿಕ್ಷಣ ಇಲಾಖೆ ಬೆಂಗಳೂರು ಇವರು ಈ ಕೆಳಕಂಡ ಸಾಮಗ್ರಿಗಳನ್ನು ಮತ್ತು ಸೇವೆಗಳನ್ನು ಪೂರೈಸುವ ಸಂಬಂಧ ಆಸಕ್ತ ಬಿಡ್ ದಾರರಿಂದ ಇ - ಸಂಗ್ರಹಣೆ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಬಿಡ್ ಅನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ಇತರೆ ವಿವರಗಳಿಗಾಗಿ **http://kppp.karnataka.gov.in** ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ಮಾಹಿತಿಯು ಈ ಕೆಳಗಿನಂತಿದೆ

ಟೆಂಡರ್ ಮಾಹಿತಿ	ಕೆಪಿಪಿ ಪೋರ್ಟಲ್‌ನಲ್ಲಿ ದಸ್ತಾವೇಜನ್ನು ಅಪ್ ಲೋಡ್ ಮಾಡುವ ದಿನಾಂಕ	ಪ್ರೀ ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
ಟೆಂಡರ್ ಸಂಖ್ಯೆ: DTE/ 2025–26/IND0038/CALL-2 ಕಂಪ್ಯೂಟರ್ ಸರಬರಾಜು	31.05.2025	05.06.2025 at 12.00 p.m.	09.06.2025 at 5.15 p.m.
ಟೆಂಡರ್ ಸಂಖ್ಯೆ: DTE/ 2025–26/IND0040 ಪೀಠೋಪಕರಣಗಳ ಸರಬರಾಜ	31.05.2025	05.06.2025 at 11.00 a.m.	16.06.2025 at 5.25 p.m.

The Department reserves the right to cancel or reject the tenders without any notification. Details in this regard may be obtained from the website **https://kppp.karnataka.gov.in.**

ಸಹಿ/– ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ

DIPR/CP/RO/957/AAPL/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ–5, ಘನ ತ್ಯಾಜ್ಯ ನಿರ್ವಹಣೆ, ಅನೆಕ್ಸ್ –3 ಕಟ್ಟಡ, 4ನೇ ಮಹಡಿ, ನರಸಿಂಹರಾಜ ಚೌಕ, ಬೆಂಗಳೂರು–560 002.

ಸಂಖ್ಯೆ:ಬೃಬೆಂಮಪಾ/ಕಾಪಾಅ–5/ಆ&ನೈ/ಟೆಂಡರ್/04/2025–26 ದಿನಾಂಕ:31.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕರ್ನಾಟಕ ಸರ್ಕಾರವು 15ನೇ ಹಣಕಾಸು ಅನುದಾನಗಳಡಿಯಲ್ಲಿ less 2 cum ಸಾಮರ್ಥ್ಯದ ಬ್ಯಾಟರಿ ಚಾಲಿತ (ಇವಿ) ಯಾಂತ್ರೀಕೃತ ಕಸ ಗುಡಿಸುವ ಯಂತ್ರಗಳನ್ನು ಖರೀದಿಸಲು ಹಣಕಾಸನ್ನು ಮಂಜೂರು ಮಾಡಿದೆ. ಈ ಹಿನ್ನಲೆಯಲ್ಲಿ ಬ್ಯಾಟರಿ ಚಾಲಿತ (ಇವಿ) ಯಾಂತ್ರೀಕೃತ ಕಸ ಗುಡಿಸುವ ಯಂತ್ರಗಳನ್ನು ಖರೀದಿಸಲು ಯೋಜಿಸಲಾಗಿದೆ.

ಕಾರ್ಯಪಾಲಕ ಅಭಿಯಂತರರು–5, (ಆ&ನೈ) ಇವರು ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿಗಳು/ಸಂಸ್ಥೆಗಳು/ಗುತ್ತಿಗೆದಾರರುಗಳಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಗಳಲ್ಲಿ ಅಧಿಕ ಜನ ಸಂದಣಿ ಪ್ರದೇಶಗಳಾದ ಮಾರುಕಟ್ಟೆಗಳು, ವಾಣಿಜ್ಯ ರಸ್ತೆಗಳಲ್ಲಿ ಧೂಳನ್ನು ಕಡಿಮೆ/ನಿಯಂತ್ರಣಗೊಳಿಸುವ ನಿಟ್ಟಿನಲ್ಲಿ ಸ್ಥಳೀಯ ರಸ್ತೆಗಳನ್ನು ಗುಡಿಸಲು/ಸ್ವಚ್ಛಗೊಳಿಸಲು 2 cum ಗಿಂತಲೂ ಕಡಿಮೆ ಸಾಮರ್ಥ್ಯದ 71 ಬ್ಯಾಟರಿ ಚಾಲಿತ (ಇವಿ) ಸಣ್ಣ ಯಾಂತ್ರೀಕೃತ ಕಸ ಗುಡಿಸುವ ಯಂತ್ರಗಳನ್ನು ಖರೀದಿಸುವುದು. **ಟೆಂಡರಿಗಿಟ್ಟ ಅಂದಾಜು ಮೊತ್ತ: ಕೆಪೆಕ್ಸ್ ₹:726.87 ಲಕ್ಷಗಳು (ತೆರಿಗೆಗಳನ್ನು ಹೊರತುಪಡಿಸಿ), ಇಎಂಡಿ: ₹.10.90 ಲಕ್ಷಗಳು.**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **03.06.2025**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಕೆಪಿಪಿ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **11.06.2025**ರ ಸಂಜೆ **4:30** ಗಂಟೆಗೆ ಅಥವಾ ಮುಂಚಿತವಾಗಿ. (3) ಪ್ರಸ್ತಾವನೆ ಕೋರಿಕೆ ದಾಖಲೆಗಳ ಲಭ್ಯತೆ **03.06.2025**ರ ಸಂಜೆ **4:00** ಗಂಟೆಯಿಂದ. (4) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ **09.06.2025**ರ ಮಧ್ಯಾಹ್ನ **3:00** ಗಂಟೆಯವರೆಗೆ. (5) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ಆ&ನೈ, 4ನೇ ಮಹಡಿ, ಅನೆಕ್ಸರ್–3 ಬೃ.ಬೆಂ.ಮ.ಪಾ ಸಂಕೀರ್ಣ, ನರಸಿಂಹರಾಜ ಚೌಕ ಇಲ್ಲಿ ದಿನಾಂಕ **09.06.2025**ರ ಮಧ್ಯಾಹ್ನ **3:30** ಗಂಟೆಗೆ ನಡೆಸಲಾಗುವುದು. (6) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **16.06.2025**ರ ಸಂಜೆ **4:30** ಗಂಟೆಯವರೆಗೆ. (7) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ **17.06.2025**ರ ಸಂಜೆ **4:30** ಗಂಟೆಯ ನಂತರ. (8) ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಕೆಪಿಪಿಪಿ ಪೋರ್ಟಲ್ ಮೂಲಕ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು–5,
ಆರೋಗ್ಯ ಮತ್ತು ನೈರ್ಮಲ್ಯ ವಿಭಾಗ

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23
ದೂ: 080–23113584 ಇ–ಮೇಲ್: pdrch-hfws@karnataka.gov.in

ಸಂ: No: SNO/ASHA/14/2024-25 (e-1444594) ದಿನಾಂಕ: 31.05.2025

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ

"Providing Closed User Group (CUG) Mobile Network Services for National Health Mission."

ರಾಷ್ಟ್ರೀಯ ಆರೋಗ್ಯ ಅಭಿಯಾನವು ಆಶಾ ಕಾರ್ಯಕ್ರಮಕ್ಕೆ ಅವಶ್ಯವಿರುವ "Providing Closed User Group (CUG) Mobile Network Services for National Health Mission" ಗೆ ಸೇವೆ ಒದಗಿಸಲು ಅಧಿಕೃತ ಸೇವಾದಾರರುಗಳಿಗೆ ಅಗತ್ಯ ದಾಖಲೆಯೊಂದಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ.

Tender No: NHM/2024-25/IND0022/CALL-4

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಪ್ರಸ್ತಾವನೆಯ ಡಾಕ್ಯುಮೆಂಟ್‌ಗಳನ್ನು ದಿನಾಂಕ **31/05/2025** ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು ಮತ್ತು ಪ್ರಸ್ತಾವನೆಯ ಡಾಕ್ಯುಮೆಂಟ್‌ಗಳನ್ನು ದಿನಾಂಕ: **20/06/2025 ಅಪರಾಹ್ನ 5.30**ರ ಒಳಗಾಗಿ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 ರಿಂದ ಅಪರಾಹ್ನ 4.30ರ ಒಳಗಾಗಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/SA/973/2025-26

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ.
Ph: :08282 266355 E mail: acfchannagiri@gmail.com
ಸಂಖ್ಯೆ: :ಸಅಸಂ.ಚನ್ನಗಿರಿ:ಟೆಂಡರ್.ಸಿ.ಆರ್–01/2025–26–1 ದಿ:20.05.2025.

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ)

2025–26ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ "Raising of plantation, Raising of mansoon plantation and Advance work including raising of seedlings in limits of the Deputy Conservator of Forests, Bhadravathi Division, Bhadravathi for the year 2025-26" ಕುರಿತು ಸಂಬಂಧಪಟ್ಟ ಅರ್ಹ ಗುತ್ತಿಗೆದಾರರಿಂದ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ:04–06–2025ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಕಾಮಗಾರಿಯ ಅಂದಾಜು ಮೊತ್ತ:–250.29000 ಲಕ್ಷಗಳು

1."Raising of plantation, Raising of mansoon plantation and Advance work including raising of seedlings in limits of the Deputy Conservator of Forests, Bhadravathi Division, Bhadravathi for the year 2025-26" *) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 04–06–2025 16:00 *) ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 05–06–2025 16.30. *) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 05–06–2025 17:00

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/181/05/354

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–1 ರವರ ಕಛೇರಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.

ಸಂಖ್ಯೆ: ಉಪ್ರವ್ಯ–1/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/03/2025–26 ದಿನಾಂಕ: 31–05–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1) ಬಿಬಿಎಂಪಿ ಸ್ಥಾಪಿಸಿದ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಎಸ್‌ಒಪಿ ಪ್ರಕಾರ ಗೊಬ್ಬರವನ್ನು ಉತ್ಪಾದಿಸಲು ಅನುಮೋದಿತ ತಂತ್ರಜ್ಞಾನದೊಂದಿಗೆ ಹಸಿ ತ್ಯಾಜ್ಯವನ್ನು ಸಂಸ್ಕರಿಸಲು ನಿರ್ವಹಿಸಬೇಕು.
2) ಈ ಹಿನ್ನೆಲೆಯಲ್ಲಿ, **ಬಿಎಸ್‌ಡಬ್ಲ್ಯೂಎಂಎಲ್‌ನ ವ್ಯವಸ್ಥಾಪಕ ನಿರ್ದೇಶಕರ** ಪರವಾಗಿ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **(https://kppp.karnataka.gov.in)** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರತಿ ಕೆಲಸದ ಮುಂದೆ ನಿಗದಿತ ಶುಲ್ಕವನ್ನು (ಮರು ಪಾವತಿಸಲಾಗುವುದಿಲ್ಲ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ–ಪಾವತಿ ರೂಪದಲ್ಲಿ ಪಾವತಿಸಬೇಕು. ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಬೇಕು.

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಸೇವಾ ಒಪ್ಪಂದದ ನಿಗದಿತ ಅವಧಿ
1	ದೊಡ್ಡಬಿದರಕಲ್ಲು ಇಲ್ಲಿರುವ 150 ಟಿಪಿಡಿ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ.	993.13	**ರೂ. 1,00,000/–** ಅನ್ನು ಇ–ಪಾವತಿ ಮೂಲಕ, ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಮೂಲಕ, ಮತ್ತು ಉಳಿದ **ರೂ. 13,90,000/–** ಅನ್ನು ರಾಷ್ಟ್ರೀಕೃತ / ಕೋಷ್ಟಕ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸುವುದು.	24 ತಿಂಗಳು

ಟೆಂಡರ್‌ನ ವೇಳಾಪಟ್ಟಿ:
1) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **10–06–2025 ರಂದು ಮಧ್ಯಾಹ್ನ 3.00 ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ಟೆಕ್) ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052 ಈ ಕಛೇರಿಯಲ್ಲಿ ನಡೆಯುವುದು.**
2) ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **01–07–2025 ರಂದು ಸಂಜೆ 4.00 ಗಂಟೆಯೊಳಗೆ.**
3) ಕೆ.ಪಿ.ಪಿ. ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **02–07–2025 ರಂದು ಸಂಜೆ 4.30 ಗಂಟೆಯ ನಂತರ.**

ಸೂಚನೆ:
1) ಜಂಟಿ ಉದ್ಯಮವು 2 (ಎರಡು) ಘಟಕಗಳವರೆಗೆ ಅನುಮತಿಸಲಾಗಿದೆ. ಟೆಂಡರ್‌ನ ಮಾನ್ಯತೆಯು ಟೆಂಡರ್ ತೆರೆದ ದಿನಾಂಕದಿಂದ 180 ದಿನಗಳು.
2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸದ ಆಕಾಂಕ್ಷಿ ಬಿಡ್ಡುದಾರರು / ಗುತ್ತಿಗೆದಾರರು ವೆಬ್‌ಸೈಟ್ **(https:kppp.karnataka.gov.in)** ಮೂಲಕ ಭಾಗವಹಿಸುವ ಮೊದಲು ನೋಂದಾಯಿಸಿಕೊಳ್ಳಬೇಕು.
3) ಬಿಡ್ ದಸ್ತಾವೇಜಿನಲ್ಲಿರುವ ಟೆಂಡರ್ ಷರತ್ತುಗಳ ಪ್ರಕಾರ ಬಿಡ್ಡುದಾರರು ಅರ್ಹತಾ ಮಾನದಂಡಗಳನ್ನು ಪೂರೈಸಬೇಕಾಗುತ್ತದೆ.
4) ಆನ್‌ಲೈನ್ ಬಿಡ್‌ಗಳನ್ನು ಸಲ್ಲಿಸುವ ಮೊದಲು, ಬಿಡ್‌ದಾರರು ಎಲ್ಲಾ ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಬಿಡ್‌ನೊಂದಿಗೆ ಲಗತ್ತಿಸುವುದು.
5) ಬಿಡ್‌ಗಳಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಿ ಆನ್‌ಲೈನ್‌ನಲ್ಲಿ ಸಲ್ಲಿಸುವುದು.
6) ಹೆಚ್ಚಿನ ವಿವರಗಳಿಗಾಗಿ, ನೋಂದಣಿ ಮತ್ತು ಇ–ಪಾವತಿಗಾಗಿ ಜಿಓಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್: **https:kppp.karnataka.gov.in ಗೆ ಭೇಟಿ ನೀಡುವುದು ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಹಾಯವಾಣಿಯನ್ನು ಸಂಪರ್ಕಿಸುವುದು.**
7) ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–1
ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು.

ವಾಸಾಸಂಇ/ವಾ.ಪ್ರ/986/ಅಡ್ವರ್ಟೋರ್/2025–26

ನಮೂನೆ–V
[(ಕರ್ನಾಟಕ ತಿದ್ದುಪಡಿ ನಿಯಮ–5 20(1) (ಬಿ)]
ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಯಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 ರ ಕಲಂ 11(1)ರ ಮೇರೆಗೆ

ಅಧಿಸೂಚನೆ

ಸಂಖ್ಯೆ:MYSDC-LAQ/LAQ/170/2025 E-835028 & 736996 **Dated: 23.05.2025**

ಸಾರ್ವಜನಿಕ ಉದ್ದೇಶದ ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಬನ್ನೂರು ಪುರಸಭಾ ವ್ಯಾಪ್ತಿಯ ಆದಿಜಾಂಭವ ಸ್ಮಶಾನದ ರಸ್ತೆ ಸಂಪರ್ಕದ ಯೋಜನೆಗಾಗಿ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿಯ ಬನ್ನೂರು ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರ ಭಾವಿಸುತ್ತದೆ. ಈ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ:30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ 23.07.2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪ್ರಿಯಾದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ–2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ 16) ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸಂಖ್ಯೆ:ಕಂಇ 11 ಎಕ್ಯೂಎಂ 2025 ದಿನಾಂಕ 22.04.2025ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ 14.04.2025 ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ 12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರಿಗೆ ಅಧಿಕಾರವನ್ನು ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಿಣಿದಾರರಿಗಾಗಲೀ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ 11(1)ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿ ಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ–15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ ಮೈಸೂರು ಉಪವಿಭಾಗ, ಮೈಸೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗೆ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಮೈಸೂರು ತಾಲ್ಲೂಕು: ತಿ.ನರಸೀಪುರ ಹೋಬಳಿ: ಬನ್ನೂರು ಗ್ರಾಮ: ಬನ್ನೂರು

ಕ್ರ. ಸಂ.	ಖಾತೆದಾರರ ಹೆಸರು		ಸರ್ವೆ/ ಖಾತಾ ನಂ.	ಸರ್ವೆ/ಖಾತಾ ನಂಬರ್‌ದಲ್ಲಿನ ಒಟ್ಟು ವಿಸ್ತೀರ್ಣ		ಸ್ವಾಧೀನಕೊಳ್ಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚೆಕ್ಕು ಬಂದಿ / ಸರಹದ್ದು			
	ಭೂ ಮಾಲೀಕರ/ ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ/ಕೃಷಿಯೇತರ ಎ–ಗು	ಖರಾಬು ಎ–ಗು	ಕೃಷಿ/ಕೃಷಿಯೇತರ ಎ–ಗು	ಖರಾಬು ಎ–ಗು		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	ಆರ್ ರುಕ್ಮಿಣಿ ಕೋಂ ರವಿಕುಮಾರ್	ಆರ್ ರುಕ್ಮಿಣಿ ಕೋಂ ರವಿ ಕುಮಾರ್	1023/1	0–03	0–0	0.01–12	0–0	ಖುಷ್ಕಿ	ರಶ್ಮಿ ಬಿ.ಕೆ ಮತ್ತು ಕಿರಣ್ ಕುಮಾರ್	ಪೌರ ಕಾರ್ಮಿಕರ ಸ್ಮಶಾನ	ರಸ್ತೆ	ಪವನ್ ಕುಮಾರ್
2	ರಶ್ಮಿ ಬಿ ಕೆ ಕೋಂ ಸೋಮಸುಂದರ, ಕೆ ಕಿರಣ್ ಕುಮಾರ್ ಬಿನ್ ಕೃಷ್ಣೇಗೌಡ	ರಶ್ಮಿ ಬಿ ಕೆ ಕೋಂ ಸೋಮಸುಂದರ, ಕೆ ಕಿರಣ್ ಕುಮಾರ್ ಬಿನ್ ಕೃಷ್ಣೇಗೌಡ	1023/2	1–25	0–16	0–04	0–0	ಖುಷ್ಕಿ	ದೇವರಾಜು	ಕಾವೇರಿ ನದಿ	ಪವನ್ ಕುಮಾರ್	ಆದಿ ಜಾಂಭವ ಸ್ಮಶಾನ
3	ಪವನ್ ಬಿ ಆರ್ ಬಿನ್ ರವಿಕುಮಾರ್	ಪವನ್ ಬಿ ಆರ್ ಬಿನ್ ರವಿಕುಮಾರ್	1023/6	0–04	0–0	0–01.08	0–0	ಖುಷ್ಕಿ	ಬಿ.ಕೆ.ರಶ್ಮಿ	ಪೌರಕಾರ್ಮಿಕರ ಸ್ಮಶಾನ	ರುಕ್ಮಿಣಿ	ಬಿ.ಕೆ ರಶ್ಮಿ

ಸಹಿ/– ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು

DIPR/DDMYS/261/KSMCA/221/2025-26

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹605
12 ಕ್ಕೆ ₹80
ಮೈಸೂರು
100ಕ್ಕೆ ₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹271-588
ದ್ವಿತಳಿ (ಬಿ.ವಿ) ₹335-720

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್‌-4 ₹196
ಆರ್‌ಎಸ್‌ಎಸ್‌-5 ₹191.50
ಗುಡ್ ಲಾಟ್ ₹181.50
(ಪ್ರತಿ ಕೆ.ಜಿಗೆ)

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ ₹26150
ಎಸಿ ₹15260
ಆರ್‌ಪಿ ₹20500
ಆರ್‌ಸಿ ₹11025

ಕಚ್ಚಾ ಖಾದ್ಯ ತೈಲ: ಶೇ 10ರಷ್ಟು ಸುಂಕ ಕಡಿತ– ಕೇಂದ್ರದ ಆದೇಶ

ಅಡುಗೆ ಎಣ್ಣೆ ಧಾರಣೆ ಇಳಿಕೆ?

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಚ್ಚಾ ಖಾದ್ಯ ತೈಲದ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಶೇ 10ಕ್ಕೆ ಇಳಿಸಿದ್ದು, ಈ ಕುರಿತು ಕೇಂದ್ರ ಹಣಕಾಸು ಸಚಿವಾಲಯವು ಅಧಿಸೂಚನೆ ಹೊರಡಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್ 14ರಂದು ಕಚ್ಚಾ ಖಾದ್ಯ ತೈಲಗಳ ಆಮದು ಮೇಲಿದ್ದ ಶೂನ್ಯ ಸುಂಕವನ್ನು ಶೇ 20ಕ್ಕೆ ಹೆಚ್ಚಿಸಲಾಗಿತ್ತು.

ಕಚ್ಚಾ ತಾಳೆ, ಕಚ್ಚಾ ಸೋಯಾಬೀನ್ ಮತ್ತು ಕಚ್ಚಾ ಸೂರ್ಯಕಾಂತಿ ತೈಲದ ಮೇಲೆ ಸುಂಕ ಇಳಿಕೆಯಾಗಲಿದೆ. ಇದರಿಂದ ಚಿಲ್ಲರೆ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆ ಕಡಿಮೆಯಾಗಲಿದೆ. ಜೊತೆಗೆ, ದೇಶೀಯ ಖಾದ್ಯ ತೈಲ ಸಂಸ್ಕರಣಾಗಾರರ ಹಿತರಕ್ಷಣೆಗೆ ಸರ್ಕಾರದ ನಿರ್ಧಾರ ಸಹಕಾರಿ ಆಗಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಭಾರತವು ದೇಶೀಯ ಬೇಡಿಕೆಗೆ ಅನುಗುಣವಾಗಿ ವಾರ್ಷಿಕ ಶೇ 50ರಷ್ಟು ಖಾದ್ಯತೈಲವನ್ನು ಆಮದು ಮಾಡಿಕೊಳ್ಳುತ್ತದೆ. 2023–24ನೇ ಮಾರುಕಟ್ಟೆ ವರ್ಷದಲ್ಲಿ (ನವೆಂಬರ್‌ನಿಂದ ಅಕ್ಟೋಬರ್) 159.6 ಲಕ್ಷ ಟನ್ ಆಮದು ಮಾಡಿಕೊಂಡಿದೆ. ಇದರ ಒಟ್ಟಾರೆ ಮೌಲ್ಯ ₹1.32 ಲಕ್ಷ ಕೋಟಿ ಆಗಿದೆ.

ಸರ್ಕಾರದ ನಿರ್ಧಾರದಿಂದಾಗಿ ಮೂಲ ಕಸ್ಟಮ್ಸ್ ಸುಂಕ ಹಾಗೂ ಇತರ ಶುಲ್ಕ ಸೇರಿ ಈ ಮೂರು ಕಚ್ಚಾ ಖಾದ್ಯ ತೈಲಗಳ ಮೇಲಿನ ಸುಂಕವು ಶೇ 27.5ರಿಂದ ಶೇ 16.5ಕ್ಕೆ ತಗ್ಗಿದೆ.

ಆದರೆ, ಸಂಸ್ಕರಿಸಿದ ಖಾದ್ಯ ತೈಲದ ಮೇಲಿನ ಮೂಲ ಕಸ್ಟಮ್ಸ್ ಸುಂಕವು ಶೇ 32.5ರಷ್ಟಿದೆ. ಯಾವುದೇ ಬದಲಾವಣೆ ಮಾಡಿಲ್ಲ. ಮೂಲ ಕಸ್ಟಮ್ಸ್ ಸುಂಕ ಹಾಗೂ ಇತರ ಶುಲ್ಕ ಸೇರಿ ಈ ತೈಲದ ಮೇಲಿನ ಒಟ್ಟು ಸುಂಕದ ಪ್ರಮಾಣ ಶೇ 35.5ರಷ್ಟು ಆಗಲಿದೆ.

ಭಾರತವು ಮಲೇಷ್ಯಾ, ಇಂಡೋನೇಷ್ಯಾದಿಂದ ತಾಳೆ ಎಣ್ಣೆ ಮತ್ತು ಬ್ರೆಜಿಲ್, ಅರ್ಜೆಂಟೀನಾದಿಂದ ಸೋಯಾಬೀನ್ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ.

ಸರ್ಕಾರದ ತೀರ್ಮಾನಕ್ಕೆ ಸ್ವಾಗತ

ಸರ್ಕಾರದ ಈ ತೀರ್ಮಾನವನ್ನು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಮತ್ತು ಭಾರತೀಯ ಸಸ್ಯಜನ್ಯ ಎಣ್ಣೆ ತಯಾರಕರ ಸಂಘ (ಐವಿಪಿಎ) ಸ್ವಾಗತಿಸಿವೆ.

'ಸರ್ಕಾರದ ನಿರ್ಧಾರದಿಂದ ಕಚ್ಚಾ ಮತ್ತು ಸಂಸ್ಕರಿಸಿದ ತೈಲದ ನಡುವಿನ ಸುಂಕದ ವ್ಯತ್ಯಾಸ ಹೆಚ್ಚಳವಾಗಲಿದೆ. ಇದರಿಂದ ಸಂಸ್ಕರಿಸಿದ ತಾಳೆ ಎಣ್ಣೆ ಆಮದು ಪ್ರಮಾಣ ಕಡಿಮೆಯಾಗಲಿದೆ. ಕಚ್ಚಾ ತಾಳೆ ಎಣ್ಣೆಗೆ ಬೇಡಿಕೆ ಹೆಚ್ಚಲಿದೆ. ಇದು ದೇಶೀಯ ಖಾದ್ಯ ತೈಲ ಸಂಸ್ಕರಣಾ ವಲಯದ ಬೆಳವಣಿಗೆಗೆ ಸಹಕಾರಿಯಾಗಲಿದೆ' ಎಂದು ಎಸ್‌ಇಎ ಅಧ್ಯಕ್ಷ ಸಂಜೀವ್ ಅಸ್ತಾನಾ ತಿಳಿಸಿದ್ದಾರೆ.

ಪ್ರಸ್ತುತ ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಖಾದ್ಯ ತೈಲದ ಬೆಲೆ ಹೆಚ್ಚಿದೆ. ಸದ್ಯ ಬೆಲೆ ಇಳಿಕೆಯಾಗಲಿದ್ದು, ಗ್ರಾಹಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

'ಕಚ್ಚಾ ತಾಳೆ ಎಣ್ಣೆ ದರಕ್ಕೆ ಹೋಲಿಸಿದರೆ ಸಂಸ್ಕರಿಸಿದ ತಾಳೆ ಎಣ್ಣೆ ದರ ತೀರಾ ಕಡಿಮೆ ಇತ್ತು. ಹಾಗಾಗಿ, ಇದರ ಆಮದು ಪ್ರಮಾಣ ಹೆಚ್ಚಿತ್ತು ಎಂದು ಹೇಳಿದ್ದಾರೆ.

'ಕಚ್ಚಾ ಮತ್ತು ಸಂಸ್ಕರಿಸಿದ ಖಾದ್ಯ ತೈಲದ ನಡುವಿನ ಆಮದು ಸುಂಕದ ವ್ಯತ್ಯಾಸ ಹೆಚ್ಚಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಇದನ್ನು ಪುರಸ್ಕರಿಸಿದೆ' ಎಂದು ಐವಿಪಿಎ ಅಧ್ಯಕ್ಷ ಸುಧಾಕರ ದೇಸಾಯಿ ಹೇಳಿದ್ದಾರೆ.

'ಸರ್ಕಾರದ ತೀರ್ಮಾನವು ಮೇಕ್ ಇನ್ ಇಂಡಿಯಾ ಆಶಯಕ್ಕೆ ಬದ್ಧವಾಗಿದೆ. ಸಂಸ್ಕರಿಸಿದ ತೈಲದ ಆಮದಿನಿಂದಾಗಿ ಸಸ್ಯಜನ್ಯ ಎಣ್ಣೆ ವಲಯಕ್ಕೆ ಧಕ್ಕೆಯಾಗುತ್ತಿತ್ತು. ಸದ್ಯ ಇದಕ್ಕೆ ಕಡಿವಾಣ ಬೀಳಲಿದೆ' ಎಂದು ಹೇಳಿದ್ದಾರೆ.

ಆಫ್ರಿದಿಗೆ ಆಹ್ವಾನ ನೀಡಿರಲಿಲ್ಲ: ಸ್ಪಷ್ಟನೆ

ತಿರುವನಂತಪುರ (ಪಿಟಿಐ): ದುಬೈನಲ್ಲಿ ನಡೆದ ಸಮಾರಂಭದಲ್ಲಿ ಪಾಕಿಸ್ತಾನದ ಕ್ರಿಕೆಟಿಗ ಶಾಹಿದ್ ಆಫ್ರಿದಿ ಅವರಿಗೆ ಭವ್ಯ ಸ್ವಾಗತ ಕೋರಿದ ವಿಚಾರಕ್ಕೆ ಸಾಮಾಜಿಕ ಜಾಲತಾಣದಲ್ಲಿ ಟೀಕೆಗೆ ಗುರಿಯಾಗಿದ್ದ ದುಬೈನ ಕೇರಳದ ವಲಸಿಗ ಸಮುದಾಯವು ಕ್ಷಮೆ ಕೋರಿದೆ. ಅಲ್ಲದೇ ಅದು ಉದ್ದೇಶ ಪೂರ್ವಕವಲ್ಲ ಎಂದು ಸ್ಪಷ್ಟಪಡಿಸಿದೆ.

ಅರಬ್ ಸಂಯುಕ್ತ ರಾಷ್ಟ್ರದಲ್ಲಿರುವ ಕೇರಳದ ಕೊಚ್ಚಿನ್ ವಿಶ್ವವಿದ್ಯಾಲಯದ ಬಿ-ಟೆಕ್ ಹಳೆ ವಿದ್ಯಾರ್ಥಿಗಳ ಸಂಘ (ಕ್ಯುಬಾ) ದುಬೈನಲ್ಲಿ ಇತ್ತೀಚೆಗೆ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಇಲ್ಲಿ ಆಫ್ರಿದಿ ಅವರಿಗೆ ಅದ್ದೂರಿಯಾಗಿ ಸ್ವಾಗತ ನೀಡಲಾಗಿತ್ತು ಎನ್ನುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಆಫ್ರಿದಿ ಅವರನ್ನು ಸುತ್ತುವರಿದಿದ್ದ ಅಭಿಮಾನಿಗಳ ಸಮೂಹ 'ಬೂಮ್... ಬೂಮ್' (ಆಫ್ರಿದಿ ಅಡ್ಡ ಹೆಸರು) ಎಂದು ಕೂಗಿತ್ತು. ಇದು ಸಾಮಾಜಿಕ ಜಾಲತಾಣದ ಹಲವರು ಮತ್ತು ಬಲಪಂಥೀಯ ಬೆಂಬಲಿಗರ ಆಕ್ರೋಶಕ್ಕೆ ಕಾರಣವಾಗಿತ್ತು.

'ಪಹಲ್ಗಾಮ್ ದಾಳಿಯ ನಂತರ ಭಾರತ ಮತ್ತು ನಮ್ಮ ಸೇನೆಯ ಬಗ್ಗೆ ಆಫ್ರಿದಿ ನೀಡಿದ್ದ ವಿವಾದಿತ ಹೇಳಿಕೆ ಪ್ರಸ್ತಾಪಿಸಿ 'ಕ್ಯುಬಾ' ಸಂಘಟಕರ ವಿರುದ್ಧ ಟೀಕೆ ಮಾಡಲಾಗಿತ್ತು.

ಶುಕ್ರವಾರ ಇನ್‌ಸ್ಟಾಗ್ರಾಂ ಪೋಸ್ಟ್ ಮೂಲಕ ಕ್ಯುಬಾ ಪ್ರಮುಖರು ಕ್ಷಮೆ ಕೋರಿದ್ದಾರೆ. 'ಕಾರ್ಯಕ್ರಮಕ್ಕೆ ಆಫ್ರಿದಿ ಅವರನ್ನು ನಾವು ಆಹ್ವಾನಿಸಿಲ್ಲ. ಜಾಗದ ಸಮಸ್ಯೆಯಿಂದಾಗಿ ಪಾಕಿಸ್ತಾನ ದುಬೈ ಸಂಘಟನೆ ಕಾರ್ಯಕ್ರಮ ನಡೆಸುತ್ತಿದ್ದ ಸಭಾಂಗಣದಲ್ಲೇ ನಾವೂ ಕಾರ್ಯಕ್ರಮ ಆಯೋಜಿಸಿದ್ದೆವು. ಮೇ 25ರಂದು ಇನ್ನೊಂದು ಸಮಾರಂಭಕ್ಕೆ ಆಗಮಿಸಿದ್ದ ಆಫ್ರಿದಿ ಅವರು ನಮ್ಮ ಆಹ್ವಾನ ಇಲ್ಲದೇ ಇದ್ದಕ್ಕಿದ್ದಂತೆ ಸಮಾರಂಭ ಸ್ಥಳಕ್ಕೆ ಬಂದರು' ಎಂದು ಕೇರಳ ಸಮುದಾಯ ಹೇಳಿದೆ.

'ಆದರೂ ಕೆಲವರಿಗೆ ಇದರಿಂದ ನೋವಾಗಿದ್ದರೆ ಕ್ಷಮೆ ಇರಲಿ. ನಮ್ಮ ದೇಶದ ಸಂಸ್ಕೃತಿ ಮತ್ತು ಸಮಗ್ರತೆಯ ಸ್ಫೂರ್ತಿಯನ್ನು ಕಾಪಾಡಲು ನಾವು ಬದ್ಧ' ಎಂದು 'ಕ್ಯುಬಾ' ಹೇಳಿದೆ.

ಭಾರಿ ಮಳೆ 151 ಜನರ ಸಾವು

ಅಬುಜ (ಎಪಿ): ನೈಜೀರಿಯಾದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಗೆ ಸಂಭವಿಸಿದ ಅವಘಡಗಳಲ್ಲಿ ಕನಿಷ್ಠ 151 ಜನರು ಮೃತಪಟ್ಟಿರುವುದು ಖಚಿತವಾಗಿದೆ ಎಂದು ಸ್ಥಳೀಯ ತುರ್ತು ಸೇವೆಗಳ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ನೈಗರ್ ರಾಜ್ಯದ ಮೊಕ್ವಾ ಪಟ್ಟಣದಲ್ಲಿ ಪ್ರವಾಹ ಉಂಟಾಗಿದ್ದು, ಈ ಪ್ರದೇಶದಲ್ಲಿ ವಾಸಿಸುತ್ತಿದ್ದ 3 ಸಾವಿರಕ್ಕೂ ಹೆಚ್ಚು ಮಂದಿಯನ್ನು ಸ್ಥಳಾಂತರಿಸಲಾಗಿದೆ. ಶುಕ್ರವಾರ ಸುರಿದ ಮಳೆಯಿಂದಾಗಿ 500 ಜನರ ಮನೆಗಳಿಗೆ ಹಾನಿಯಾಗಿದೆ ಎಂದು ನೈಗರ್ ರಾಜ್ಯದ ತುರ್ತು ಏಜೆನ್ಸಿಯ ವಕ್ತಾರ ಇಬ್ರಾಹಿಂ ಹುಸ್ಸೇನಿ ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form



ಸ್ಮರಣೆ
ನೀವುಗಳು ನಮ್ಮನ್ನಗಲಿ ವರ್ಷಗಳು ಕಳೆದರೂ ನಿಮ್ಮ ಆಶೀರ್ವಾದ ಮತ್ತು ನಿಮ್ಮ ಸವಿನೆನಪು ನಮ್ಮಗಳಲ್ಲಿ ಅಚ್ಚಳಿಯದೇ ಉಳಿದಿವೆ. ನಿಮ್ಮಗಳ ಆತ್ಮಕ್ಕೆ ಚಿರಶಾಂತಿ ಕೋರುವ
ದಿ|| ಶ್ರೀಮತಿ ಜಯಮ್ಮ ಮರಣ: 31-05-2017
ದಿ|| ಶ್ರೀ ವಿ. ಗಿರಿಯಪ್ಪನವರು (ಕೆಂಗಲ್ ಹನುಮಂತಯ್ಯನವರ ಸಹೋದರ) ಮರಣ: 01-06-2011
ದಿ|| ಶ್ರೀ ವಿ. ಗಿರಿಯಪ್ಪನವರ ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
9845071799 / 9845500122

'ಹಸೀನಾ ಪದಚ್ಯುತಿಯಲ್ಲಿ ಜೆಯುಡಿ ಪಾತ್ರವಿತ್ತು'

ಲಾಹೋರ್ (ಪಿಟಿಐ): ಬಾಂಗ್ಲಾದೇಶ ಪ್ರಧಾನಿಯಾಗಿದ್ದ ಶೇಖ್ ಹಸೀನಾ ಅವರ ಪದಚ್ಯುತಿಗೆ ಕಾರಣವಾದ ಪ್ರತಿಭಟನೆಗಳಲ್ಲಿ ತಮ್ಮ ಸಂಘಟನೆಯ ಪಾತ್ರವಿತ್ತು ಎಂದು ಮುಂಬೈ ದಾಳಿಯ ಸೂತ್ರಧಾರಿ ಹಫೀಜ್ ಸಯೀದ್ ನೇತೃತ್ವದ ನಿಷೇಧಿತ ಜಮಾತ್-ಉದ್-ದಾವಾದ ಕೆಲವು ಮುಖಂಡರು ಹೇಳಿದ್ದಾರೆ.

ಅಲಹಾಬಾದ್‌ನಲ್ಲಿ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಜೆಯುಡಿ ಸದಸ್ಯ ಸೈಫುಲ್ಲಾ ಕಸೂರಿ, 'ನಾವು ಮುಂದಿನ ಪೀಳಿಗೆಯ ಜಿಹಾದ್‌ಗೆ ಸಿದ್ಧತೆ ನಡೆಸುತ್ತಿದ್ದೇವೆ. ಸಾವನ್ನಪ್ಪಲು ನಾವು ಹೆದರುವುದಿಲ್ಲ' ಎಂದು ಹೇಳಿದ್ದಾನೆ. ವಿಶ್ವಸಂಸ್ಥೆ ಪ್ರಕಟಿಸಿರುವ ಜಾಗತಿಕ ಉಗ್ರರ ಪಟ್ಟಿಯಲ್ಲಿ ಕಸೂರಿ ಹೆಸರು ಕೂಡ ಇದೆ.

'ಭ್ರಷ್ಟಾಚಾರ ಆರೋಪ ಸತ್ಯಕ್ಕೆ ದೂರ'

ನವದೆಹಲಿ (ಪಿಟಿಐ): ಜಿಎಸ್‌ಟಿ ನೋಂದಣಿಯಲ್ಲಿ ವಿಳಂಬ ಹಾಗೂ ನೋಂದಣಿ ಸಂಖ್ಯೆ ಪಡೆಯಲು ಲಂಚ ನೀಡಬೇಕಿದೆ ಎಂಬ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ಸ್ಪಷ್ಟನೆ ನೀಡಿದೆ.

ಜಿಎಸ್‌ಟಿ ನೋಂದಣಿಗೆ ಅರ್ಜಿ ಸಲ್ಲಿಸಿ 20 ದಿನಗಳು ಕಳೆದಿವೆ. ಇನ್ನೂ ಪರವಾನಗಿ ನೀಡಿಲ್ಲ ಎಂದು ವೃತ್ತಿಪರರ ಜಾಲತಾಣವಾದ ಲಿಂಕ್ಡ್‌ಇನ್‌ನಲ್ಲಿ ವ್ಯಕ್ತಿಯೊಬ್ಬರು ಅಭಿಪ್ರಾಯ ಹಂಚಿಕೊಂಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಮತ್ತೊಬ್ಬರು, ಸರಕು ಮತ್ತು ಸೇವಾ ತೆರಿಗೆ ನೋಂದಣಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿದ್ದರು. ಈ ವಿಷಯವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. 'ಮೇ 26ರಂದು ಜಿಎಸ್‌ಟಿ ನೋಂದಣಿ ಕೋರಿ ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದ್ದಾರೆ. ಈ ಬಗ್ಗೆ ಪರಿಶೀಲನೆ ನಡೆಸಲು ದೆಹಲಿಯ ಜಿಎಸ್‌ಟಿ ವಿಭಾಗಕ್ಕೆ ಅರ್ಜಿಯನ್ನು ವರ್ಗಾಯಿಸಲಾಗಿದೆ. ಇದರಲ್ಲಿ ಮಂಡಳಿಯ ಪಾತ್ರ ಇರುವುದಿಲ್ಲ' ಎಂದು ತಿಳಿಸಿದೆ.

ವ್ಯಕ್ತಿಯೊಬ್ಬರು ಸಲ್ಲಿಸಿರುವ ಅರ್ಜಿಯಲ್ಲಿ ಅವರ ಹುದ್ದೆ ನಮೂದಾಗಿಲ್ಲ. ಕಂಪನಿಯ ಪರವಾಗಿ ಈ ವ್ಯಕ್ತಿಯು ಬಾಡಿಗೆ ಒಪ್ಪಂದ ಪತ್ರಕ್ಕೆ ಸಹಿ ಹಾಕಿದ್ದಾರೆ. ಈ ಬಗ್ಗೆ ಅಧಿಕಾರಿಗಳು ತಕರಾರು ಎತ್ತಿದ್ದಾರೆ. ಹಾಗಾಗಿ, ಅರ್ಜಿ ಇತ್ಯರ್ಥಗೊಂಡಿಲ್ಲ ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಎಂಎಸ್‌ಎಂಇಗೆ ಸಾಲ ಸೌಲಭ್ಯ

ನವದೆಹಲಿ (ಪಿಟಿಐ): 'ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಹೆಚ್ಚಿನ ಸಾಲ ಸೌಲಭ್ಯ ಕಲ್ಪಿಸಲು ಸರ್ಕಾರ ಮುಂದಾಗಿದೆ. ಇದರಿಂದ ಈ ಉದ್ದಿಮೆಗಳಲ್ಲಿ ತಂತ್ರಜ್ಞಾನದ ಅಳವಡಿಕೆಗೆ ಸಹಕಾರಿಯಾಗಲಿದೆ' ಎಂದು ಕೇಂದ್ರ ಎಂಎಸ್‌ಎಂಇ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ರಜನೀಶ್ ಅವರು ಹೇಳಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, 'ಕೋವಿಡ್ ವೇಳೆ ಈ ವಲಯವು ತೀವ್ರ ಸಂಕಷ್ಟಕ್ಕೆ ಸಿಲುಕಿತ್ತು. ಆ ನಂತರದ ವರ್ಷಗಳಲ್ಲಿ ವೇಗವಾಗಿ ಚೇತರಿಕೆ ಕಂಡಿತು' ಎಂದು ತಿಳಿಸಿದರು.

ದೇಶದಲ್ಲಿ ಎಂಎಸ್‌ಎಂಇ ವಲಯವು 27 ಕೋಟಿ ಜನರಿಗೆ ಉದ್ಯೋಗ ನೀಡಿದೆ. ಹಾಗಾಗಿ, ಈ ವಲಯದ ಅಭಿವೃದ್ಧಿಗೆ ಪೂರಕವಾಗಿ ನೀತಿ ರೂಪಿಸಲು ಸಚಿವಾಲಯವು ಬದ್ಧವಾಗಿದೆ ಎಂದು ಹೇಳಿದರು.

ಕೆನರಾ ಬ್ಯಾಂಕ್ ಖಾತೆ: ಕನಿಷ್ಠ ಮೊತ್ತ ಕಾಯ್ದುಕೊಳ್ಳುವಿಕೆಗೆ ವಿನಾಯಿತಿ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ತನ್ನ ಎಲ್ಲಾ ಉಳಿತಾಯ ಖಾತೆಗಳಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳದಿದ್ದರೆ ವಿಧಿಸುತ್ತಿದ್ದ ದಂಡ ಶುಲ್ಕಕ್ಕೆ ವಿನಾಯಿತಿ ನೀಡಿದೆ.

ಉಳಿತಾಯ ಖಾತೆ, ವೇತನ ಖಾತೆ, ಅನಿವಾಸಿ ಭಾರತೀಯ (ಎನ್‌ಆರ್‌ಐ) ಖಾತೆ ಸೇರಿ ಎಲ್ಲಾ ರೀತಿಯ ಉಳಿತಾಯ ಖಾತೆಗಳಲ್ಲಿ ಗ್ರಾಹಕರು ಕನಿಷ್ಠ ತಿಂಗಳ ಮೊತ್ತವನ್ನು (ಎಎಂಬಿ) ಕಾಯ್ದುಕೊಳ್ಳಬೇಕಿತ್ತು. ಈ ನಿಯಮ ಪಾಲಿಸದಿದ್ದರೆ ದಂಡ ಶುಲ್ಕ ವಿಧಿಸಲಾಗುತ್ತಿತ್ತು.

ಜೂನ್ 1ರಿಂದ ಅನ್ವಯವಾಗುವಂತೆ ಇದಕ್ಕೆ ವಿನಾಯಿತಿ ನೀಡಲಾಗಿದೆ. ಇದರಿಂದ ಗ್ರಾಹಕರಿಗೆ ಇನ್ನು ಮುಂದೆ ತಮ್ಮ ಖಾತೆಗಳಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳಬೇಕು ಎಂಬ ಪ್ರಮೇಯವೇ ಎದುರಾಗುವುದಿಲ್ಲ ಎಂದು ಬ್ಯಾಂಕ್ ತಿಳಿಸಿದೆ.

ವೇತನ ವರ್ಗ, ಹಿರಿಯ ನಾಗರಿಕರು, ವಿದ್ಯಾರ್ಥಿಗಳು, ಎನ್‌ಆರ್‌ಐ ಮತ್ತು ಮೊದಲ ಬಾರಿಗೆ ಬ್ಯಾಂಕಿಂಗ್ ಸೇವೆ ಬಳಸುವವರು ಒಳಗೊಂಡಂತೆ ಬ್ಯಾಂಕ್‌ನ ಲಕ್ಷಾಂತರ ಗ್ರಾಹಕರಿಗೆ ಈ ನಿಯಮದಿಂದ ಅನುಕೂಲವಾಗಲಿದೆ ಎಂದು ತಿಳಿಸಿದೆ.

ಉಕ್ಕು, ಅಲ್ಯೂಮಿನಿಯಂಗೆ ಸುಂಕ ದುಪ್ಪಟ್ಟು: ಟ್ರಂಪ್

ನವದೆಹಲಿ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಉಕ್ಕು ಮತ್ತು ಅಲ್ಯೂಮಿನಿಯಂ ಮೇಲಿನ ಸುಂಕವನ್ನು ದುಪ್ಪಟ್ಟುಗೊಳಿಸಲು ಮುಂದಾಗಿದೆ. ಈ ನಿರ್ಧಾರವು ಭಾರತದ ರಫ್ತುದಾರರ ಮೇಲೆ ಪರಿಣಾಮ ಬೀರಲಿದೆ. ಅವರ ಆದಾಯಕ್ಕೂ ಪೆಟ್ಟು ನೀಡಲಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಹೇಳಿದೆ.

ಸದ್ಯ ಉಕ್ಕು ಮತ್ತು ಅಲ್ಯೂಮಿನಿಯಂ ಆಮದು ಮೇಲೆ ಶೇ 25ರಷ್ಟು ಸುಂಕ ವಿಧಿಸಲಾಗುತ್ತಿದೆ. ಜೂನ್ 4ರಿಂದ ಜಾರಿಗೆ ಬರುವಂತೆ ಇದನ್ನು ಶೇ 50ಕ್ಕೆ ಹೆಚ್ಚಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ.

ಅಮೆರಿಕದ ವ್ಯಾಪಾರ ವಿಸ್ತರಣೆ ಕಾಯ್ದೆ 1962ರ ಅಡಿ ರಾಷ್ಟ್ರೀಯ ಭದ್ರತೆಗೆ ಅಪಾಯವೊಡ್ಡುವ ಆಮದು ಸರಕುಗಳ ಮೇಲೆ ಸುಂಕ ಹೆಚ್ಚಿಸುವ ಅಧಿಕಾರವು ಅಧ್ಯಕ್ಷರಿಗೆ ಇದೆ. ಇದರ ಅನ್ವಯ ಸುಂಕ ದುಪ್ಪಟ್ಟುಗೊಳಿಸಲು ಟ್ರಂಪ್ ಮುಂದಾಗಿದ್ದಾರೆ.

ಟ್ರಂಪ್ ಅವರು 2018ರಲ್ಲಿ ಉಕ್ಕಿನ ಮೇಲೆ ಶೇ 25ರಷ್ಟು ಮತ್ತು ಅಲ್ಯೂಮಿನಿಯಂ ಮೇಲೆ ಶೇ 10ರಷ್ಟು ಸುಂಕ ವಿಧಿಸಿದ್ದರು. ಪ್ರಸಕ್ತ ವರ್ಷದ ಫೆಬ್ರುವರಿಯಲ್ಲಿ ಅಲ್ಯೂಮಿನಿಯಂ ಮೇಲಿನ ಸುಂಕವನ್ನು ಶೇ 25ಕ್ಕೆ ಹೆಚ್ಚಿಸಿದ್ದರು.

2024–25ರಲ್ಲಿ ಭಾರತವು ₹39 ಸಾವಿರ ಕೋಟಿ ಮೌಲ್ಯದ ಕಬ್ಬಿಣ, ಉಕ್ಕು ಮತ್ತು ಅಲ್ಯೂಮಿನಿಯಂ ಸರಕುಗಳನ್ನು ಅಮೆರಿಕಕ್ಕೆ ರಫ್ತು ಮಾಡಿದೆ.

'ಟ್ರಂಪ್ ಆಡಳಿತದ ನಿರ್ಧಾರವು ಭಾರತದ ಮೇಲೆ ನೇರ ಪರಿಣಾಮ ಬೀರಲಿದೆ. ಇದಕ್ಕೆ ಪ್ರತಿಯಾಗಿ ಭಾರತವು ಅಮೆರಿಕದಿಂದ ಆಮದಾಗುವ ಸರಕುಗಳ ಮೇಲಿನ ಸುಂಕವನ್ನು ಒಂದು ತಿಂಗಳೊಳಗೆ ಹೆಚ್ಚಿಸಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ವಿಶ್ವ ತಂಬಾಕು ದಿನ

ವಿಶ್ವ ತಂಬಾಕು ದಿನದ ಅಂಗವಾಗಿ ಕೋಲ್ಕತ್ತದಲ್ಲಿ ಶನಿವಾರ ಸ್ವಯಂ ಸೇವಕರು ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ರ್‍ಯಾಲಿ ಮೂಲಕ ಜಾಗೃತಿ ಮೂಡಿಸಿದರು
ಎಎಫ್‌ಪಿ ಚಿತ್ರ

'ಯುದ್ಧವಿಮಾನ ನಷ್ಟ ನಿಜ'

ಒಂದನೇ ಪುಟದಿಂದ...

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಗೆ ಪ್ರತೀಕಾರವಾಗಿ ಭಾರತವು 'ಸಿಂಧೂರ ಕಾರ್ಯಾಚರಣೆ'ಯನ್ನು ಮೇ 7ರಂದು ಆರಂಭಿಸಿತ್ತು. ಬ್ರಹ್ಮೋಸ್‌ನಂತಹ ದೂರಗಾಮಿ ಅಸ್ತ್ರಗಳನ್ನು ಕಾರ್ಯಾಚರಣೆಯಲ್ಲಿ ಬಳಕೆ ಮಾಡಿಕೊಂಡಿತ್ತು.

ಮೇ 10ರಂದು ತಾನು ನಡೆಸಿದ ತೀಕ್ಷ್ಣ ದಾಳಿಯ ಕಾರಣದಿಂದಾಗಿ ಕದನ ವಿರಾಮಕ್ಕೆ ಒಪ್ಪಿಕೊಳ್ಳುವಂತೆ ಪಾಕಿಸ್ತಾನವು ದುಂಬಾಲು ಬಿದ್ದಿತ್ತು ಎಂದು ಭಾರತವು ಈಗಾಗಲೇ ಹೇಳಿದೆ.

'ದಿ ಎಕನಾಮಿಸ್ಟ್' ಪತ್ರಿಕೆಯ ರಕ್ಷಣಾ ವಿಷಯಗಳ ಸಂಪಾದಕರಲ್ಲಿ ಒಬ್ಬರಾದ ಶಶಾಂಕ್ ಜೋಷಿ ಅವರು, 'ಸಂಘರ್ಷದ ಮೊದಲ ರಾತ್ರಿಯಂದು ಭಾರತವು ಯುದ್ಧ ವಿಮಾನಗಳನ್ನು ಕಳೆದುಕೊಂಡಿರಬಹುದು. ಸೂಕ್ತವಾದ ಶಸ್ತ್ರಾಸ್ತ್ರ ಇಲ್ಲದೆ ಹೀಗಾಗಿರಬಹುದು' ಎಂದು ಹೇಳಿದ್ದಾರೆ.

ಪಾಶ್ಚಿಮಾತ್ಯ ದೇಶಗಳ ಅಧಿಕಾರಿಗಳ ಅಂದಾಜು ಆಧರಿಸಿ ಈ ಮಾತು ಆಡಿರುವುದಾಗಿ ಜೋಷಿ ತಿಳಿಸಿದ್ದಾರೆ.

ತಪ್ಪು ಮಾಹಿತಿ ನೀಡಿದ ಕೇಂದ್ರ: ಖರ್ಗೆ ಟೀಕೆ

ನವದೆಹಲಿ (ಪಿಟಿಐ): ಭಾರತ–ಪಾಕಿಸ್ತಾನ ಸಂಘರ್ಷದ ವಿಚಾರದಲ್ಲಿ ಕೇಂದ್ರ ಸರ್ಕಾರವು ದೇಶಕ್ಕೆ ತಪ್ಪು ಮಾಹಿತಿ ನೀಡಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ಭಾರತದ ರಕ್ಷಣಾ ಸನ್ನದ್ಧತೆಯ ಬಗ್ಗೆ ಸ್ವತಂತ್ರವಾದ ತಜ್ಞರ ಸಮಿತಿಯಿಂದ ಸಮಗ್ರ ಪರಿಶೀಲನೆ ಆಗಬೇಕು ಎಂದು ಕಾಂಗ್ರೆಸ್ ಒತ್ತಾಯಿಸುತ್ತಿದೆ. 'ಕಾರ್ಗಿಲ್ ಪುನರ್‌ಪರಿಶೀಲನಾ ಸಮಿತಿ'ಯ ಮಾದರಿಯಲ್ಲೇ ಈ ಕೆಲಸ ಆಗಬೇಕು ಎಂದು ಖರ್ಗೆ ಒತ್ತಾಯಿಸಿದ್ದಾರೆ.

'ರಕ್ಷಣಾ ಪಡೆಗಳ ಮುಖ್ಯಸ್ಥರು (ಸಿಡಿಎಸ್) ಸಿಂಗಪುರದಲ್ಲಿ ಸಂದರ್ಶನವೊಂದರಲ್ಲಿ ಆಡಿರುವ ಮಾತುಗಳ ಹಿನ್ನೆಲೆಯಲ್ಲಿ, ಬಹಳ ಪ್ರಮುಖವಾದ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ. ಸಂಸತ್ತಿನ ವಿಶೇಷ ಅಧಿವೇಶನವೊಂದನ್ನು ತಕ್ಷಣವೇ ಕರೆದರೆ ಇದು ಸಾಧ್ಯವಾಗುತ್ತದೆ' ಎಂದು ಖರ್ಗೆ ಹೇಳಿದ್ದಾರೆ.

ಸ್ಪಷ್ಟ ಮಾಹಿತಿಗೆ ಕಾಂಗ್ರೆಸ್ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಿಂಧೂರ ಕಾರ್ಯಾಚರಣೆ' ವೇಳೆ ಭಾರತದ ಮಿಲಿಟರಿಗೆ ಆಗಿರುವ ನಷ್ಟದ ಬಗ್ಗೆ ಸ್ಪಷ್ಟ ಮಾಹಿತಿ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ಒತ್ತಾಯಿಸಿದೆ.

ಕಾರ್ಗಿಲ್ ಯುದ್ಧದ ನಂತರದಲ್ಲಿ ರಚಿಸಲಾಗಿದ್ದ 'ಕಾರ್ಗಿಲ್ ಪರಿಶೀಲನಾ ಸಮಿತಿ'ಯ ಮಾದರಿಯಲ್ಲಿಯೇ ಸಮಿತಿಯೊಂದನ್ನು ರಚಿಸಲಾಗುತ್ತದೆಯೇ ಎಂದು ಕೂಡ ಕಾಂಗ್ರೆಸ್ ಪ್ರಶ್ನಿಸಿದೆ.

ನರೇಂದ್ರ ಮೋದಿ ನೇತೃತ್ವದ ಸರ್ಕಾರವು 'ಪಾರದರ್ಶಕವಾಗಿ' ನಡೆದುಕೊಂಡಿಲ್ಲ ಎಂಬುದನ್ನು ಇಡೀ ದೇಶ ಈಗ ಅರ್ಥ ಮಾಡಿಕೊಂಡಿದೆ. ಕಾರ್ಯಾಚರಣೆ ಸಂದರ್ಭದಲ್ಲಿ ಭಾರತವು ವಿಮಾನಗಳನ್ನು ಕಳೆದುಕೊಂಡಿರುವ ಕಾರಣಕ್ಕೆ ಮಿಲಿಟರಿ ತಂತ್ರಜ್ಞಾನದ ಪುನರ್ ಪರಿಶೀಲನೆ ಆಗಬೇಕಿದೆ ಎಂದು ವಿರೋಧ ಪಕ್ಷವು ಹೇಳಿದೆ.

ಕಾರ್ಗಿಲ್ ಯುದ್ಧ ಕೊನೆಗೊಂಡ ಮೂರೇ ದಿನಗಳ ನಂತರ ಸಮಿತಿಯನ್ನು ರಚಿಸಲಾಗಿತ್ತು. ಅದು ಸಿದ್ಧಪಡಿಸಿದ ವರದಿಯನ್ನು ಅಗತ್ಯ ಪರಿಷ್ಕರಣೆಗಳೊಂದಿಗೆ 2000ನೇ ಇಸವಿಯ ಫೆಬ್ರುವರಿಯಲ್ಲಿ ಸಂಸತ್ತಿನಲ್ಲಿ ಮಂಡಿಸಲಾಯಿತು. ಈಗ ಸಿಡಿಎಸ್ ಅನಿಲ್ ಚೌಹಾಣ್ ಅವರು ಕೆಲವು ವಿಚಾರಗಳನ್ನು ಹೇಳಿರುವ ಹಿನ್ನೆಲೆಯಲ್ಲಿ, ಮೋದಿ ನೇತೃತ್ವದ ಸರ್ಕಾರವು ಅದೇ ಬಗೆಯಲ್ಲಿ ಕ್ರಮ ತೆಗೆದುಕೊಳ್ಳುವುದೇ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಮುಖಂಡ, ತೆಲಂಗಾಣ ಸಚಿವ ಎನ್. ಉತ್ತಮ್ ಕುಮಾರ್ ರೆಡ್ಡಿ ಅವರು, 'ನಡೆದಿದ್ದು ಏನು ಎಂಬ ವಿಚಾರದಲ್ಲಿ ಮೋದಿ ನೇತೃತ್ವದ ಸರ್ಕಾರವು ಹೆಚ್ಚು ಪಾರದರ್ಶಕವಾಗಿ ಇರಬೇಕು' ಎಂದು ಒತ್ತಾಯಿಸಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಉತ್ತರದಾಯಿತ್ವ ಇರಬೇಕಿರುವುದು ಸಹಜ, ಇದಕ್ಕೂ ದೇಶಭಕ್ತಿಗೂ ಸಂಬಂಧ ಇಲ್ಲ. ಪ್ರಶ್ನೆಗಳನ್ನು ಕೇಳಿದ್ದಕ್ಕೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿ ವಾಗ್ದಾಳಿ ನಡೆಸಲಾಯಿತು ಎಂದು ರೆಡ್ಡಿ ಹೇಳಿದ್ದಾರೆ.

'ಯುದ್ಧ ವಿಮಾನಗಳನ್ನು ಹೊಡೆದುರುಳಿಸಲಾಗಿದೆ ಎಂಬುದನ್ನು ಅಲ್ಲಗಳೆಯುವುದನ್ನು ಸರ್ಕಾರವು ನಿಲ್ಲಿಸಬೇಕು' ಎಂದು ರೆಡ್ಡಿ ಹೇಳಿದ್ದಾರೆ. ರೆಡ್ಡಿ ಅವರು ಯುದ್ಧ ವಿಮಾನ ಪೈಲಟ್ ಆಗಿ ಕರ್ತವ್ಯ ನಿರ್ವಹಿಸಿದ್ದರು.

ಮಧ್ಯಸ್ಥಿಕೆ ಸಂಘಟನೆ ಸೇರುವಂತೆ ನೇಪಾಳಕ್ಕೆ ಆಹ್ವಾನ

ಬೀಜಿಂಗ್ (ಪಿಟಿಐ): ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ತಾನು ರಚಿಸಿರುವ 'ಅಂತರರಾಷ್ಟ್ರೀಯ ಮಧ್ಯಸ್ಥಿಕೆ ಸಂಘಟನೆ' ಸೇರುವಂತೆ ನೇಪಾಳಕ್ಕೆ ಚೀನಾ ಆಹ್ವಾನ ನೀಡಿದೆ.

ಹಾಂಗ್‌ಕಾಂಗ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಅಂತರ ರಾಷ್ಟ್ರೀಯ ಮಧ್ಯಸ್ಥಿಕೆ ಸಂಘಟನೆಗೆ ಚಾಲನೆ ನೀಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೂ, ಸಂಘಟನೆ ಸೇರುವುದಕ್ಕಾಗಿ ನೇಪಾಳ ಸಹಿ ಹಾಕಿಲ್ಲ.

'ಮೊದಲ ದಿನವೇ ವಿಶ್ವದ 33 ರಾಷ್ಟ್ರಗಳು ಸಂಘಟನೆ ಸೇರಲು ಸಹಿಹಾಕಿದ್ದು, ಸ್ಥಾಪಕ ಸದಸ್ಯ ರಾಷ್ಟ್ರಗಳಾಗಿವೆ' ಎಂದು ಸರ್ಕಾರಿ ಸ್ವಾಮ್ಯದ ಕ್ಸಿನುವಾ ಸುದ್ದಿಸಂಸ್ಥೆ ವರದಿ ಮಾಡಿದೆ. ಆದರೆ ಸದಸ್ಯ ರಾಷ್ಟ್ರಗಳ ಹೆಸರನ್ನು ಬಹಿರಂಗಪಡಿಸಿಲ್ಲ. 'ಕಾರ್ಯಕ್ರಮದಲ್ಲಿ ನೇಪಾಳದ ವಿದೇಶಾಂಗ ಸಚಿವ ಅರ್ಜು ರಾಣಾ ದೇವುಬಾ ಅವರನ್ನು ಭೇಟಿಯಾದ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ, ಚರ್ಚಿಸಿದರು. ನೇಪಾಳವು ಆದಷ್ಟು ಬೇಗ ಸಂಘಟನೆಗೆ ಸೇರಲಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪಾಕ್ ಪರ ಸಂತಾಪ ವಾಪಸ್ ಪಡೆದ ಕೊಲಂಬಿಯಾ: ತರೂರ್

ಬೊಗೊಟ (ಪಿಟಿಐ): ಭಾರತದ ಸೇನೆ ನಡೆಸಿದ ದಾಳಿಯಲ್ಲಿ ಮೃತಪಟ್ಟ ಪಾಕಿಸ್ತಾನಿಗಳಿಗೆ ಸಂತಾಪ ಸೂಚಿಸಿದ್ದ ಕೊಲಂಬಿಯಾ ಸರ್ಕಾರ, ಇದೀಗ ತನ್ನ ಸಂತಾಪದ ಪ್ರಕಟಣೆಯನ್ನು ಹಿಂದಕ್ಕೆ ಪಡೆದಿದೆ.



ಶಶಿ ತರೂರ್

ಕೊಲಂಬಿಯಾಕ್ಕೆ ಭೇಟಿ ನೀಡಿರುವ ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವದ ಸರ್ವಪಕ್ಷ ಗಳ ಸಂಸದೀಯ ನಿಯೋಗ, ಅಲ್ಲಿನ ಸರ್ಕಾರದ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ಭಾರತೀಯ ನಾಗರಿಕರನ್ನು ಹತ್ಯೆ ಮಾಡಿದ್ದಕ್ಕೆ ಪ್ರತಿಕ್ರಿಯೆಯಾಗಿ ಭಾರತವು ಪಾಕಿಸ್ತಾನದಲ್ಲಿರುವ ಭಯೋತ್ಪಾದಕರ ನೆಲೆಗಳ ಮೇಲೆ ದಾಳಿ ನಡೆಸಿತು ಎಂಬುದನ್ನು ಹಾಗೂ ಗಡಿಯಾಚೆಗಿನ ಭಯೋತ್ಪಾದಕ ಕೃತ್ಯಗಳಿಗೆ ಪಾಕಿಸ್ತಾನ ಹೇಗೆಲ್ಲ ಬೆಂಬಲ ನೀಡುತ್ತಿದೆ ಎಂಬುದನ್ನು ನಿಯೋಗವು ಕೊಲಂಬಿಯಾ ಸರ್ಕಾರಕ್ಕೆ ಮನದಟ್ಟು ಮಾಡುವಲ್ಲಿ ಯಶಸ್ವಿಯಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಶಶಿ ತರೂರು, 'ನಿಯೋಗದ ಸದಸ್ಯರು ಕೊಲಂಬಿಯಾದ ಉಪ ವಿದೇಶಾಂಗ ಸಚಿವ ರೋಸಾ ಯೋಲಾಂಡಾ ವಿಲ್ಲಾವಿಸೆನ್ಸಿಯೊ ಮತ್ತು ಏಷ್ಯಾ ಪೆಸಿಫಿಕ್ ವಲಯದ ಉಸ್ತುವಾರಿಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿದೆವು. ಇತ್ತೀಚಿನ ಬೆಳವಣಿಗೆಗಳ ಕುರಿತು ಭಾರತದ ಸ್ಪಷ್ಟ ನಿಲುವನ್ನು ತಿಳಿಸಿದೆವು. ಅಲ್ಲದೆ ಕೊಲಂಬಿಯಾ ಸರ್ಕಾರ ಮೇ 8ರಂದು ಹೊರಡಿಸಿದ್ದ ಸಂತಾಪ ಪ್ರಕಟಣೆಗೆ ಅಸಮಾಧಾನ ವ್ಯಕ್ತಪಡಿಸಿದೆವು' ಎಂದು ತಿಳಿಸಿದರು.

'ವಿಷಯ ಮನದಟ್ಟು ಮಾಡಿಕೊಂಡ ಉಪ ವಿದೇಶಾಂಗ ಸಚಿವರು ಸಂತಾಪ ಪ್ರಕಟಣೆಯನ್ನು ಹಿಂಪಡೆಯುವುದಾಗಿ ಭರವಸೆ ನೀಡಿದರು. ಅಲ್ಲದೆ ಭಾರತದ ನಿಲುವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು, ಬೆಂಬಲವನ್ನೂ ವ್ಯಕ್ತಪಡಿಸಿದರು' ಎಂದು ಅವರು ವಿವರಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Bellary

83 ACRES of agricultural land for sale at Vidapankal, Anantapur District, AP. Located on NH-42, with clear titles and bordered by village road and cart road on two sides.Call 9848037380, 9844883144

Commerical

Banashankari

OM SARAVANA bhava Commercial building for sale.15000 sqft over 5floors. bsk 6th stage.opp omkar Integrated Township Projects land size 80×60 BDA southfaces 80ft rd Northfaces 30ft rd Mob: 9880296163 brokers excuse

Chitradurga

HIRIYUR 6000 sqft of commercial property in prime location of Hiriyur Main Road for immediate sale. Genuine buyers only. 8861246560

ಉದ್ಯೋಗಾವಕಾಶ

Domestic Helpers / Housekeeping

KUWAIT AND Qatar Requires (Free AirTicket) 1)'Babysitter 2)'Caregiver 3)'Cook 4)'Driver. R.S HR Service Whitefield Bangalore Contact: 9741923943

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Teachers/ Professors

ಸುವರ್ಣ ಸಂಸ್ಕೃತಿಧಾಮ(ರಿ) ಸುವರ್ಣಮುಖಿ ಮಾಧ್ಯಮಿಕ ಪ್ರೌಢಶಾಲೆ ವಡೇರಹಳ್ಳಿ, (ಗಂಟಕನದೊಡ್ಡಿಗೇಟ್) ಕಗ್ಗಲಹಳ್ಳಿ ಅಂಚೆ, ಕನಕಪುರ ತಾಲ್ಲೂಕು, ಬೆಂಗಳೂರು ಕನಕಪುರ ರಸ್ತೆ. ಕೆಳಗಿನ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ: 1)ವಿಜ್ಞಾನ ಶಿಕ್ಷಕರು:01. ಎಂಎಸ್ಸಿ/ಬಿಎಸ್.ಸಿ ಬಿಎಡ್,(ಸಿಬಿಝೆಡ್ ಆದ್ಯತೆ). (ಪಿಸಿಎಂ ಪರಿಗಣಿಸಲಾಗುವುದು). 2)ಇಂಗ್ಲೀಷ್ ಶಿಕ್ಷಕರು:01. ಎಂಎ/ಬಿಎ.ಬಿಎಡ್(ಇಂಗ್ಲೀಷ್ ಮೇಜರ್/ಮೆಥೆಡ್). 3)ಸಂಸ್ಕೃತ ಶಿಕ್ಷಕರು:01. ಬಿಎ.ಬಿಎಡ್ ಸಂಸ್ಕೃತ ವಿದ್ವತ್.(ಸಂಸ್ಕೃತ ಭಾಷೆಯ ವಿಶೇಷ ಅಧ್ಯಯನ). ಅಗತ್ಯವಿರುವವರಿಗೆ ಊಟ/ವಸತಿ ವ್ಯವಸ್ಥೆ,ಉತ್ತಮ ವೇತನವಿರುತ್ತದೆ.ಆಸಕ್ತರು ತಮ್ಮ ಬಯೋಡೇಟಾವನ್ನು Email: suvarnamukhisamskritidhama@gmail.com ಅಥವಾ ವಾಟ್ಸಪ್ಪ್ ಮೂಲಕ ಕಳಿಸಿ. ಮಾಹಿತಿಗಾಗಿ ಸಂಪರ್ಕಿಸಿ:ಸುನೀಲ್ ಜಯರಾಜ್ 9449836789. ತಿಮ್ಮೇಗೌಡ 8217448891. ಎಂ.ಶಿವರಾಜು 9448918457, 8951708457.

TEACHER REQUIRED for Maths classes 6 to 10 SSLC contact Kenmore School Basavanagudi or Whatsapp 9901501185 email kenmoreschool@gmail.com

Wanted

ಹೆಲ್ಪರ್ ಬೇಕಾಗಿದ್ದಾರೆ. ಪೀಣ್ಯ ಬಣ್ಣದ ಕಾರ್ಖಾನೆಗೆ. ಸಂಬಳ 18000, ESI ಇದೆ. OT ಇರುವುದಿಲ್ಲ, ಊಟ ಇರುವುದಿಲ್ಲ, ಕೊಠಡಿ ಇರುವುದಿಲ್ಲ. 9844017838

ಪ್ರವಾಸ

Travel

ಭಾರತಪರಂಪರ ದರ್ಶನ: 9.6.2025 7 ದಿನಗಳು ಅಯೋಧ್ಯ ಕಾಶಿಯಾತ್ರೆ ವಿಮಾನದಲ್ಲಿ. 18.6.2025 ಚಾರ್ ಧಾಮ್ 13 ದಿನಗಳು ವಿಮಾನದಲ್ಲಿ. ಪ್ರಕಾಶ್ ಹೆಬ್ಬಾರ್: 9448792891.

★ಶ್ರೇಯಸ್ ಟೂರ್ಸ್★ 10.06.2025 13ದಿನಗಳು ಆದಿಕೈಲಾಸ ಓಂಪರ್ವತ ನೈನಿತಾಲ್,ಅಲ್ಮೋರಾ,ಇತರೆ. 10.06.2025 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಅಯೋಧ್ಯೆ 24.06.2025 7ದಿನಗಳು ಕಾಶಿ ಅಯೋಧ್ಯೆ,ಪ್ರಯಾಗ್,ಗಯಾ ದೇವಘರ್.13.07.2025 25.07.2025 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯದ ವಿಜಯವಾಢ,ಮಂಗಳಗಿರಿ ಪಂಚರಾಮಕ್ಷೇತ್ರಗಳು ವಾಸವಿಪೆನುಗೊಂಡ,ಅನ್ನಾವರಂ ವಿಶಾಖಪಟ್ಟಣ,ಶ್ರೀಕೂರ್ಮಂ ಅರಕು,ಭದ್ರಾಚಲಂ,ವಾರಂಗಲ್ ಸ್ವರ್ಣಗಿರಿ,ರಾಮಾನುಜಾಚಾರ್ಯ 26.06.2025,15.07.2025 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ (ಅಮರಕಂಟಕ ಮಯ್ಯಾರ್ ಸಹಿತ).8073824856 9206979202 9606032154

27.6.2025ರಿಂದ 10ದಿನಗಳು ನವಗ್ರಹಗಳು ಚಿದಂಬರಂ ಕುಂಭಕೋಣಂ ಶ್ರೀರಂಗಂ ಪಳನಿ ಮಧುರೈ ರಾಮೇಶ್ವರಂ ಕನ್ಯಾಕುಮಾರಿ ತಿರುವನಂತಪುರ ಕಾಲಡಿ ಗುರುವಾಯೂರು ಮಲ್ಟಿಎಕ್ಸೆಲ್ ಬಸ್ಸಿನಲ್ಲಿ ಪ್ರವಾಸ. 11.9.2025 ಚಾರ್ ಧಾಮಪ್ರವಾಸ. ಸಂಪರ್ಕ್ಯ ಸಂಪರ್ಕಿಸಿ ವಿಷ್ಣನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.70. 9342287551, 9482239855

★ಶ್ರೇಯಸ್ ಟೂರ್ಸ್★ ವಿ.ವಿ ಪುರಂ:ಜೂನ್ 22,28 ಜುಲೈ 05,22,28 ಹಾಗೂ ಆಗಸ್ಟ್, ಸೆಪ್ಟೆಂಬರ್ ತಿಂಗಳಿನಲ್ಲಿ ಮಾನಸಸರೋವರ ಯಾತ್ರೆ ಮೌಂಟ್‌ಕೈಲಾಸ,ಕಠ್ಮಂಡು ಮುಕ್ತಿನಾಥ. 01.06.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ,ಪಾರೋ,ಪುನಕಾ ಪೂಚಲಿಂಗ್.8073824856 9206979202 9606032154

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
@ 750/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 | +91 9731810277

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಶಸ್ತ್ರಾಸ್ತ್ರ ತ್ಯಜಿಸಿದವರು 'ಸಿಪಿಐ' ಸದಸ್ಯರು • ಛತ್ತೀಸಗಢ: ಮೂವರ ಬಂಧನ

8 ನಕ್ಸಲರು ಪೊಲೀಸರಿಗೆ ಶರಣು

ಹೈದರಾಬಾದ್ (ಪಿಟಿಐ): ಸಿಪಿಐ (ಮಾವೋವಾದಿ) ಸಂಘಟನೆಯ ಎಂಟು ಸದಸ್ಯರು ತೆಲಂಗಾಣದ ಮುಲುಗು ಜಿಲ್ಲೆಯ ಪೊಲೀಸರಿಗೆ ಶನಿವಾರ ಶರಣಾಗಿದ್ದಾರೆ.

ಮಹಾರಾಷ್ಟ್ರ ಮತ್ತು ಛತ್ತೀಸಗಢದ ವಿಭಾಗೀಯ ಸಮಿತಿಯ ಒಬ್ಬ ಸದಸ್ಯ, ಪ್ರದೇಶ ಸಮಿತಿಯ ಇಬ್ಬರು ಸದಸ್ಯರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ, ಶರಣಾಗಿದ್ದಾರೆ ಎಂದು ಮುಲುಗು ಜಿಲ್ಲೆಯ ಎಸ್‌ಪಿ ಶಬರೀಶ್ ತಿಳಿಸಿದ್ದಾರೆ.

ಈ ಮೂಲಕ ಈ ವರ್ಷದ ಜನವರಿಯಿಂದ ಈವರೆಗೆ ಮುಲುಗು ಜಿಲ್ಲೆಯ 68 ಮಂದಿ ಸೇರಿದಂತೆ ಒಟ್ಟಾರೆ 355 ನಕ್ಸಲರು ತೆಲಂಗಾಣ ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ತೆಲಂಗಾಣ ಸರ್ಕಾರ ನೀಡಲಿರುವ ಕಲ್ಯಾಣ ಕ್ರಮಗಳಿಂದಾಗಿ ಹಲವರು ಮಾವೋವಾದಿ ಸಿದ್ಧಾಂತವನ್ನು ತ್ಯಜಿಸಿ,

ಸಾಂದರ್ಭಿಕ ಚಿತ್ರ

ತಮ್ಮ ಕುಟುಂಬಗಳ ಸದಸ್ಯರೊಂದಿಗೆ ಸುಖ ಸಂಸಾರ ಸಾಗಿಸಲು ಪೊಲೀಸರಿಗೆ ಶರಣಾಗುತ್ತಿದ್ದಾರೆ ಎಂದು ಪೊಲೀಸರು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಛತ್ತೀಸಗಢ–ಮೂವರು ನಕ್ಸಲರ ಬಂಧನ: ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಮೂವರು ನಕ್ಸಲರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದರು. ಜಿಲ್ಲೆಯಲ್ಲಿ ಕಳೆದ ವರ್ಷ ನಡೆದ ಶಿಕ್ಷಕರೊಬ್ಬರ ಹತ್ಯೆಯಲ್ಲಿ ಈ ಮೂವರು ಭಾಗಿಯಾಗಿದ್ದರು.

ಇವರ ಸುಳಿವು ನೀಡಿದವರಿಗೆ ಒಟ್ಟು ₹21 ಲಕ್ಷ ಬಹುಮಾನವನ್ನು ಘೋಷಿಸಲಾಗಿತ್ತು. ಕೇಂದ್ರೀಯ ಮೀಸಲು ಪೊಲೀಸ್ ಪಡೆ ಹಾಗೂ ಸ್ಥಳೀಯ ಪೊಲೀಸರು ಗೊಂಡಪಲ್ಲಿಯಲ್ಲಿ ಜಂಟಿ ಕಾರ್ಯಾಚರಣೆ ನಡೆಸಿದ್ದಾರೆ. ದೋಡಿ ಪೋಡಿಯಾ (36), ದೋಡಿ ಪಾಂಡು (18) ಹಾಗೂ ದೋಡಿ ನಂದು (28) ಬಂಧಿತರು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಜಾರ್ಖಂಡ್: ಮೂವರು ನಕ್ಸಲರ ವಿರುದ್ಧ ಎನ್‌ಐಎ ಆರೋಪಪಟ್ಟಿ

ನವದೆಹಲಿ (ಪಿಟಿಐ): ಜಾರ್ಖಂಡ್‌ನಲ್ಲಿ ನಿಷೇಧಿತ ಭಯೋತ್ಪಾದಕ ಸಂಘಟನೆಗೆ ಜನರನ್ನು ಬಲವಂತವಾಗಿ ನೇಮಕಿಸಿಕೊಂಡಿದ್ದಾರೆ ಮತ್ತು ಸುಲಿಗೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದಡಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮೂವರು ನಕ್ಸಲರ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಕೃಷ್ಣ ಹನ್ಸದಾ, ಅಜೀತ್ ಕೋರಾ ಮತ್ತು ರಾಮದಯಾಳ್ ಮಹತೋ ವಿರುದ್ಧ ಎನ್‌ಐಎ ರಾಂಚಿಯ ವಿಶೇಷ ನ್ಯಾಯಾಲಯದಲ್ಲಿ ಆರೋಪಪಟ್ಟಿಯನ್ನು ಶುಕ್ರವಾರ ಸಲ್ಲಿಸಿದೆ.

ಮೂವರೂ ನಿಷೇಧಿತ ಸಂಘಟನೆಯಾದ ಸಿಪಿಐ (ಮಾವೋವಾದಿ) ಸಕ್ರಿಯ ಸದಸ್ಯರಾಗಿದ್ದಾರೆ. ಕೋರಾ ವಿಚಾರಣಾಧೀನರಾಗಿದ್ದು, ಉಳಿದ ಇಬ್ಬರು ಜಾರ್ಖಂಡ್‌ನವರು ಎಂದು ತನಿಖಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

ದ್ವೇಷ ಭಾಷಣ: ಶಾಸಕಗೆ 2 ವರ್ಷ ಸಜೆ

ಮವೂ, ಉತ್ತರ ಪ್ರದೇಶ (ಪಿಟಿಐ): ದ್ವೇಷ ಭಾಷಣ ಮಾಡಿದ ಪ್ರಕರಣದಲ್ಲಿ ಉತ್ತರ ಪ್ರದೇಶದ ಶಾಸಕ ಅಬ್ಬಾಸ್ ಅನ್ಸಾರಿ ಅವರಿಗೆ ಕೋರ್ಟ್ ಎರಡು ವರ್ಷದ ಸಜೆ ವಿಧಿಸಿದೆ.

2022ರಲ್ಲಿ ಪ್ರಕರಣ ದಾಖಲಾಗಿತ್ತು. ಇವರು ಮಾಜಿ ಗ್ಯಾಂಗ್‌ಸ್ಟರ್ ಮತ್ತು ರಾಜಕಾರಣಿ ಮುಖ್ತಾರ್ ಅನ್ಸಾರಿ ಅವರ ಪುತ್ರ.

ಸಜೆ ವಿಧಿಸಿ ನ್ಯಾಯಾಲಯ ಆದೇಶಿಸಿದ ಹಿನ್ನೆಲೆಯಲ್ಲಿ ಇವರು ಶಾಸಕ ಸ್ಥಾನದಿಂದ ಅನರ್ಹಗೊಳ್ಳುವ ಸಾಧ್ಯತೆಗಳಿವೆ. ಮವೂ ಕ್ಷೇತ್ರದಿಂದ ಇವರು ಸುಹೇಲ್‌ದೇವ್ ಭಾರತೀಯ ಸಮಾಜವಾದಿ (ಎಸ್‌ಬಿಎಸ್‌ಪಿ) ಅಭ್ಯರ್ಥಿಯಾಗಿ ಜಯಗಳಿಸಿದ್ದಾರೆ.

ಚುನಾವಣೆ ವೇಳೆ ಪಹರ್‌ಪುರ್‌ನಲ್ಲಿ ಮಾಡಿದ್ದ ಪ್ರಚಾರ ಭಾಷಣದಲ್ಲಿ ಅವರು 'ಚುನಾವಣೆಯ ಬಳಿಕ ಲೆಕ್ಕಾಚಾರ ಚುಕ್ತಾ ಮಾಡ್ತೇನೆ' ಎಂದು ಮವೂ ಜಿಲ್ಲಾಡಳಿತಕ್ಕೆ ಬೆದರಿಕೆ ಹಾಕಿದ್ದರು. ಈ ಸಂಬಂಧ ದ್ವೇಷ ಭಾಷಣ ಪ್ರಕರಣ ದಾಖಲಾಗಿತ್ತು.

ಹುಲಿ ಸಂರಕ್ಷಕ ವಾಲ್ಮೀಕ್ ಥಾಪರ್ ಇನ್ನಿಲ್ಲ

ನವದೆಹಲಿ (ಪಿಟಿಐ): ದೇಶದ ವನ್ಯಜೀವಿ ಸಂರಕ್ಷಕರ ಪೈಕಿ ಪ್ರಮುಖರಾದ ವಾಲ್ಮೀಕ್ ಥಾಪರ್ ಅವರು (73) ತಮ್ಮ ನಿವಾಸದಲ್ಲಿ ಶನಿವಾರ ಬೆಳಿಗ್ಗೆ ನಿಧನರಾದರು. ಅವರು ಲೇಖಕರಾಗಿಯೂ ಚಿರಪರಿಚಿತರು.

1952ರಲ್ಲಿ ದೆಹಲಿಯಲ್ಲಿ ಜನಿಸಿದ ಥಾಪರ್ ಅವರು ತಮ್ಮ ಜೀವನವನ್ನು ಹುಲಿಗಳ ಸಂರಕ್ಷಣೆಗೆ, ಅವುಗಳ ಕುರಿತ ಅಧ್ಯಯನಕ್ಕೆ ಮುಡಿಪಾಗಿಟ್ಟರು. ಅದರಲ್ಲೂ ಮುಖ್ಯವಾಗಿ ರಾಜಸ್ಥಾನದ ರಣಥಂಬೋರ್ ರಾಷ್ಟ್ರೀಯ ಉದ್ಯಾನದಲ್ಲಿನ ಹುಲಿಗಳ ಬಗ್ಗೆ ಅವರು ಹೆಚ್ಚು ಗಮನಹರಿಸಿದ್ದರು.

ಸಮುದಾಯಗಳನ್ನು ಜೊತೆಯಾಗಿಸಿಕೊಂಡು ಸಂರಕ್ಷಣೆಗೆ ಗಮನ ನೀಡುವ ಸರ್ಕಾರೇತರ ಸಂಘಟನೆ 'ರಣಥಂಭೋರ್ ಪ್ರತಿಷ್ಠಾನ'ವನ್ನು ಥಾಪರ್ ಅವರು ಇತರರ ಜೊತೆಯಾಗಿ 1988ರಲ್ಲಿ ಆರಂಭಿಸಿದರು.

ಥಾಪರ್ ಅವರ ನಿಧನವು ಬಹಳ ದೊಡ್ಡ ನಷ್ಟ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಹೇಳಿದ್ದಾರೆ. 'ಥಾಪರ್ ಅವರಲ್ಲಿನ ಅವಿರತವಾದ ಉತ್ಸಾಹಕ್ಕೆ, ಆಳವಾದ ಬದ್ಧತೆಗೆ ಇಂದಿನ ರಣಥಂಬೋರ್ ಒಳ್ಳೆಯ ಉದಾಹರಣೆ. ಜೀವವೈವಿಧ್ಯಕ್ಕೆ ಸಂಬಂಧಿಸಿದ ಹಲವು ವಿಷಯಗಳಲ್ಲಿ ಅವರು ಅಸಾಮಾನ್ಯ ಜ್ಞಾನ ಹೊಂದಿದ್ದರು. ನಾನು ಸಚಿವನಾಗಿದ್ದ ಅವಧಿಯಲ್ಲಿ ನಾವು ಪರಸ್ಪರ ಮಾತನಾಡದ ಒಂದು ದಿನವೂ ಇರಲಿಲ್ಲ, ಬಹುತೇಕ ಸಂದರ್ಭಗಳಲ್ಲಿ ನಾನು ಕೇಳುಗನಾಗಿರುತ್ತಿದ್ದೆ' ಎಂದು ರಮೇಶ್ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಸ್ಥಾಯಿ ಸಮಿತಿಯೊಂದಕ್ಕೆ ತಾವು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಥಾಪರ್ ಅವರು ಅಮೂಲ್ಯವಾದ ಸಲಹೆಗಳನ್ನು ನಿರಂತರವಾಗಿ ಕೊಡುತ್ತಿದ್ದರು ಎಂದು ರಮೇಶ್ ನೆನಪಿಸಿಕೊಂಡಿದ್ದಾರೆ. ಥಾಪರ್ ಅವರ ತಂದೆ ರೋಮೇಶ್ ಥಾಪರ್ ಅವರು ಪತ್ರಕರ್ತರು. ಇತಿಹಾಸ ತಜ್ಞೆ ರೋಮಿಲಾ ಥಾಪರ್, ಪತ್ರಕರ್ತ ಕರಣ್ ಥಾಪರ್ ಅವರು ಇವರ ಸಂಬಂಧಿಕರು.



> ವಸಾಹತು ನಂತರದ ಕಾಲಘಟ್ಟದ ನನ್ನ ತಲೆಮಾರಿನ ವನ್ಯಜೀವಿ ಸಂರಕ್ಷಕರ ಪೈಕಿ ವಾಲ್ಮೀಕ್ ಥಾಪರ್ ಅವರು ಅತ್ಯಂತ ಪರಿಣಾಮಕಾರಿ ಹಾಗೂ ನಿಜವಾದ ನಾಯಕರಾಗಿ ಎತ್ತರದ ಸ್ಥಾನ ಹೊಂದಿದ್ದರು
> **ಕೆ. ಉಲ್ಲಾಸ ಕಾರಂತ**
> ವನ್ಯಜೀವಿ ತಜ್ಞ

ದಿ ಡೂನ್ ಸ್ಕೂಲ್‌ನಲ್ಲಿ ಶಿಕ್ಷಣ ಪಡೆದ ಥಾಪರ್ ನಂತರ ದೆಹಲಿ ವಿಶ್ವವಿದ್ಯಾಲಯದ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಚಿನ್ನದ ಪದಕದೊಂದಿಗೆ ಸಮಾಜಶಾಸ್ತ್ರದಲ್ಲಿ ಪದವಿ ಪಡೆದಿದ್ದರು. ನಟ ಶಶಿ ಕಪೂರ್ ಅವರ ಮಗಳು, ರಂಗಭೂಮಿ ಕಲಾವಿದೆ ಸಂಜನಾ ಕಪೂರ್ ಅವರನ್ನು ಮದುವೆಯಾಗಿದ್ದ ಥಾಪರ್ ಅವರಿಗೆ ಒಬ್ಬ ಮಗ ಇದ್ದಾನೆ.

ದೇಶದ ಹೆಸರಾಂತ ವನ್ಯಜೀವಿ ಸಂರಕ್ಷಕ ಫತೇಹ್ ಸಿಂಗ್ ರಾಥೋರ್ ಅವರು ಥಾಪರ್ ಅವರಿಗೆ ಮಾರ್ಗದರ್ಶಕರಾಗಿದ್ದರು. ಕಳ್ಳಬೇಟೆ ತಡೆಯಲು ಕಠಿಣ ಕಾನೂನು ಬೇಕು ಎಂಬುದರ ಪರವಾಗಿ ಥಾಪರ್ ಅವರು ಐದು ದಶಕಗಳ ತಮ್ಮ ವೃತ್ತಿಬದುಕಿನ ಉದ್ದಕ್ಕೂ ಬಲವಾಗಿ ಲಾಬಿ ನಡೆಸಿದ್ದರು, ಹುಲಿಗಳ ಆವಾಸ ಸ್ಥಾನಗಳನ್ನು ರಕ್ಷಿಸುವ ಪ್ರಯತ್ನ ನಡೆಯಬೇಕು ಎಂದು ಹೇಳುತ್ತಿದ್ದರು.

ಪ್ರಧಾನಿ ನೇತೃತ್ವದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸದಸ್ಯರಾಗಿ, ಸರ್ಕಾರದ 150ಕ್ಕೂ ಹೆಚ್ಚು ಕಾರ್ಯಪಡೆಗಳಲ್ಲಿ, ಸಮಿತಿಗಳಲ್ಲಿ ಸದಸ್ಯರಾಗಿ ಥಾಪರ್ ಕೆಲಸ ಮಾಡಿದ್ದಾರೆ.

ಯುಪಿಎ ಸರ್ಕಾರವು 2005ರಲ್ಲಿ ಹುಲಿ ಕಾರ್ಯಪಡೆಯನ್ನು ರಚಿಸಿತು, ಥಾಪರ್ ಅದರ ಸದಸ್ಯರಾಗಿದ್ದರು. ಕಾರ್ಯಪಡೆಯ ಅಧ್ಯಕ್ಷೆ ಸುನೀತಾ ನಾರಾಯಣ್ ಅವರು ವರದಿಯನ್ನು ಸಲ್ಲಿಸಿದಾಗ ಥಾಪರ್ ಅವರು ಭಿನ್ನಮತದ ಟಿಪ್ಪಣಿಯೊಂದನ್ನು ಸಲ್ಲಿಸಿದ್ದರು.

ಹುಲಿಗಳು ಮತ್ತು ಮನುಷ್ಯರು ಒಂದೇ ಪ್ರದೇಶದಲ್ಲಿ ವಾಸಿಸಬಹುದು ಎಂಬ ವಿಚಾರದಲ್ಲಿ ವರದಿಯು ಬಹಳ ಆಶಾದಾಯಕವಾದ ಚಿತ್ರಣ ನೀಡುತ್ತದೆ ಎಂದು ಥಾಪರ್ ಕಳವಳ ವ್ಯಕ್ತಪಡಿಸಿದ್ದರು. ದೀರ್ಘಾವಧಿಯಲ್ಲಿ ಹುಲಿಗಳು ಬದುಕುಳಿಯಬೇಕು ಎಂದಾದರೆ ಕೆಲವು ಪ್ರದೇಶಗಳನ್ನು ಮನುಷ್ಯನ ಹಸ್ತಕ್ಷೇಪದಿಂದ ಮುಕ್ತವಾಗಿ ಇರಿಸಬೇಕು ಎಂದು ಥಾಪರ್ ವಾದಿಸಿದ್ದರು. ಕನಿಷ್ಠಪಕ್ಷ ಕೆಲವು ಪ್ರದೇಶಗಳನ್ನು ಸಹಜ ರೂಪದಲ್ಲಿ ಹುಲಿಗಳಿಗಾಗಿ ಮೀಸಲಿಡಬೇಕು ಎಂದು ಹೇಳಿದ್ದರು. ಅವರು ರಚಿಸಿರುವ, ಸಂಪಾದಿಸಿರುವ ಕೃತಿಗಳ ಸಂಖ್ಯೆ 30ಕ್ಕೂ ಹೆಚ್ಚು.

ಮಹಿಳಾ ಅಧಿಕಾರಿಗಳನ್ನು ಸನ್ಮಾನಿಸಿದ ಸೇನಾ ಮುಖ್ಯಸ್ಥ

ಮಾಜಿ ಯೋಧರ ಸೇವೆ ಸ್ಮರಣೆ

ಜಮ್ಮು (ಪಿಟಿಐ): 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅರೆಸೇನಾ ಪಡೆ ಹಾಗೂ ಮಾಜಿ ಯೋಧರ ಸೇವೆಯನ್ನು ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಸ್ಮರಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಉನ್ನತ ಮಟ್ಟದ ಭದ್ರತಾ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲು ಎರಡು ದಿನಗಳ ಜಮ್ಮು ಪ್ರವಾಸ ಕೈಗೊಂಡಿದ್ದ ಅವರು, ಸೈನಿಕರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಜಮ್ಮು ಮತ್ತು ಕಾಶ್ಮೀರದ ಪರಗ್‌ವಾಲ್ ವಲಯದಲ್ಲಿ ಕಾರ್ಯಾಚರಣೆ ಸಿದ್ಧತೆ ಕುರಿತಂತೆ ಪರಿಶೀಲನೆ ನಡೆಸಿದರು. ಆಪರೇಷನ್ ಸಿಂಧೂರದಲ್ಲಿ ಪ್ರಮುಖ ಪಾತ್ರ ವಹಿಸಿದ್ದ 'ಟೈಗರ್ ವಲಯ'ದ ಸೇನಾ ತುಕಡಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

'ಭದ್ರತೆ ವಿಚಾರದಲ್ಲಿ ಸೇನೆಯು ಕ್ರಿಯಾಶೀಲವಾಗಿರುವ ಜೊತೆಗೆ ದಾಳಿ ವೇಳೆ ತ್ವರಿತವಾಗಿ ಪ್ರತಿಕ್ರಿಯಿಸಲು ಒತ್ತು ನೀಡಬೇಕು ಎಂದು ದ್ವಿವೇದಿ ತಿಳಿಸಿದರು' ಎಂದು ಭಾರತೀಯ ಸೇನೆಯ ಮಾಹಿತಿ ವಿಭಾಗದ ಎಡಿಜಿಪಿ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

'ಆಪರೇಷನ್ ಸಿಂಧೂರ' ವೇಳೆ ಸೇನೆಯ ಜೊತೆಗೆ ಬಿಎಸ್‌ಎಫ್ ಕೂಡ ಕೈ ಜೋಡಿಸಿ ಹೋರಾಟ ನಡೆಸಿದೆ. ಜಮ್ಮುವಿನ ಅಖ್ನೂರ್ ಸೆಕ್ಟರ್‌ನ ಮುಂಚೂಣಿ ನೆಲೆಗಳಲ್ಲಿ ಸಹಾಯಕ ಕಮಾಂಡೆಟ್ ನೇಹಾ ಭಂಡಾರಿ ಹಾಗೂ ಅವರ ನೇತೃತ್ವದ ತಂಡವು ಸಮರ್ಥವಾಗಿ ಪ್ರತಿದಾಳಿ ನಡೆಸಿದೆ' ಎಂದು ಉಪೇಂದ್ರ ದ್ವಿವೇದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಸೇನಾಧಿಕಾರಿಗಳು ಅತ್ಯಂತ ಮಹತ್ವದ ಸೇವೆ ಸಲ್ಲಿಸಿದ್ದನ್ನು ಈ ವೇಳೆ ಸ್ಮರಿಸಿಕೊಂಡರು.

ಟೈಗರ್ ವಲಯಕ್ಕೆ ಭೇಟಿ ನೀಡಿದ ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಅವರು ನೇಹಾ ಭಂಡಾರಿ ಅವರಿಗೆ ಹಸ್ತಲಾಘವ ಮಾಡಿ ಅಭಿನಂದಿಸಿದರು –ಪಿಟಿಐ ಚಿತ್ರ

ನೇಹಾ ಭಂಡಾರಿ ತಂಡದ ಸಾಧನೆ

'ಆಪರೇಷನ್ ಸಿಂಧೂರ'ದ ವೇಳೆ ನೇಹಾ ಭಂಡಾರಿ ಅವರು ಆರು ಮಹಿಳಾ ಕಾನ್‌ಸ್ಟೆಬಲ್‌ಗಳ ತಂಡದ ಜೊತೆಗೆ ಸಾಂಬಾ, ಅಖ್ನೂರ್, ಆರ್‌.ಎಸ್‌.ಪುರದ ಅಂತರರಾಷ್ಟ್ರೀಯ ಗಡಿಯಲ್ಲಿ ಶತ್ರುಪಡೆಗಳ ನೆಲೆಗಳನ್ನು ಗುರಿಯಾಗಿರಿಸಿ ಕೊಂಡು ನಿಖರವಾದ ದಾಳಿ ನಡೆಸಿದ್ದರು.

ಉತ್ತರಾಖಂಡ ಮೂಲದ ನೇಹಾ, ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮೂರನೇ ತಲೆಮಾರಿನವರು. ನೇಹಾ ಅವರ ಅಜ್ಜ ಭಾರತೀಯ ಸೇನೆಯಲ್ಲಿ ಕೆಲಸ ಮಾಡಿದ್ದು, ಪೋಷಕರು ಕೇಂದ್ರೀಯ ಮೀಸಲು ಪೊಲೀಸ್ ಪಡೆಯಲ್ಲಿ ಕೆಲಸ ಮಾಡಿದ್ದರು. 'ಪಾಕಿಸ್ತಾನ ನೆಲೆಗಳ ಮೇಲೆ ದಾಳಿ ನಡೆಸಿ, ಪ್ರತ್ಯುತ್ತರ ನೀಡಿದ್ದು, ತಂಡಕ್ಕೆ ಹೆಮ್ಮೆಯ ವಿಚಾರವಾಗಿದೆ' ಎಂದು ನೇಹಾ ತಿಳಿಸಿದ್ದಾರೆ.

'ಗುಂಡಿನ ದಾಳಿಗೆ ಫಿರಂಗಿಯಿಂದ ಉತ್ತರ'

ಭೋಪಾಲ್ (ಪಿಟಿಐ): ಬಂದೂಕಿನಿಂದ ಗುಂಡು ಹಾರಿಸಿದರೆ ಫಿರಂಗಿಯಿಂದ ಗುಂಡು ಹಾರಿಸಿ ಪ್ರತ್ಯುತ್ತರ ನೀಡಲಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದರು.

ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪ್ರತ್ಯುತ್ತರವಾಗಿ ಭಾರತವು 'ಸಿಂಧೂರ ಕಾರ್ಯಾಚರಣೆ' ನಡೆಸಿದ ಬಳಿಕ 'ಸಿಂಧೂರ'ವು ಶೌರ್ಯದ ಸಂಕೇತವಾಗಿ ಬದಲಾಗಿದೆ ಎಂದು ಮೋದಿ ಅವರು ಹೇಳಿದ್ದಾರೆ.

ಸಿಂಧೂರ ಕಾರ್ಯಾಚರಣೆಯು ದೇಶ ಕಂಡ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ಪೈಕಿ ಅತ್ಯಂತ ಯಶಸ್ವಿಯಾದದ್ದು ಎಂದು ಪ್ರತಿಪಾದಿಸಿದರು.

'ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ಭಾರತೀಯರ ರಕ್ತ ಹರಿಸಿದ್ದಷ್ಟೇ ಅಲ್ಲದೆ, ನಮ್ಮ ಸಂಸ್ಕೃತಿಯ ಮೇಲೆಯೂ ದಾಳಿ ಮಾಡಿದ್ದರು... ನಮ್ಮ ದೇಶದ ಮಹಿಳೆಯರ ಶಕ್ತಿಗೆ ಅವರು ಸವಾಲು ಹಾಕಿದ್ದರು' ಎಂದರು.

ಸಾತ್ಯಕಿ ಸಾವರ್ಕರ್: ವಂಶವೃಕ್ಷದ ವಿವರ ಕೇಳಿದ್ದ ಅರ್ಜಿ ವಜಾ

ಪುಣೆ (ಪಿಟಿಐ): ವಿ.ಡಿ.ಸಾವರ್ಕರ್ ಅವರ ಮೊಮ್ಮಗ ಸಾತ್ಯಕಿ ಸಾವರ್ಕರ್ ಅವರ ತಾಯಿಯ ವಂಶವೃಕ್ಷದ ವಿವರಗಳನ್ನು ಬಯಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಸ್ಥಳೀಯ ಜೆಎಂಎಫ್‌ಸಿ ಕೋರ್ಟ್ ಶನಿವಾರ ವಜಾಮಾಡಿತು.

ಹಿಂದುತ್ವ ವಿಚಾರವಾದ ಕುರಿತು ಆಕ್ಷೇಪಾರ್ಹ ಹೇಳಿಕೆಯನ್ನು ನೀಡಿದ್ದಾರೆ ಎಂದು ಸಾತ್ಯಕಿ ಅವರು ರಾಹುಲ್ ಗಾಂಧಿ ಅವರ ವಿರುದ್ಧ ಮಾನಹಾನಿ ಮೊಕದ್ದಮೆ ದಾಖಲಿಸಿದ್ದಾರೆ.

ಅರ್ಜಿ ತಿರಸ್ಕರಿಸಿದ ನ್ಯಾಯಾಧೀಶರಾದ ಅಮೋಲ್ ಶಿಂದೆ, 'ಈ ಪ್ರಕರಣ ರಾಹುಲ್ ಗಾಂಧಿ ಅವರು ಲಂಡನ್‌ನಲ್ಲಿ ಮಾಡಿದ್ದ ಭಾಷಣಕ್ಕೆ ಸಂಬಂಧಿಸಿದ್ದಾಗಿದೆ, ಅರ್ಜಿದಾರರ ತಾಯಿ ಹಿಮಾನಿ ಅಶೋಕ್ ಸಾವರ್ಕರ್ ಅವರ ವಂಶವೃಕ್ಷಕ್ಕೆ ಸಂಬಂಧಿಸಿದ್ದಲ್ಲ' ಎಂದು ಹೇಳಿದರು.

ಹಿಮಾನಿ ಸಾವರ್ಕರ್ ಅವರು ಗೋಪಾಲ್ ವಿನಾಯಕ ಗೋಡ್ಸೆ ಅವರ ಪುತ್ರಿ. ಗೋಪಾಲ್ ಅವರು ಮಹಾತ್ಮ ಗಾಂಧಿ ಅವರನ್ನು ಹತ್ಯೆಗೈದಿದ್ದ ನಾಥೂರಾಂ ಗೋಡ್ಸೆ ಅವರ ಸಹೋದರ.

ರಾಹುಲ್ ಗಾಂಧಿ ಪರ ವಕೀಲರು ತಮ್ಮ ಅರ್ಜಿಯಲ್ಲಿ, 'ಅರ್ಜಿದಾರರು, ತನ್ನ ತಂದೆಯ ವಂಶವೃಕ್ಷದ ವಿವರ ನೀಡಿದ್ದಾರೆ. ಆದರೆ, ತಾಯಿಯ ವಂಶವೃಕ್ಷದ ವಿವರಗಳನ್ನು ನೀಡಿಲ್ಲ. ಈ ಪ್ರಕರಣದ ವಿಚಾರಣೆಗೆ ಈ ಮಾಹಿತಿಯು ಮುಖ್ಯವಾದುದಾಗಿದೆ' ಎಂದು ವಾದಿಸಿದ್ದರು.

ಪ್ರಕರಣಕ್ಕೂ ಅರ್ಜಿದಾರರು ಕೇಳಿರುವ ವಿವರಗಳಿಗೂ ಸಂಬಂಧವಿಲ್ಲ. ಹೀಗಾಗಿ, ಅರ್ಜಿಯನ್ನು ತಿರಸ್ಕರಿಸಲಾಗುತ್ತಿದೆ ಎಂದು ನ್ಯಾಯಾಧೀಶರು ತಿಳಿಸಿದರು.

ಇದೇ ವೇಳೆ ರಾಹುಲ್ ಗಾಂಧಿ ಅವರಿಗೆ ನೀಡಲಾಗಿರುವ ಜಾಮೀನು ರದ್ದುಪಡಿಸಬೇಕು ಎಂದು ಕೋರಿ ಸಾತ್ಯಕಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿತು. ತಮ್ಮ ಮನವಿಗೆ ಅರ್ಜಿದಾರರು ಸಕಾರಣ ನೀಡಿಲ್ಲ ಎಂದು ಅಭಿಪ್ರಾಯಪಟ್ಟಿತು.

1971ರಲ್ಲಿ ಇಂದಿರಾಗಾಂಧಿ ಒತ್ತಡಕ್ಕೆ ಮಣಿದಿರಲಿಲ್ಲ: ಕಮಲ್‌ನಾಥ್

ಜಬಲ್ಪುರ (ಪಿಟಿಐ): 'ಭಾರತ–ಪಾಕಿಸ್ತಾನ ನಡುವಣ 1971ರ ಯುದ್ಧದ ವೇಳೆ ಆಗಿನ ಪ್ರಧಾನಿ ಇಂದಿರಾಗಾಂಧಿ ಅವರು ಅಮೆರಿಕದ ಒತ್ತಡಕ್ಕೆ ಮಣಿದಿರಲಿಲ್ಲ' ಎಂದು ಮಧ್ಯಪ್ರದೇಶ ಕಾಂಗ್ರೆಸ್ ನಾಯಕ ಕಮಲ್‌ನಾಥ್ ಇಲ್ಲಿ ನಡೆದ ರ‍್ಯಾಲಿಯಲ್ಲಿ ಹೇಳಿದ್ದಾರೆ.

ಭಾರತ–ಪಾಕ್ ನಡುವಣ ಸೇನಾ ಸಂಘರ್ಷದ ವೇಳೆ ಕದನವಿರಾಮಕ್ಕೆ ನಾನು ಮಧ್ಯಸ್ಥಿಕೆ ವಹಿಸಿದ್ದೆ ಎಂಬ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪುನರಾವರ್ತಿತ ಹೇಳಿಕೆಯ ಹಿನ್ನಲೆಯಲ್ಲಿ ಅವರು ಈ ಮಾತು ಹೇಳಿದ್ದಾರೆ.

ಕಮಲ್‌ನಾಥ್

'ನಾನು 1971ರ ಯುದ್ಧ ನೋಡಿದ್ದೇನೆ. ಇಂದಿರಾಗಾಂಧಿ ಅವರ ಸಾಮರ್ಥ್ಯ ಗಮನಿಸಿದ್ದೇನೆ. ಆಗ ಪಾಕಿಸ್ತಾನ ಬೆಂಬಲಿಸಿದ್ದ ಅಮೆರಿಕ, ವಿವಿಧೆಡೆಯಿಂದ ಭಾರತದ ಮೇಲೆ ಒತ್ತಡ ಹೇರಿತ್ತು. ಆದರೆ, ಇದಕ್ಕೆ ಇಂದಿರಾಗಾಂಧಿ ಮಣಿದಿರಲಿಲ್ಲ' ಎಂದು ಹೇಳಿದರು.

ಮಧ್ಯಸ್ಥಿಕೆ ವಹಿಸಿದ್ದೆ ಎಂದು ಟ್ರಂಪ್ ಪುನರುಚ್ಚರಿಸಿದ್ದರೆ, ಆಪರೇಷನ್ ಸಿಂಧೂರ ನಿಲ್ಲಿಸಲು ಪಾಕ್ ಅಂಗಲಾಚಿತ್ತು ಎಂದು ಪ್ರಧಾನಿ ಮೋದಿ ಕಾನ್ಪುರದಲ್ಲಿ ಶುಕ್ರವಾರ ಹೇಳಿದ್ದರು.

ಸಿಂಧೂರ ಕಾರ್ಯಾಚರಣೆಯ ಯಶಸ್ಸಿನ ಹಿನ್ನಲೆಯಲ್ಲಿ ಸೇನೆಗೆ ಕೃತಜ್ಞತೆ ಸಲ್ಲಿಸಲು ಕಾಂಗ್ರೆಸ್ ಪಕ್ಷ ರಾಜ್ಯದಾದ್ಯಂತ 'ಜೈಹಿಂದ್ ಸಭಾ' ರ‍್ಯಾಲಿಯನ್ನು ನಡೆಸುತ್ತಿದೆ.

'ದೇಶದ ಒಗ್ಗಟ್ಟಿಗೆ ಸಂವಿಧಾನ ಕಾರಣ'

ಪ್ರಯಾಗರಾಜ್ (ಪಿಟಿಐ): 'ದೇಶವು ಬಿಕ್ಕಟ್ಟು ಎದುರಿಸಿದಾಗಲೆಲ್ಲ ಒಗ್ಗಟ್ಟಿನಿಂದ, ಬಲಶಾಲಿಯಾಗಿ ನಿಂತಿದೆ. ಇದರ ಶ್ರೇಯವನ್ನು ಸಂವಿಧಾನಕ್ಕೆ ನೀಡಬೇಕು' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್‌. ಗವಾಯಿ ಹೇಳಿದ್ದಾರೆ.

ಅಲಹಾಬಾದ್ ಹೈಕೋರ್ಟ್‌ನಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು ಈ ಮಾತು ಹೇಳಿದ್ದಾರೆ. 'ಸಂವಿಧಾನವು ಒಕ್ಕೂಟ ವ್ಯವಸ್ಥೆಗೆ ಹೆಚ್ಚು ಒತ್ತು ಕೊಡುತ್ತದೆ ಎಂದು ಕೆಲವರು, ಕೇಂದ್ರೀಕೃತ ವ್ಯವಸ್ಥೆಗೆ ಹೆಚ್ಚು ಒತ್ತು ಕೊಡುತ್ತದೆ ಎಂದು ಇನ್ನು ಕೆಲವರು ಹೇಳಿದ್ದರು. ಆದರೆ ಸಂವಿಧಾನವು ಪೂರ್ತಿಯಾಗಿ ಒಕ್ಕೂಟ ವ್ಯವಸ್ಥೆಯನ್ನು ತರುವುದಿಲ್ಲ, ಪೂರ್ತಿಯಾಗಿ ಕೇಂದ್ರೀಕೃತ

ಬಿ.ಆರ್‌. ಗವಾಯಿ

ವ್ಯವಸ್ಥೆಯನ್ನು ಕೂಡ ತರುವುದಿಲ್ಲ ಎಂದು ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್‌ಅವರು ಹೇಳಿದ್ದರು. ಶಾಂತಿ ಕಾಲದಲ್ಲಿ ಮತ್ತು ಯುದ್ಧ ಕಾಲದಲ್ಲಿ ಭಾರತವನ್ನು ಒಟ್ಟಾಗಿ ಇರಿಸುವ ಸಂವಿಧಾನವನ್ನು ನಾವು ನೀಡಿದ್ದೇವೆ ಎಂಬುದನ್ನು ನಾನು ಹೇಳಬಲ್ಲೆ ಎಂದೂ ಅಂಬೇಡ್ಕರ್ ಹೇಳಿದ್ದರು' ಎಂದು ಗವಾಯಿ ನೆನಪಿಸಿಕೊಂಡಿದ್ದಾರೆ.

ಸಂವಿಧಾನದ ಕಾರಣದಿಂದಾಗಿ ಭಾರತವು ಸ್ವಾತಂತ್ರ್ಯಾನಂತರದಲ್ಲಿ ಅಭಿವೃದ್ಧಿಯ ಹಾದಿಯಲ್ಲಿ ಸಾಗಿಬಂದಿದೆ ಎಂದು ಸಿಜೆಐ ಹೇಳಿದ್ದಾರೆ.

ಎಐ ನಿರೂಪಕನನ್ನು ಸೃಷ್ಟಿಸಿದ 'ಸಾಮ್ನಾ'

ಮುಂಬೈ (ಪಿಟಿಐ): 'ಮರಾಠಿ ಭಾಷೆಯಲ್ಲೇ ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆಯ (ಎ.ಐ) ನಿರೂಪಕನನ್ನು 'ಸಾಮ್ನಾ' ಪತ್ರಿಕೆಯು ಸೃಷ್ಟಿಸಿದೆ ಎಂದು ಪತ್ರಿಕೆಯ ಕಾರ್ಯಕಾರಿ ಸಂಪಾದಕ ಸಂಜಯ್ ರಾವುತ್ ತಿಳಿಸಿದ್ದಾರೆ. ಮೊದಲ ಎ.ಐ ನಿರೂಪಕನಿಗೆ 'ತೇಜಸ್ವಿ ಎ.ಐ' ಎಂದು ನಾಮಕರಣ ಮಾಡಲಾಗಿದ್ದು, ಸಾಮ್ನಾ ಯೂಟ್ಯೂಬ್ ಚಾನೆಲ್‌ನಲ್ಲಿ ಸುದ್ದಿಗಳನ್ನು ಓದಲಿದೆ.

'ಶಾಸಕಾಂಗದೊಂದಿಗೆ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶ ರಚಿಸಿ'

ನವದೆಹಲಿ (ಪಿಟಿಐ): 'ಮಣಿಪುರದಲ್ಲಿ ರಕ್ಷಣಾತ್ಮಕ ಕ್ರಮವಾಗಿ ಬಫರ್ ವಲಯಗಳನ್ನು ನಿರ್ವಹಿಸಬೇಕು. ಇಲ್ಲದಿದ್ದರೆ, ಸಮಗ್ರ ರಾಜಕೀಯ ಪರಿಹಾರವಾಗಿ ಶಾಸಕಾಂಗ ಒಳಗೊಂಡ ಕೇಂದ್ರಾಡಳಿತ ಪ್ರದೇಶವನ್ನು ರಚಿಸಬೇಕು' ಎಂದು ಮಣಿಪುರದ ಕುಕಿ ಗುಂಪುಗಳು ಒತ್ತಾಯಿಸಿವೆ.

ಈ ಕುರಿತು ನವದೆಹಲಿಯಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕುಕಿ ಜೊ ಮಹಿಳಾ ವೇದಿಕೆಯ ಸಹ ಸಂಯೋಜಕಿ ಥೊಂಗ್ ಹಾವೊಕಿಪ್, 'ಶಾಸಕಾಂಗವನ್ನು ಒಳಗೊಂಡ ಕೇಂದ್ರಾಡಳಿತ ಪ್ರದೇಶ ರಚಿಸಬೇಕು' ಎಂದು ಪುನರುಚ್ಚರಿಸಿದರು.

'ಇದು ಯಾವುದೇ ಸಮುದಾಯ ವಿರುದ್ಧದ ನಿರ್ಧಾರವಲ್ಲ. ಕುಕಿ ಜನರ ಸುರಕ್ಷತೆ ಹಾಗೂ ಅಸ್ತಿತ್ವ ಉಳಿಸಿಕೊಳ್ಳಲು ತೆಗೆದುಕೊಳ್ಳಬೇಕಾದ ಸರಿಯಾದ ಕ್ರಮ' ಎಂದು ಸಮರ್ಥಿಸಿಕೊಂಡಿದ್ದಾರೆ.

'ಈ ಬೇಡಿಕೆಯು ಯಾವುದೇ ರಾಜಕೀಯದ ಆಯಾಮದಿಂದ ಅಲ್ಲ, ಆದರೆ, ಜನರ ಸುರಕ್ಷತೆ ಹಾಗೂ ಶಾಂತಿ ದೃಷ್ಟಿಯಿಂದ ಅಗತ್ಯವಾಗಿದೆ' ಎಂದು ಪ್ರತಿಪಾದಿಸಿದ್ದಾರೆ.

'ಕುಕಿ ಬುಡಕಟ್ಟು ಸಮುದಾಯದವರನ್ನು ಬೆನ್ನತ್ತಿ ಇಂಫಾಲ್‌ನಿಂದ ಹೊರದಬ್ಬಲಾಗಿದ್ದು, ಪ್ರಾಣಿಗಳಂತೆ ಹತ್ಯೆ ಮಾಡಲಾಗಿದೆ. ನಮ್ಮನ್ನು ಶತ್ರುಗಳಂತೆ ನಡೆಸಿಕೊಳ್ಳಲಾಗುತ್ತಿದೆ. ನಮ್ಮ ಗುರುತಿನಿಂದಲೇ ಕೊಲ್ಲಲಾಗಿದ್ದು, ಸರಿಯಾದ ಸಮಯಕ್ಕೆ ಭದ್ರತಾ ಪಡೆಗಳು ಮಧ್ಯಪ್ರವೇಶಿಸುವುದಿಲ್ಲ. ಸರ್ಕಾರವೇ ನಮ್ಮನ್ನು ರಕ್ಷಿಸಬೇಕಿದ್ದು, ಇದುವರೆಗೂ ನಮಗಾಗಿ ಏನೂ ಮಾಡಿಲ್ಲ' ಎಂದು ಆರೋಪಿಸಿದರು.

ಸ್ವರಕ್ಷಣೆ ತಾಲೀಮು: ಬ್ಲ್ಯಾಕ್‌ಔಟ್

ಅಹಮದಾಬಾದ್ / ಚಂಡೀಗಢ (ಪಿಟಿಐ): ಆಡಳಿತ ಕೈಗೊಳ್ಳಬೇಕಾದ ಆಪತ್ಕಾಲಿಕ ಸಿದ್ಧತೆ ಹಾಗೂ ಸಾರ್ವಜನಿಕರ ಪ್ರತಿಕ್ರಿಯೆಯ ಸಾಮರ್ಥ್ಯ ಹೆಚ್ಚಿಸಲು ಜಮ್ಮು ಮತ್ತು ಕಾಶ್ಮೀರ, ಗುಜರಾತ್, ಪಂಜಾಬ್, ಹರಿಯಾಣ ಹಾಗೂ ಚಂಡೀಗಢದಲ್ಲಿ ಶನಿವಾರ ಸ್ವರಕ್ಷಣೆಯ ತಾಲೀಮು ನಡೆಯಿತು. ಇದರೊಟ್ಟಿಗೆ ಬ್ಲ್ಯಾಕ್‌ಔಟ್ ಸಹ ಮಾಡಲಾಯಿತು.

'ಆಪರೇಷನ್ ಶೀಲ್ಡ್' ಹೆಸರಿನಲ್ಲಿ ಗುಜರಾತ್‌ನ 18 ಜಿಲ್ಲೆಗಳಲ್ಲಿ ಸ್ವರಕ್ಷಣೆಯ ತಾಲೀಮು ನಡೆಯಿತು. ಅಗ್ನಿಶಾಮಕದಳ, ಪೊಲೀಸ್, ಆರೋಗ್ಯ ಇಲಾಖೆ ಹಾಗೂ ವಿಪತ್ತು ನಿರ್ವಹಣಾ ಅಧಿಕಾರಿಗಳು ಸೇರಿದಂತೆ ವಿವಿಧ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಅಧಿಸೂಚನೆ

ಸಂಖ್ಯೆ: ಬೆವಿಕಂ/ಪ್ರವ್ಯ(ಆ&ಮಾ.ಸಂ)/ಬಿಸಿ–50/2524/2024–25 ದಿನಾಂಕ: 31.05.2025

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 14.10.2024ರ ಉದ್ಯೋಗ ಪ್ರಕಟಣೆಗನುಗುಣವಾಗಿ, **ಕಿರಿಯ ಪವರ್‌ಮ್ಯಾನ್** ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಸಹನ ಶಕ್ತಿ ಪರೀಕ್ಷೆಗೆ 1:5 ಅನುಪಾತದಲ್ಲಿ **Shortlist** ಆಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ಕಟ್–ಆಫ್(Cut-Off) ಅಂಕಗಳೊಂದಿಗೆ ಅಂತರ್ಜಾಲ **https://bescom.karnataka.gov.in** ನಲ್ಲಿ ಪ್ರಕಟಿಸಲಾಗಿದೆ. ಸಹನ ಶಕ್ತಿ ಪರೀಕ್ಷೆಯನ್ನು ದಿನಾಂಕ: **09.06.2025 ರಿಂದ 12.06.2025 ರವರೆಗೆ** ಬೆಂಗಳೂರಿನ ಐದು ವಿವಿಧ ಕ್ರೀಡಾಂಗಣಗಳಲ್ಲಿ ನಡೆಸಲಾಗುತ್ತಿದೆ. ಸಹನ ಶಕ್ತಿ ಪರೀಕ್ಷೆಯ ಕರೆ ಪತ್ರಗಳನ್ನು ಬೆವಿಕಂ ವೆಬ್‌ಸೈಟ್: **https://bescom.karnataka.gov.in** ನಿಂದ ದಿನಾಂಕ: **02.06.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾನವ ಸಂಪನ್ಮೂಲ),
ಕಂಪನಿ ಕಾರ್ಯಾಲಯ, ಬೆವಿಕಂ,
ಬೆಳಕು ಭವನ, ಬೆಂಗಳೂರು.

ವಿದ್ಯುತ್ ಸಂಬಂಧಿತ ದೂರಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲಾ ಪಂಚಾಯತ್ ಕಟ್ಟಡ, 1ನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/01/2025–26 ದಿನಾಂಕ: 31–05–2025

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2025–26 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **10–06–2025 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/975/ಅಡ್ವಟೋರ್/2025–26

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2025–26/13265–70 ದಿನಾಂಕ: 30–05–2025

:: ಪತ್ರಿಕಾ ಪ್ರಕಟಣೆ ರದ್ದತಿ ::

ಈ ಕಛೇರಿ ಟೆಂಡರ್ ಪತ್ರಿಕಾ ಪ್ರಕಟಣೆ ಪತ್ರ ಸಂಖ್ಯೆ. ಗುವಿಸಕಂನಿ/ಅಅ(ವಿ)/(ಖರೀದಿ)/ಕಾನಿಇಂ/ಸಕಾನಿಇಂ/2024–25/72785–90 ದಿನಾಂಕ.17.03.2025 ರ ಅನ್ವಯ, 'ಸಂಯುಕ್ತ ಕರ್ನಾಟಕ (ಕನ್ನಡ ಪತ್ರಿಕೆ)', 'ಪ್ರಜಾವಾಣಿ (ಕನ್ನಡ ಪತ್ರಿಕೆ)' ಮತ್ತು ಡೆಕ್ಕನ್ ಹೆರಾಲ್ಡ್ (ಆಂಗ್ಲ ಪತ್ರಿಕೆ) ರಾಜ್ಯ ಆವೃತ್ತಿ ಪತ್ರಿಕೆಗಳಲ್ಲಿ ದಿನಾಂಕ 18.03.2025 ರಂದು, ಟೆಂಡರ್ ಸಂಖ್ಯೆ: ಪಿಸಿ–1429: 25 ಕೆವಿಎಸ್ಟಾರ್ 1 ರೇಟೆಡ್ ವಿದ್ಯುತ್ ಪರಿವರ್ತಕಗಳನ್ನು ತಯಾರಿಸಿ ಸರಬರಾಜು ಮಾಡುವುದು, ಪಿಸಿ–1430: 63 ಕೆವಿಎ ಸ್ಟಾರ್ 1 ರೇಟೆಡ್ ವಿದ್ಯುತ್ ಪರಿವರ್ತಕಗಳನ್ನು ತಯಾರಿಸಿ ಸರಬರಾಜು ಮಾಡುವುದು ಹಾಗೂ ಪಿಸಿ–1431: 100 ಕೆವಿಎ ಸ್ಟಾರ್ 1 ರೇಟೆಡ್ ವಿದ್ಯುತ್ ಪರಿವರ್ತಕಗಳನ್ನು ತಯಾರಿಸಿ ಸರಬರಾಜು ಮಾಡವುದನ್ನು ಪ್ರಕಟಿಸಲಾಗಿದ್ದು, ಈ ಟೆಂಡರಗಳ ಪತ್ರಿಕಾ ಪ್ರಕಟಣೆಯನ್ನು ಆಡಳಿತಾತ್ಮಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಮುಂದುವರೆದಂತೆ, ಈ ಕಛೇರಿ ಟೆಂಡರ್ ಪತ್ರಿಕಾ ಪ್ರಕಟಣೆ ಪತ್ರ ಸಂಖ್ಯೆ:ಗುವಿಸಕಂನಿ/ಅಅ(ವಿ)/(ಖರೀದಿ)/ಕಾನಿಇಂ/ಸಕಾನಿಇಂ/2024–25/72785–90 ದಿನಾಂಕ.17.03.2025ರ ಅನ್ವಯ, ಈ ಮೇಲೆ ತಿಳಿಸಲಾದ ಪತ್ರಿಕೆಗಳಲ್ಲಿ ದಿನಾಂಕ.18.03.2025 ರಂದು ಪ್ರಕಟಣೆಗೊಂಡ ಇನ್ನುಳಿದ ಟೆಂಡರ್ ಸಂಖ್ಯೆ: ಪಿಸಿ–1424, ಪಿಸಿ–1425, ಪಿಸಿ–1426 ಪಿಸಿ–1427 ಮತ್ತು ಪಿಸಿ–1428 ಗಳಿಗೆ ಸಂಬಂಧಿಸಿದಂತೆ ಪ್ರಕಟಿಸಲಾದ ಪತ್ರಿಕಾ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/172/ಕೆ.ಎಸ್.ಎಂ.ಸಿ.&ಎ/2025–26

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 1 ಜೂನ್ 2025

ಇವು ಬಂಡೆಗಳಲ್ಲ, ಪಿಲ್ಲೊ ಲಾವಾ...
11

ಪಂಚಗವ್ಯವೆಂಬ ಏಕವ್ಯಕ್ತಿಯ ಪಂಚಾಮೃತ
12

ಚಿಲಿಕಾ ಸರೋವರ ಡಾಲ್ಫಿನ್‌ಗಳ ಹುಡುಕಾಟ...
13

ಮಕ್ಕಳ ಕೈಯಲ್ಲಿ ಸಮೀಕ್ಷೆಯೂ, ಪರಿಹಾರವೂ...

ಶಾಲೆಗಳಲ್ಲಿ ಮಕ್ಕಳ ಗ್ರಾಮಸಭೆಯು ಸೂಕ್ತವಾಗಿ ನಡೆಯದೇ ಇರುವುದನ್ನು ಕಂಡ 'ಇನ್ವಾಲ್ವ್' ಎನ್ನುವ ಸರ್ಕಾರೇತರ ಸಂಸ್ಥೆಯು ಆಯ್ದ ಶಾಲೆಗಳಲ್ಲಿ ದಸರಾ ರಜೆಯಲ್ಲಿ 'ಹಾಲಿಡೇ ಪ್ರಾಜೆಕ್ಟ್' ಪ್ರಾರಂಭಿಸಿತು. ಮಕ್ಕಳು ತಮ್ಮೂರಿನ ಸಮಸ್ಯೆಗಳ ಸಮೀಕ್ಷೆ ನಡೆಸಿ ಪರಿಹಾರವನ್ನು ಕಂಡುಕೊಂಡರು.

ಅಭಿಲಾಷ್ ಪಿ.ಎಸ್.

'ಆಗ ದಸರಾ ರಜೆ ಇತ್ತು. ನನ್ನ ಸಹಪಾಠಿಗಳೆಲ್ಲರೂ ಆಟವಾಡುತ್ತಿದ್ದರು. ನಾನು ನೋಟ್‌ಬುಕ್, ಪೆನ್ನು ಹಿಡಿದು ಮನೆಯಿಂದ ಹೊರಟಿದ್ದೆ. ನನಗೆ ತಿಳಿಸಿದಂತೆ ಮನೆ ಸಮೀಪವಿರುವ ಬೀದಿಗಳಲ್ಲಿ ಓಡಾಡಿ, 'ನಿಮ್ಮ ಸುತ್ತಮುತ್ತಲು ಏನಾದರೂ ಸಮಸ್ಯೆ ಇದೆಯೇ' ಎಂದು ಜನರನ್ನು ಕೇಳುತ್ತಾ, ಅವರು ಹೇಳಿದನ್ನು ದಾಖಲಿಸುತ್ತಾ ಮನೆಯಿಂದ ಮನೆಗೆ ಓಡಾಡಿದೆ. ಬಹುತೇಕ ಎಲ್ಲರೂ 'ಚರಂಡಿ ಸಮಸ್ಯೆ ಇದೆ ಕಣಮ್ಮಾ, ನೀರು ಸರಿಯಾಗಿ ಬರ್ತಾ ಇಲ್ಲ, ರಸ್ತೆ ಸರಿ ಇಲ್ಲ' ಎಂದು ಹೇಳಿದರು. ಆ ಮಾತುಗಳಿಗೆ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರ ಸಹಾಯ ಪಡೆದು ಪತ್ರದ ರೂಪ ನೀಡಿದೆ. ಅವರ ಸಮ್ಮುಖದಲ್ಲೇ ಅದನ್ನು ಗ್ರಾಮ ಪಂಚಾಯಿತಿ ಕಚೇರಿಗೆ ನೀಡಿದೆ. ಇದನ್ನು ನೋಡಿ ಗ್ರಾಮ ಪಂಚಾಯಿತಿಯವರು ನಮ್ಮ ಶಾಲೆಯಲ್ಲಿ ಮಕ್ಕಳ ಗ್ರಾಮಸಭೆ ಮಾಡಿದರು. ನಾನು ಆ ಸಭೆಯಲ್ಲಿ ಬಹಳ ಖುಷಿಯಿಂದ, ಹೆಮ್ಮೆಯಿಂದ ಮಾತನಾಡಿದೆ...'

> **"ನನ್ನ ಹಳ್ಳಿಯಲ್ಲಿ ಸಾಕ್ಷರತೆಯ ಸಮಸ್ಯೆ ತೀವ್ರವಾಗಿದೆ ಎನ್ನುವುದು ಹಾಲಿಡೇ ಪ್ರಾಜೆಕ್ಟ್ ಮೂಲಕ ತಿಳಿದುಕೊಂಡೆ. ಓದಲು, ಬರೆಯಲು ಬಾರದವರು ಮೋಸ ಹೋಗುವುದು ಸಾಮಾನ್ಯವಾಗಿತ್ತು. ಹೀಗಾಗಿ ಶಾಲಾ ಅವಧಿಯ ಬಳಿಕ ಅಂತಹವರಿಗೆ ತರಗತಿಗಳನ್ನು ತೆಗೆದುಕೊಳ್ಳುವ ಸಲಹೆಯನ್ನು ಸಭೆಯಲ್ಲಿ ನೀಡಿದೆ."**
>
> **ಕುಶಾಲ್**
> ಶಾಂತಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿ

ಇದು ಬನ್ನೇರುಘಟ್ಟ ಸಮೀಪದ ಬಿಲ್ವರ್ಧನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿನಿ ಮೇಘನಾಳ ಮಾತು.

'ಶಾಲೆಯಲ್ಲಿ ಮಕ್ಕಳ ಗ್ರಾಮಸಭೆ ನಡೆದಾಗ ನಮ್ಮ ಶಾಲೆಯ ಹಿಂದಿರುವ ರಾಜಕಾಲುವೆಯನ್ನು ಸ್ವಚ್ಛ ಮಾಡಿಕೊಡಬೇಕು, ಶಾಲೆಗೆ ಸ್ಪೋರ್ಟ್ಸ್ ಕಿಟ್, ಪ್ರಥಮ ಚಿಕಿತ್ಸಾ ಪೆಟ್ಟಿಗೆ ಬೇಕು ಎಂದೂ ಕೇಳಿದೆ.

13ನೇ ಪುಟಕ್ಕೆ...

ಮಕ್ಕಳಲ್ಲಿ ಧೈರ್ಯ ಮೂಡಿಸಿದ ಸಭೆ

ಮಕ್ಕಳೆದುರು ಕುಳಿತು ಅವರ ಮಾತುಗಳನ್ನು ಕೇಳಿದ ಶಾಂತಿಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್.ಮದನ್ ಅವರಿಗೆ ಮಕ್ಕಳ ಭವಿಷ್ಯವೂ ಕಂಡಿದೆ. 'ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸೇರಿದಂತೆ ಇಡೀ ಪಂಚಾಯಿತಿಯೇ ಅಲ್ಲಿ ಸೇರಿತ್ತು. ಶಾಲೆಯಲ್ಲಿ ಆಟದ ಮೈದಾನವಿಲ್ಲ, ತಟ್ಟೆ ತೊಳೆಯಲು ಸೂಕ್ತ ವ್ಯವಸ್ಥೆಯಿಲ್ಲ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿಲ್ಲ, ಗ್ರಂಥಾಲಯವಿಲ್ಲ ಎನ್ನುವುದು ಸೇರಿದಂತೆ ಶಾಲೆಯೊಳಗಿನ ಕುಂದುಕೊರತೆಗಳ ಜೊತೆಗೆ ತಮ್ಮೂರಿನ ಚರಂಡಿ-ರಸ್ತೆ, ಬೀದಿ ದೀಪಗಳ ಸಮಸ್ಯೆಗಳ ಬಗ್ಗೆ ಮಕ್ಕಳು ವಿಸ್ತೃತವಾಗಿ ವಿವರಿಸಿದರು. ಇವುಗಳಲ್ಲಿ ಹಲವು ಸಮಸ್ಯೆಗಳನ್ನು ಬಗೆಹರಿಸಿದೆವು. ಇದು ಮಕ್ಕಳಲ್ಲೂ ಭರವಸೆ ಮೂಡಿಸಿತು' ಎಂದರು.

'ಮೊದಲ ಮಕ್ಕಳ ಗ್ರಾಮಸಭೆ ಮಾಡಿ ಎರಡನೇ ಸಭೆ ನಡೆಸುವ ಹೊತ್ತಿನಲ್ಲಿ ಮಕ್ಕಳು ಮಾತನಾಡುವ ಶೈಲಿ ಬದಲಾಗಿತ್ತು. ಅವರಲ್ಲಿ ಧೈರ್ಯ ಬಂದಿತ್ತು. ಈ ಸಭೆಯಿಂದ ಊರಿನ ಸಮಸ್ಯೆಗಳು ನೇರವಾಗಿ ನಮಗೆ ತಲುಪಿತ್ತು. ಮಕ್ಕಳೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಬೇಡಿಕೆ ಇಟ್ಟಿದ್ದರು. ಈ ಮಕ್ಕಳ ಗ್ರಾಮಸಭೆಯ ಬಳಿಕ ಎರಡೂ ಶಾಲೆಗಳಲ್ಲಿ ಶಾಲಾ ವಾರ್ಷಿಕೋತ್ಸವಗಳನ್ನು ಮಾಡಿಸಿದೆ' ಎಂದರು ಮದನ್.

'ಆಯಾ ಪಂಚಾಯಿತಿ ವ್ಯಾಪ್ತಿಯಲ್ಲಿ ಇಂತಹ ಮಕ್ಕಳ ಗ್ರಾಮಸಭೆ ನಡೆಸುವುದು ಉತ್ತಮ. ಈ ಮಕ್ಕಳು ಮುಂದೆ ಜನಪ್ರತಿನಿಧಿಗಳಾಗಲು, ಧೈರ್ಯದಿಂದ ಮಾತನಾಡಲು ಇದು ಅಡಿಪಾಯ. ಮುಂದಿನ ಸಭೆಗಳಿಗೆ ಪೊಲೀಸ್ ಅಧಿಕಾರಿಗಳನ್ನೂ ಕರೆಸುವ ಆಲೋಚನೆ ಇದೆ. ಈ ಮೂಲಕ ಮಕ್ಕಳಲ್ಲಿ ಕಾನೂನಿನ ಅರಿವು ಮೂಡಿಸುವ ಪ್ರಯತ್ನ ಮಾಡಲಿದ್ದೇವೆ' ಎನ್ನುತ್ತಾರೆ ಅವರು.

ಜೀವವೈವಿಧ್ಯತೆಯ ಖಜಾನೆಯನ್ನು ಕರ್ನಾಟಕ ತನ್ನೊಡಲಲ್ಲಿ ಇರಿಸಿಕೊಂಡಿದೆ. ಆದರೆ, ಇದಕ್ಕೆ ರಕ್ಷಣೆ, ಪೋಷಣೆ ಅಗತ್ಯವಿದೆ. ಜನರಲ್ಲಿನ ಅರಿವಿನ ಕೊರತೆ, ಸರ್ಕಾರದ ನಿರ್ಲಕ್ಷ್ಯದಿಂದ ಜೀವವೈವಿಧ್ಯತೆ ಸಂಕಷ್ಟಕ್ಕೆ ಸಿಲುಕುತ್ತಿದೆ. ಕೂಡಲೇ ಸರ್ಕಾರ ಜೀವವೈವಿಧ್ಯ ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡಬೇಕು. ಈ ಮಂಡಳಿ ಚುರುಕಾಗಿ ಕೆಲಸ ಮಾಡಿದರೆ ನಮ್ಮ ಅನನ್ಯ ಜೀವ ಸಂಕುಲ ಉಳಿಯುತ್ತದೆ.

ಜೀವವೈವಿಧ್ಯ

ರಕ್ಷಿಸದಿದ್ದರೆ ಸ್ವಾರ್ಥಿಗಳಿಗೆ ಎಲ್ಲ ನೈವೇದ್ಯ

ಕಾರವಾರದ ದೇವಬಾಗ ಕಡಲತೀರದಲ್ಲಿ ಕಡಲು ಸೇರುವ ಉತ್ಸುಕತೆಯಿಂದ ಸಾಗುತ್ತಿರುವ ಆಲಿವ್ ರಿಡ್ಲೆ ಮರಿಗಳು ಚಿತ್ರ: ಶಾನವಾಜ್ ಕಡಪಾ

ಮಂಗಟ್ಟೆ

ನಾಗೇಶ ಹೆಗಡೆ

ಹೊನ್ನಾವರದಲ್ಲಿ ಅದೆಷ್ಟು ಹೊನ್ನಿತ್ತೊ ಗೊತ್ತಿಲ್ಲ. ಆದರೆ ಅಲ್ಲೇ ಸಮೀಪದ ಅಪ್ಸರಕೊಂಡದ ಪಕ್ಕದ ಸಮುದ್ರದಲ್ಲಿ ಅಸಂಖ್ಯ ಅಪ್ಸರೆಯರನ್ನು ಈಗಲೂ ನೋಡಬಹುದು. ಉಬ್ಬರವಿಲ್ಲದಾಗ ಅಲ್ಲಿನ ಬಂಡೆಗಳ ನಡುವಣ ಮೊಣಕಾಲು ಆಳದ ನೀರಿನಲ್ಲಿ ಹವಳದ ಗುಪ್ಪೆಗಳ ಸುತ್ತ ಬಣ್ಣಬಣ್ಣದ ಮೀನುಗಳು, ಅಕ್ಟೊಪಸ್, ಸಮುದ್ರ ಸೌತೆ, ಸೀ ಎನಿಮೋನ್‌ಗಳನ್ನು ಕಾಣಬಹುದು. ಕತ್ತೆತ್ತಿದರೆ ನೆತ್ತಿಯ ಮೇಲೆ ನಾನಾ ಬಗೆಯ ಪಕ್ಷಿಗಳ ಕಲರವ. ಕಾಲಬಳಿ ಮುತ್ತಿಕ್ಕಿ ಧಾವಿಸುವ ಬ್ಲೂ ಡ್ಯಾಮ್ಸೆಲ್ ಮೀನು. ಬಂಡೆಗಳಿಗೆ ಅರಳು ಎರಚಿದಂತೆ ಬಗೆಬಗೆಯ ಬಿಳಿಬಿಳಿ ಶಂಖಚಿಪ್ಪುಗಳು. ಬಂಡೆಗಳ ನಡುವಣ ಕೊರಕಲುಗಳಲ್ಲಿ ಸಂಚಯವಾಗುವ ಉಪ್ಪನ್ನು ನೆಕ್ಕಲು ದಡದಂಚಿನ ಕಾಡಿನಿಂದ ಆಗೀಗ ಉಡ, ಮುಳ್ಳುಹಂದಿ, ಮೊಲ, ಕಬ್ಬೆಕ್ಕುಗಳ ಮೆರವಣಿಗೆ.

ನಟ ಪುನೀತ್ ರಾಜ್‌ಕುಮಾರ್ ತಮ್ಮ ಕೊನೆಯ ಚಿತ್ರ 'ಗಂಧದ ಗುಡಿ'ಯಲ್ಲಿ ಸಮುದ್ರಕ್ಕೆ ಡೈವ್ ಹೊಡೆದು ಮನಮೋಹಕ ಮತ್ಸ್ಯಲೋಕವನ್ನು ನೋಡುವ ದೃಶ್ಯ ಇದೆಯಲ್ಲ? ಅದನ್ನೂ ಅಪ್ಸರಕೊಂಡದ ಸಮೀಪದ ನೇತ್ರಾಣಿ ದ್ವೀಪದ ಬಳಿ ಚಿತ್ರೀಕರಿಸಲಾಗಿತ್ತು. ಇನ್ನೂ ತುಸು ಆಳಕ್ಕಿಳಿದರೆ ಅಲ್ಲಿ ನಾಲ್ಕು ಬಗೆಯ ಶಾರ್ಕ್‌ಗಳಿವೆ, ತಿಮಿಂಗಿಲಗಳಿವೆ.

ಅಪ್ಸರಕೊಂಡ-ಕಾಸರಕೋಡ್‌ನ ಎರಡು ಕಿಲೊಮೀಟರ್ ಉದ್ದದ ಕಡಲಪಟ್ಟಿಗೆ ಅಂತರರಾಷ್ಟ್ರೀಯ ಮಾನದಂಡದ ಪ್ರಕಾರ 'ಬ್ಲೂ ಫ್ಲಾಗ್ ಬೀಚ್' ಮಾನ್ಯತೆ ಸಿಕ್ಕಿದೆ. ನಮ್ಮ ದೇಶದ ಸುಂದರ, ಸುರಕ್ಷಿತ, ಸಂರಕ್ಷಿತ ಹಾಗೂ ಸುಸ್ಥಿರ ಪರಿಸರವುಳ್ಳ 12 ಬೀಚ್‌ಗಳಲ್ಲಿ ಇದೂ ಒಂದು. ಇಲ್ಲೇ ಆಲಿವ್ ರಿಡ್ಲೆ ಆಮೆಗಳು ಬಂದು ಮೊಟ್ಟೆ ಇಟ್ಟು ಹೋಗುತ್ತವೆ. ಇಲ್ಲೇ ಅರಣ್ಯ ಇಲಾಖೆಯ ಇಕೋ ಪಾರ್ಕ್ ಇದೆ; ಅಪರೂಪದ ಕಾಂಡ್ಲಕಾಡು ಇದೆ. ಅದರಂಚಿನ ಶರಾವತಿ ಅಳಿವೆಯಲ್ಲಿ ನಿಮಗೆ ಅದೃಷ್ಟವಿದ್ದರೆ ಡಾಲ್ಫಿನ್‌ಗಳು ನೀರಿನಿಂದ ಮೇಲೆದ್ದು ನರ್ತಿಸಿ ಮುಳುಗುವುದನ್ನೂ ನೋಡಬಹುದು. ಈಗ ದೊಡ್ಡ ಖಾಸಗಿ ಬಂದರು ಕಟ್ಟಲು ನಿಗದಿತವಾದ 'ಟೊಂಕ' ಎಂಬ ಮೀನುಗಾರರ ಹಳ್ಳಿಯ ಸುತ್ತ ಎರಡು ಕಿಲೊಮೀಟರ್ ವೃತ್ತವನ್ನು ಗುರುತಿಸಿದರೆ 'ಅದರೊಳಕ್ಕೆ ಬರುವ ಜೀವವೈವಿಧ್ಯ ದೇಶದ ಬೇರೆಲ್ಲೂ ಕಾಣುವುದು ವಿರಳ' ಎನ್ನುತ್ತಾರೆ, ಬಂದರುಕಟ್ಟೆ ಬೇಡವೆಂದು ಒತ್ತಾಯಿಸುತ್ತಿರುವ ಜೀವವಿಜ್ಞಾನಿ ಪ್ರಕಾಶ್ ಮೇಸ್ತ.

ಜೀವವೈವಿಧ್ಯ ಎಂದರೆ ಇದು. ಕರ್ನಾಟಕದಲ್ಲಿ ಹಿಮಪಾತವಿಲ್ಲ ಎಂಬುದನ್ನು ಬಿಟ್ಟರೆ ಮಳೆಕಾಡು, ಮರುಭೂಮಿ, ಹುಲ್ಲುಗಾವಲು, ಶೃಂಗಭೂಮಿ, ಶೋಲಾ ಕಾಡು, ಅಳಿವೆ, ಸಮುದ್ರ ಎಲ್ಲವೂ ಇವೆ. ಅವಕ್ಕೆ ಹೊಂದಿಕೊಂಡ ಅಸಂಖ್ಯ ಜೀವಿಗಳು ಇಲ್ಲಿ ವಿಕಾಸವಾಗಿವೆ. ಸುಲಭಕ್ಕೆ ಎದ್ದು ಕಾಣುವ ಅಪರೂಪದ ಜೀವಿ ಸಮೂಹಕ್ಕೆ ನಾವು ಆಶ್ರಯಧಾಮಗಳನ್ನೂ ನಿರ್ಮಿಸಿದ್ದೇವೆ. ಹುಲಿ, ಆನೆಗಳನ್ನು ಬಿಡಿ, ದೇಶದಲ್ಲೇ ಮೊದಲನೆಯದೆನ್ನಿಸುವ ಕರಡಿಧಾಮ, ಮಂಗಟ್ಟೆವನ, ನೀರುನಾಯಿ ಕಟ್ಟೆ, ಸಿಂಗಳೀಕಗಳ ರಕ್ಷಾಕಾಡು ನಮ್ಮಲ್ಲಿವೆ. ರಂಗನತಿಟ್ಟು, ಅಘನಾಶಿನಿ ಅಳಿವೆ, ಅಂಕಸಮುದ್ರ ಮತ್ತು ಗದಗ ಜಿಲ್ಲೆಯ ಮಾಗಡಿ ಕೆರೆ ಹೀಗೆ ಅಂತರರಾಷ್ಟ್ರೀಯ ಮಾನ್ಯತೆ ಪಡೆದ 'ರಾಮ್‌ಸಾರ್' ತಾಣಗಳೂ ನಮ್ಮಲ್ಲಿವೆ.

ನಾವು ಹೆಮ್ಮೆಯಿಂದ ಬೆರಳೆತ್ತಿ ತೋರಿಸಬೇಕಾದ ರಕ್ಷಾಧಾಮಗಳು ಇವು. ಹಾಗೇ, ಯಾರ ರಕ್ಷಣೆಯನ್ನೂ ಬೇಡದ ನೀಲಕುರಿಂಜಿ ಬೆಣಬೆಟ್ಟಗಳಿವೆ. ಮಳೆಗಾಲದಲ್ಲಿ ಪಶ್ಚಿಮಘಟ್ಟಗಳಲ್ಲಿ ಸಿಡಿಲು- ಗುಡುಗಿಗೆ ಅರಳುವ ಅಪರೂಪದ ಅಣಬೆಗಳಿವೆ. ಅಲ್ಲಿ ಈ ದಿನಗಳಲ್ಲಿ ಸೃಷ್ಟಿಯಾಗುವ ಜಲಪಾತಗಳ ಸಿಂಚನದಲ್ಲಿ ವಿಶಿಷ್ಟ ಕೀಟಭಕ್ಷಕ ಸಸ್ಯಗಳು ಮೈದಳೆಯುತ್ತವೆ. ಇವಿಷ್ಟೇ ಅಲ್ಲ, ರಕ್ಷಣೆಗಾಗಿ ಕಾದಿರುವ, ಮೌನವಾಗಿ ಕಣ್ಮರೆಯಾಗುತ್ತಿರುವ ಅಪರೂಪದ ಜೀವನಿಧಿಗಳು ಇನ್ನೂ ತುಂಬಾ ಇವೆ. ಅವು ನಮ್ಮ ನೆಲದಿಂದ ನಾಪತ್ತೆಯಾದರೆ ಜಗತ್ತಿನ ಬೇರೆಲ್ಲೂ ಸಿಗಲಾರವು.

ಅಂಥವುಗಳ ರಕ್ಷಣೆಗೆಂದೇ ನಮ್ಮ ದೇಶದಲ್ಲಿ 'ಜೀವವೈವಿಧ್ಯ ಕಾನೂನು' 2002ರಲ್ಲಿ ಜಾರಿಗೆ ಬಂದಿದೆ. ಪ್ರತಿ ರಾಜ್ಯದಲ್ಲೂ 'ಜೀವವೈವಿಧ್ಯ ಮಂಡಳಿ' ಅಸ್ತಿತ್ವಕ್ಕೆ ಬಂದಿದೆ. ಪ್ರತಿ ಜಿಲ್ಲೆ, ಪ್ರತಿ ತಾಲ್ಲೂಕು, ಪ್ರತಿ ಪಂಚಾಯಿತಿಯಲ್ಲೂ ಜೀವನಿಧಿಯ ರಕ್ಷಣಾ ಸಮಿತಿಗಳು ಇರಬೇಕೆಂದು ಕಾನೂನಿನಲ್ಲಿ ಹೇಳಲಾಗಿದೆ. ಅದರ ಮಹತ್ವವನ್ನು ಸಾರಲೆಂದು ಪ್ರೊ. ಮಾಧವ ಗಾಡ್ಗೀಳರು ಟೊಂಕಕಟ್ಟಿ ಕರ್ನಾಟಕದಲ್ಲಿ ಊರೂರು ತಿರುಗಿದರು. ಯುವಜನರನ್ನು ಪ್ರೇರೇಪಿಸಿ ಪಂಚಾಯಿತಿ ಮಟ್ಟದಲ್ಲಿ ಜೀವವೈವಿಧ್ಯ ಸಮೀಕ್ಷೆ ಮತ್ತು ದಾಖಲಾತಿಯ ವಿಧಿವಿಧಾನಗಳನ್ನು ಕಲಿಸಿದರು. ಸಮೀಕ್ಷೆಗೆ ಹೋದವರು 'ನಮ್ಮೂರಲ್ಲಿ ಇವೆಲ್ಲ ಇವೆಯಾ!' ಎಂದು ಅಚ್ಚರಿಪಡುತ್ತ ದಾಖಲಾತಿ ನಡೆಸಿದರು.

ಅಂಥ 'ಜೀವವೈವಿಧ್ಯ ದಾಖಲಾತಿ'ಯ ಮಹತ್ವ ಹೀಗಿದೆ. ಉದಾಹರಣೆಗೆ ಉಂಚಳ್ಳಿಯ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಯಾವುದೇ ಸಸ್ಯ, ಕೀಟ ಅಥವಾ ಜಲಜೀವಿಯನ್ನು ಯಾವುದೇ ಔಷಧ ಕಂಪನಿ ತನ್ನ ಲಾಭಕ್ಕಾಗಿ ಕದ್ದು ಬಳಸುವಂತಿಲ್ಲ. ಏಕೆಂದರೆ ಅದು ತನ್ನ ಆಸ್ತಿಯೆಂದು ಆ ಪಂಚಾಯಿತಿ ದಾಖಲಿಸಿ ಇಟ್ಟಿದೆ. ಖಟ್ಲೆ ಹಾಕಿದರೆ ಗೆಲುವು ಪಂಚಾಯಿತಿಯದೇ ಗ್ಯಾರಂಟಿ. ನಮ್ಮ ಜೀವವೈವಿಧ್ಯ ಕಾನೂನು ಅಷ್ಟು ಸಶಕ್ತವಾಗಿದೆ.

ಇದಕ್ಕೊಂದು ಪ್ರಖ್ಯಾತ ನಿದರ್ಶನ ಇದೆ: ಉಡುಪಿಯ ಮಟ್ಟುಗುಳ್ಳದ ಅಂಶವನ್ನು ಎತ್ತಿಕೊಂಡು ಮಾನ್ಸಾಂಟೊ ಕಂಪನಿ ಬಿಟಿ ಬದನೆಯನ್ನು ರೂಪಿಸಲು ಹೊರಟಿತು. ಜನಾಕ್ರೋಶ ಎಷ್ಟೇ ಇದ್ದರೂ ಏನೂ ಮಾಡಲು ಸಾಧ್ಯವಿರಲಿಲ್ಲ.

11ನೇ ಪುಟಕ್ಕೆ...

ರಸ್ತೆಯ ಇಕ್ಕೆಲಗಳಲ್ಲಿ ಗಿಡಗಳ ಸಾಲು

ಸಿಂಧನೂರು ಹಸಿರುಡುಗೆ ಪವಾಡ

₹30 ಲಕ್ಷ ಖರ್ಚು!

'ಈ ಸಸಿಗಳು ಆಂಧ್ರಪ್ರದೇಶದಿಂದ ಸಿಂಧನೂರಿಗೆ ತರಲು ತಲಾ ಸಸಿಗೆ ₹200, ತಗ್ಗು ತೋಡಿ ನೆಡಲು ₹150, ಸಸಿಯ ಸುತ್ತ ಒಂದು ಅಡಿಯ ಸಿಮೆಂಟ್ ರಿಂಗ್‌ಗೆ ₹200, ತಂತಿಯ ಜಾಲರಿಗೆ ₹150 ಹಾಗೂ ಸಸಿಗಳ ಆಧಾರಕ್ಕೆ ಬೊಂಬುಗೆ ₹60, ನೀರು ನಿರ್ವಹಣೆ ಹೀಗೆ ಎಲ್ಲ ಸೇರಿ ಆಗಿನ ಸಮಯದಲ್ಲಿ ಹೆಚ್ಚು ಕಡಿಮೆ ₹30 ಲಕ್ಷ ಖರ್ಚು ಮಾಡಿದ್ದೇನೆ. ಈಗ ಈ ಹಸಿರು ಮರಗಳು ನಗರದ ಅಂದ ಹೆಚ್ಚಿಸಿದ್ದು, ಪಕ್ಷಿಗಳ ಇಂಚರ ಖುಷಿ ತಂದಿದೆ' ಎಂದು ರಾಮಬಾಬು ಚಿಟ್ಟೂರಿ ಸಂತೃಪ್ತಭಾವದಿಂದ ಹೇಳುತ್ತಾರೆ.



ರಾಮಬಾಬು ಚಿಟ್ಟೂರಿ

> 'ಈ ನೆಲದಲ್ಲಿ ಸಸಿ ಬೆಳೆಯಲ್ಲ ಬಿಡ್ರಿ' ಎನ್ನುವ ಅಧಿಕಾರಿ ಒಂದು ಕಡೆಯಾದರೆ, 'ನಾನು ಸಸಿಗಳನ್ನು ನಾಟಿ ಮಾಡಿ ಬೆಳೆಸಿಯೇ ತೀರುತ್ತೇನೆ' ಎನ್ನುವ ಛಲ ಉದ್ಯಮಿ ರಾಮಬಾಬು ಚಿಟ್ಟೂರಿ ಅವರದು. ತಾವು ಅಂದುಕೊಂಡಂತೆಯೇ ಹತ್ತು ಸಾವಿರ ಗಿಡಗಳನ್ನು ರಸ್ತೆಗಳ ಬದಿಯಲ್ಲಿ, ಖಾಲಿ ಜಾಗದಲ್ಲಿ ನಾಟಿ ಮಾಡಿ ಸಿಂಧನೂರು ನಗರ ಹಸಿರಿನಿಂದ ಕಂಗೊಳಿಸುವಂತೆ ಮಾಡಿದ್ದಾರೆ.

ಕಿಶನರಾವ್ ಕುಲಕರ್ಣಿ

ರಾಯಚೂರು ಜಿಲ್ಲೆಯ ಸಿಂಧನೂರು ಎಂದರೆ ಭತ್ತದ ಗದ್ದೆ, ರಸಗೊಬ್ಬರದ ಧೂಳು, ಕ್ರಿಮಿನಾಶಕದ ಘಾಟು, ಬಿಸಿಲಿನ ಒಣ ಪರಿಸರ ಕಣ್ಮುಂದೆ ಬರುತ್ತದೆ. ಆದರೆ ಈಗ ನಗರದ ಚಿತ್ರಣ ಬದಲಾಗಿದೆ. ಸ್ಥಳೀಯ ಉದ್ಯಮಿ ರಾಮಬಾಬು ಚಿಟ್ಟೂರಿ ಅವರು ಹತ್ತು ವರ್ಷಗಳ ಹಿಂದೆ ನಾಟಿ ಮಾಡಿದ ಸಸಿಗಳು ಈಗ ರಸ್ತೆಗಳಿಗೆ ನೆರಳಿನ ಹಂದರ ಹೆಣೆದಿವೆ. ಬೆಳಗಿನ ಜಾವ ಹಕ್ಕಿಗಳ ಇಂಚರ ಕಿವಿಗೆ ಹಿತ ನೀಡಿದರೆ, ತಂಪಾದ ವಾತಾವರಣ ಆಹ್ಲಾದ ನೀಡುತ್ತದೆ. ಜನರಲ್ಲಿ ಪರಿಸರ ಕಾಳಜಿಯೂ ಮೂಡಿದೆ.

ಆರಂಭದಲ್ಲಿ ಸಿಂಧನೂರು ನಗರದ ರಸ್ತೆಗಳ ಎರಡೂ ಬದಿಗಳಲ್ಲೂ ಗಿಡ ನೆಡುವುದಕ್ಕಾಗಿ ಆಯುಕ್ತರ ಬಳಿ ಅನುಮತಿಗಾಗಿ ಹೋದಾಗ 'ಈ ನೆಲದಲ್ಲಿ ಸಸಿಗಳು ಬೆಳೆಯುವುದಿಲ್ಲ, ನೀವೇನು ಸಸಿ ನಾಟಿ ಮಾಡಿ ಹೋಗ್ತೀರಿ, ಆದ್ರೆ ಮುಂದೆ ಅವುಗಳನ್ನು ನೋಡಿಕೊಳ್ಳುವವರು ಯಾರ್ರಿ?' ಎಂದಿದ್ದರಂತೆ. 'ಸಸಿಗಳ ಯೋಗಕ್ಷೇಮದ ಪೂರ್ಣ ಜವಾಬ್ದಾರಿ ನಮ್ಮದು' ಎಂದು ರಾಮಬಾಬು ಮುಚ್ಚಳಿಕೆ ಬರೆದುಕೊಟ್ಟು ಅನುಮತಿ ಪಡೆದುಕೊಂಡರು.

ಅನುಮತಿ ದೊರೆತ ನಂತರ ಯಾವ ಯಾವ ರಸ್ತೆಗಳಲ್ಲಿ ಸಸಿ ನಾಟಿ ಮಾಡಬೇಕು, ಅಂತರ ಎಷ್ಟಿರಬೇಕು, ಯಾವ ಸಸಿ ನಾಟಿ ಮಾಡಬೇಕು ಎಂಬ ನೀಲನಕ್ಷೆ ತಯಾರಿಸಿದರು. ಇವರು ಸಸಿ ನಾಟಿ ಮಾಡಲು ಗುರುತು ಮಾಡಲು ಹೋದಾಗ 'ಗಿಡ ನಾಟಿ ಮಾಡಿದರೆ ನಮಗೆ ಜಾಗ ಇಲ್ಲದಂತಾಗುತ್ತದೆ. ವಾಹನ ಬರಲು, ನಿಲ್ಲಲು ತೊಂದರೆಯಾಗುತ್ತದೆ' ಎಂದು ಮಳಿಗೆಗಳ ಹಾಗೂ ಬೀದಿಬದಿಯ ವ್ಯಾಪಾರಸ್ಥರು ಪ್ರತಿರೋಧ ತೋರಿಸಿದರು. ಎಷ್ಟೇ ಮನವಿ ಮಾಡಿಕೊಂಡರೂ ವ್ಯಾಪಾರಸ್ಥರು ಜಪ್ಪಯ್ಯ ಎನ್ನಲಿಲ್ಲ. ಅನಿವಾರ್ಯವಾಗಿ ತಹಶೀಲ್ದಾರ್ ಕಚೇರಿ ಹಾಗೂ ಪೊಲೀಸ್ ಠಾಣೆಗೆ ಹೋಗಿ ಸಹಾಯ ಕೋರಿದರು. ಇಂತಹ ಸಾಮಾಜಿಕ ಕಾರ್ಯದ ಯೋಚನೆಗೆ ಬೆಂಬಲವಾಗಿದ್ದ ಆಗಿನ ತಹಶೀಲ್ದಾರ್ ಸಂತೋಷಕುಮಾರ ಹಾಗೂ ಪೊಲೀಸರು ಇವರೊಂದಿಗೆ ಬಂದರು. ನಾಟಿ ಮಾಡಬೇಕಾದ ಸ್ಥಳದ ಗುರುತು ಮಾಡುತ್ತ ರಾಮಬಾಬು ಹಾಗೂ ತಹಶೀಲ್ದಾರ್ ಮುಂದೆ ಹೋದರೆ, ಹಿಂದೆ ಪೊಲೀಸರು ವ್ಯಾಪಾರಸ್ಥರಿಗೆ ಎಚ್ಚರಿಕೆ ಕೊಡುತ್ತಾ ಬರುತ್ತಿದ್ದರು. ಒಟ್ಟಾರೆ ಆ ನೆಲದಲ್ಲಿ ಅಂದವಾಗಿ ಮಡಿ ತೆಗೆದು ಸಸಿ ನಾಟಿ ಮಾಡುವ ಕಾರ್ಯ ಆರಂಭವಾಗಿತ್ತು.

12ನೇ ಪುಟಕ್ಕೆ...

ಪಕ್ಷಿನೋಟದಲ್ಲಿ ಸಿಂಧನೂರು

ಇವು ಬಂಡೆಗಳಲ್ಲ, ಪಿಲ್ಲೊ ಲಾವಾ...



ಗುಡ್ಡದ ರಂಗಪ್ಪನ ಗುಡಿ

ಹಿರಿಯೂರು ತಾಲ್ಲೂಕಿನ ಮರಡಿಹಳ್ಳಿ ಗ್ರಾಮದ ಗುಡ್ಡದಲ್ಲಿ ಎಲ್ಲಿ ಕಣ್ಣು ಹಾಯಿಸಿದರೂ 'ಪಿಲ್ಲೊ ಲಾವಾ' ಎಂಬ ವಿಶಿಷ್ಟ ಬಗೆಯ ಬಂಡೆಗಳು ಕಾಣಸಿಗುತ್ತವೆ. ಇವುಗಳು ರಚನೆಗೊಂಡಿದ್ದು ಹೇಗೆ? ಬಂಡೆಗಳು ಈ ರೂಪ ತಳೆಯಲು ವೈಜ್ಞಾನಿಕ ಕಾರಣಗಳೇನು? ಎಂಬಿತ್ಯಾದಿ ವಿಷಯಗಳತ್ತ ಬೆಳಕು ಚೆಲ್ಲುವ ಬರಹ...

ಎಂ.ಎನ್.ಯೋಗೇಶ್

ರಾತ್ರಿಯಿಡೀ ಮಳೆ ಸುರಿದು ನೆಲವೆಲ್ಲಾ ತಂಪಾಗಿದ್ದ ಆ ಮುಂಜಾನೆ ಆಹ್ಲಾದಕರ ವಾತಾವರಣ ಸೃಷ್ಟಿಸಿತ್ತು. ಕಪ್ಪು ಮಣ್ಣಿನ ಪರಿಮಳ ಆಘ್ರಾಣಿಸುತ್ತಾ ಗುಡ್ಡ ಏರುವಾಗ ನಡಿಗೆಯಲ್ಲಿ ಆಯಾಸ ಮರೆಯಾಗಿತ್ತು. ಆದರೆ ತಂಪೊತ್ತಿನಲ್ಲೂ ಬೇಸಿಗೆಯ ಕಾವು ಹಣೆಯ ಮೇಲೆ ಬೆವರ ಹನಿ ತರಿಸಿತ್ತು. ತುದಿ ಮುಟ್ಟುವ ಮೊದಲೇ ಸುತ್ತಲಿನ ಪರಿಸರ ಕಣ್ಮನ ಸೆಳೆದಿತ್ತು. ಜೋಗಿಮಟ್ಟಿ ಅರಣ್ಯದ ಬೆಟ್ಟಗಳ ಸಾಲು, ಪವನ ವಿದ್ಯುಚ್ಛಕ್ತಿಯ ಗಾಲಿಗಳ ತಿರುಗಾಟ ಕಣ್ಣಿಗೆ ಕಟ್ಟಿದ್ದವು. ಕೂಗಳತೆ ದೂರದಲ್ಲಿದ್ದ ರಾಷ್ಟ್ರೀಯ ಹೆದ್ದಾರಿಯ ವಾಹನಗಳ ಸದ್ದು ಕಿವಿಗಡಚಿತ್ತು. ಹೊಲಗಳಲ್ಲಿ ಮುಂಗಾರು ಬಿತ್ತನೆಯಲ್ಲಿದ್ದ ರೈತರ ಹರ್ಷ, ಎತ್ತುಗಳ ಗಂಟೆನಾದ ಎಲ್ಲವೂ ಆಹಾ ಎನಿಸುವ ಕ್ಷಣಗಳಿಗೆ ಸಾಕ್ಷಿಯಾಗಿದ್ದವು.

ಗುಡ್ಡದ ತುದಿ ತಲುಪಿದ ಕೂಡಲೇ ಸುತ್ತಮುತ್ತ ಕಂಡ ದೃಶ್ಯಗಳು, ಹಸಿರ ವಾತಾವರಣ ಮರೆತೇ ಹೋಯಿತು. ಕ್ಷಣಮಾತ್ರದಲ್ಲೇ ಮನಸ್ಸಿನ ಗಮನ ಬೇರೆಡೆ ತಿರುಗಿತು. ಗುಡ್ಡದ ಮೇಲಿನ ಕಲ್ಲುಗಳ ಆ ವಿಶಿಷ್ಟ ರಚನೆಗಳು ಮನಸ್ಸನ್ನು ತನ್ನತ್ತ ಸೆಳೆದುಕೊಂಡವು. 'ಈ ಕಲ್ಲುಗಳಲ್ಲೇನೋ ವಿಶೇಷವಿದೆ' ಎಂಬ ಭಾವನೆ ಕಣ್ಣರಳಿಸಿತು. ಸುರುಳಿ ಸುರಳಿಯಾಗಿ ಸುತ್ತಿಕೊಂಡಂತಿರುವ ರಚನೆಗಳು ಕುತೂಹಲ ಕೆರಳಿಸಿದವು.

ಕಲ್ಲಿನ ಮೇಲೆ ಬೆಂಕಿಯ ಮಳೆ ಸುರಿದಂತೆ, ಕಂಚು ಕಾಯಿಸಿ ಎರಕ ಹೊಯ್ದಂತೆ, ಮುದ್ದೆ ಸವರಿದಂತೆ, ಹದವಾಗಿ ಬ್ರೆಡ್–ಮಿಠಾಯಿ–ಕೇಕ್ ಕತ್ತರಿಸಿದಂತೆ ಕಾಣುವ ಕಲ್ಲುಗಳಲ್ಲಿ ಅಂಥದ್ದೇನು ವಿಶೇಷವಿದೆ ಎಂಬ ಹುಡುಕಾಟದತ್ತ ಮನಸ್ಸು ಹೊರಳಿತು.

ಮೊದಲ ನೋಟಕ್ಕೆ ಆ ವಿಶೇಷ ರಚನೆಗಳು ಬಗೆಬಗೆಯಾದ ಭಾವನೆಗಳು ಮೂಡಿಸುತ್ತವೆ. ಆದರೆ ವಾಸ್ತವವಾಗಿ ಅವು ಕಲ್ಲುಗಳಲ್ಲ, ಕೋಟ್ಯಂತರ ವರ್ಷಗಳ ಹಿಂದೆ ಭೂಗರ್ಭದಲ್ಲಿ ರೂಪುಗೊಂಡ ವೈಜ್ಞಾನಿಕ ಸಾಕ್ಷಿ ಅವು. ಆ ಇಡೀ ಪ್ರದೇಶ ಸಮುದ್ರದ ಭಾಗವಾಗಿತ್ತು ಎನ್ನಲು ಇರುವ ಏಕೈಕ ಕುರುಹು. 'ಪಿಲ್ಲೊ ಲಾವಾ' ಅದರ ಹೆಸರು. ಚಿತ್ರದುರ್ಗದಿಂದ 18 ಕಿ.ಮೀ ದೂರದ ಗುಡ್ಡದ ಮೇಲಿರುವ ಲಾವಾರಸದ ಕುರುಹು ವಿಶ್ವದ ಪ್ರಮುಖ ಭೂವಿಜ್ಞಾನದ ನೆಲೆಯಾಗಿಯೂ ಗುರುತಿಸಿಕೊಂಡಿರುವ ಅದ್ಭುತ.

ಹಿರಿಯೂರು ತಾಲ್ಲೂಕಿನ ಮರಡಿಹಳ್ಳಿ ಗ್ರಾಮದ ನಡುವಿನ ಆ ಗುಡ್ಡ ಸ್ಥಳೀಯವಾಗಿ 'ರಂಗಪ್ಪನ ಗುಡ್ಡ' ಎಂದೇ ಕರೆಸಿಕೊಂಡಿದೆ. ಭಾರತೀಯ ಭೂಸರ್ವೇಕ್ಷಣಾ ಸಂಸ್ಥೆ (ಜಿಎಸ್‌ಐ– ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯಾ) ಇದನ್ನು 1976ರಲ್ಲೇ ರಾಷ್ಟ್ರೀಯ ಭೂವಿಜ್ಞಾನ ಸ್ಮಾರಕ ಎಂದು ಘೋಷಿಸಿದೆ. ಜಿಎಸ್‌ಐ ವತಿಯಿಂದಲೇ ನಿರ್ವಹಣೆಯಾಗುತ್ತಿದೆ. ಸಮುದ್ರದ ತಳದಲ್ಲಿ ಜ್ವಾಲಾಮುಖಿಯಿಂದ ಚಿಮ್ಮಿದ ಲಾವಾರಸ ತಣ್ಣನೆಯ ಉಪ್ಪು ನೀರಿನೊಂದಿಗೆ ಹಠಾತ್ತನೆ ಬೆರೆತಾಗ (ರ್‍ಯಾಪಿಡ್ ಚಿಲ್ಡ್) ಘನೀಕೃತಗೊಂಡ ರಚನೆಯೇ 'ಪಿಲ್ಲೊ ಲಾವಾ'. ಇದು ಭೂವಿಜ್ಞಾನ ಅಧ್ಯಯನಕ್ಕೆ ಪ್ರಮುಖ ಆಧಾರ.

ಮರಡಿ ಎಂದರೆ ಮಣ್ಣಿನ ದಿಬ್ಬ. ದಿಬ್ಬದ ತಟದಲ್ಲಿರುವ ಊರು ಮರಡಿಹಳ್ಳಿ. ಗುಡ್ಡದ ವಿಶೇಷತೆಯಿಂದಾಗಿ ಆ ಊರು ವಿಶ್ವ ಮಟ್ಟದಲ್ಲಿ ಪ್ರಸಿದ್ಧಿಯನ್ನೂ ಪಡೆದಿದೆ. ಸಮುದ್ರದ ಆಳದಲ್ಲಿ ರೂಪಿತವಾದ ದಿಂಬಿನಾಕೃತಿಯ (ಪಿಲ್ಲೊ) ಲಾವಾರಸದ ರಚನೆಗೆ 260 ಕೋಟಿ ವರ್ಷದ (2600 ಮಿಲಿಯನ್ ವರ್ಷ) ಇತಿಹಾಸವಿದೆ. ಅಲ್ಲಿಂದ ಇಲ್ಲಿಯವರೆಗೂ ತನ್ನ ರೂಪದಲ್ಲಿ ಎಳ್ಳಷ್ಟೂ ಬದಲಾಗಿಲ್ಲ. ಕೋಟ್ಯಂತರ ವರ್ಷಗಳಿಂದ ಮಳೆ, ಗಾಳಿ, ಬಿಸಿಲಿಗೆ ಸವೆಯುತ್ತಿದ್ದರೂ ವಿರೂಪಗೊಂಡಿಲ್ಲ. ಈ ಕಾರಣಕ್ಕೆ ಮರಡಿಹಳ್ಳಿಯ 'ಪಿಲ್ಲೊ ಲಾವಾ' ಬಲು ಅಪರೂಪವಾಗಿದ್ದು ವಿಜ್ಞಾನಿಗಳು ಇದನ್ನು ವಿಶ್ವದ ಪ್ರಾಚೀನ ಭೂವಿಜ್ಞಾನ ನೆಲೆ ಎಂದು ಗುರುತಿಸಿದ್ದಾರೆ. ದೇಶದಲ್ಲಿ 50ಕ್ಕೂ ಹೆಚ್ಚು ರಾಷ್ಟ್ರೀಯ ಭೂವಿಜ್ಞಾನ ಸ್ಮಾರಕಗಳಿದ್ದರೂ ಮರಡಿಹಳ್ಳಿ ಪಿಲ್ಲೊ ಲಾವಾವನ್ನು ಅತ್ಯಂತ ಹಳೆಯದ್ದು ಎಂದೇ ಹೇಳಲಾಗಿದೆ.

'ಲಾವಾರಸದ ಹರಿವುಗಳಲ್ಲಿ ಪಹೋಹೊ, ಆಆ, ಬ್ಲಾಕಿ ಮತ್ತು ಪಿಲ್ಲೊ ಲಾವಾಗಳೆಂಬ ನಾಲ್ಕು ವಿಧಗಳಿವೆ. ಮೊದಲ ಮೂರು ಲಾವಾರಸ ಭೂಮಿ ಮೇಲ್ಮೈನಲ್ಲಿ ಕಂಡುಬಂದರೆ, ಪಿಲ್ಲೊ ಲಾವಾಗಳು ಸಮುದ್ರದ ಆಳದಲ್ಲಿ ಸಂಭವಿಸುವ ಜ್ವಾಲಾಮುಖಿಯಿಂದ ರೂಪ ಪಡೆಯುತ್ತವೆ. ಬೆಂಕಿ ಹಾಗೂ ನೀರಿನ ನಡುವಿನ ಕಾದಾಟದಲ್ಲಿ ರಚನೆಯಾದ ಘನರೂಪದ ವಸ್ತುವೇ ಪಿಲ್ಲೊ ಲಾವಾ ಆಗಿದೆ' ಎಂದು ವಿಜ್ಞಾನಿಗಳು ಹೇಳುತ್ತಾರೆ.



ಮರಡಿಹಳ್ಳಿ ಗುಡ್ಡದ ಮೇಲೆ ಅರಳಿ ನಿಂತಿರುವ ಪಿಲ್ಲೊ ಲಾವಾ ಚಿತ್ರಗಳು: ಚಂದ್ರಪ್ಪ ವಿ

ತಣ್ಣನೆಯ ನೀರಿನೊಂದಿಗೆ ತೀವ್ರ ಉಷ್ಣಾಂಶದ ಲಾವಾರಸ ಬೆರೆತಾಗ ಒತ್ತಡಕ್ಕೆ ಸಿಲುಕಿ ಸುರಳಿ ಸುರಳಿಯಾದ ರೂಪ ಪಡೆಯುತ್ತದೆ. ಒಂದರ ಮೇಲೊಂದರಂತೆ ತಲೆದಿಂಬು ಜೋಡಿಸಿದ ಹಾಗೆ ಗಟ್ಟಿಗೊಳ್ಳುತ್ತದೆ. ಈ ಕಾರಣಕ್ಕೆ ಇದನ್ನು 'ದಿಂಬಿನಾಕೃತಿಯ ಲಾವಾ' (ಪಿಲ್ಲೊ ಲಾವಾ) ಎಂದು ಹೇಳಲಾಗುತ್ತದೆ. ತಳದಲ್ಲಿ ಚಪ್ಪಟೆಯಾಗಿದ್ದರೆ ಮೇಲ್ಭಾಗದಲ್ಲಿ ಪೀನಾಕೃತಿಯಲ್ಲಿರುತ್ತವೆ. ಅಂಡಾಶಯದ ಆಕಾರದಲ್ಲೂ ಲಾವಾ ರೂಪಗೊಂಡಿರುವುದನ್ನು ಮರಡಿಹಳ್ಳಿಯಲ್ಲಿ ಗುರುತಿಸಲಾಗಿದೆ.

'ಖನಿಜ ಸಂಪನ್ಮೂಲಗಳ ಲಭ್ಯತೆಯ ಆಧಾರದ ಮೇಲೆ ದೇಶದ ಭೂಪ್ರದೇಶವನ್ನು ಆರು ವಿಭಾಗ (ಕ್ರೆಟಾನ್)ಗಳಾಗಿ ವಿಂಗಡಿಸಲಾಗಿದೆ. ಅದರಲ್ಲಿ ಧಾರವಾಡ ವಿಭಾಗದಲ್ಲಿ ಬರುವ ಚಿತ್ರದುರ್ಗ ಬೆಲ್ಟ್ ಹಲವು ರೀತಿಯ ಲಾವಾ ಕುರುಹುಗಳಿಗೆ ಸಾಕ್ಷಿಯಾಗಿದೆ. ಭೂಮಿ ಹುಟ್ಟಿ 460 ಕೋಟಿ ವರ್ಷಗಳಾಗಿದ್ದರೆ, ಮರಡಿಹಳ್ಳಿ ಪಿಲ್ಲೊ ಲಾವಾಕ್ಕೆ 260 ಕೋಟಿ ವರ್ಷಗಳ ಇತಿಹಾಸವಿದೆ. ಪ್ರಾಚೀನತೆಯ ನೆಲೆಯಲ್ಲಿ ಇದನ್ನು ವಿಶ್ವದ ಬಲು ಅಪರೂಪ ಎಂದು ಪರಿಗಣಿಸಲಾಗಿದೆ. ಈ ಪಿಲ್ಲೊ ಲಾವಾವನ್ನ ಮೊದಲ ಬಾರಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರಾಗಿದ್ದ ಸಿ.ಎಸ್. ಪಿಚ್ಚಮುತ್ತು ಗುರುತಿಸಿದರು' ಎಂದು ಭಾರತೀಯ ಭೂಸರ್ವೇಕ್ಷಣಾ ಸಂಸ್ಥೆ, ಚಿತ್ರದುರ್ಗ ತರಬೇತಿ ಕೇಂದ್ರದ ಹಿರಿಯ ಭೂ ವಿಜ್ಞಾನಿ ಪರಶುರಾಮ ಗಂಗಾಯಿಕೊಪ್ಪ ಹೇಳುತ್ತಾರೆ.

ಮರಡಿಹಳ್ಳಿ ಗುಡ್ಡ ಕಲ್ಲುಗಳ ಕಾಡಿನಂತಿದೆ. ಜೊತೆಗೆ ಕುರುಚಲು ಗಿಡಗಳೂ ಇವೆ. ಚೆಂಡಿನ ಗಾತ್ರದ ಕಲ್ಲು, ಸೈಜುಗಲ್ಲು, ಬಂಡೆಗಲ್ಲುಗಳನ್ನು ಕಾಣಬಹುದು. ಪ್ರತಿ ಕಲ್ಲು ಕೂಡ ಲಾವಾದಿಂದ ರೂಪಗೊಂಡ ರಚನೆಯೇ ಆಗಿದೆ. ಸ್ಪರ್ಶಿಸಿದರೆ ಕಲ್ಲು ಮುಟ್ಟಿದ ಅನುಭವವಾಗುವುದಿಲ್ಲ, ಹತ್ತಿಯ ಸ್ಪರ್ಶದ ಭಾವ ಮೂಡುತ್ತದೆ. ಗ್ರಾಮೀಣ ಜನರು ಆ ಕಲ್ಲುಗಳನ್ನು ಒಂದರ ಮೇಲೊಂದು ಜೋಡಿಸಿ ಗುಡಿಯನ್ನು ಕಟ್ಟಿದ್ದಾರೆ. ಚಪ್ಪಡಿಗೆ ಶಂಖ, ಚಕ್ರ, ಗದ ಚಿತ್ರ ಬರೆದು ರಂಗನಾಥಸ್ವಾಮಿ ಎಂದು ನಾಮಕರಣ ಮಾಡಿದ್ದಾರೆ. ಆದರೆ ಪೂಜೆಗೆ ಒಳಪಡುತ್ತಿರುವ ಕಲ್ಲು ಪಿಲ್ಲೊ ಲಾವಾ ರಚನೆಯೇ ಆಗಿದೆ. ಧಾರ್ಮಿಕ ಭಾವನೆಯ ಕಾರಣಕ್ಕೆ ಅಲ್ಲಿಯ ಕಲ್ಲುಗಳನ್ನು ಯಾರೂ ಕದಿಯುವುದಿಲ್ಲ.

'ಆಲಿವನ್, ಪೈರಾಕ್ಸಿನ್, ಆಂಫಿಬೋಲ್, ಬಯೋಟೈಲ್, ಐರನ್, ಕ್ಯಾಲ್ಸಿಯಂ, ಸಿಲಿಕಾ ಖನಿಜಗಳಿಂದ ರಚನೆಯಾಗಿರುವ ಪಿಲ್ಲೊ ಲಾವಾ ಸಮುದ್ರದ ಅಂತರಾಳದಿಂದ ಹುಟ್ಟಿಬಂದಿದೆ. ಮರಡಿಹಳ್ಳಿಯ ಪಿಲ್ಲೊ ಲಾವಾ ಭೂವಿಜ್ಞಾನ ಸಂಶೋಧನೆಗೆ ಶ್ರೇಷ್ಠ ತಾಣ. ಇಡೀ ದಕ್ಷಿಣ ಭಾರತ ಸಮುದ್ರವಾಗಿತ್ತು ಎನ್ನಲು ಇದಕ್ಕಿಂತ ಮಿಗಿಲಾದ ಸಾಕ್ಷಿ ಬೇಕಿಲ್ಲ. ಶ್ರೀರಂಗಪಟ್ಟಣದ ಕರಿಘಟ್ಟದಲ್ಲೂ ಲಾವಾ ಕುರುಹುಗಳಿವೆ. ಮೈಸೂರಿನ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಿಯನ್ನು ಜ್ವಾಲಾಮುಖಿಯಮ್ಮ ಎಂದೇ ಪೂಜಿಸಲಾಗುತ್ತದೆ' ಎಂದು ಚಿತ್ರದುರ್ಗ ತಾಲ್ಲೂಕು ಬಹದ್ದೂರ್‌ಘಟ್ಟ ಹೊಸಹಟ್ಟಿ ಗ್ರಾಮ ಮೂಲದ, ಮೈಸೂರು ವಿವಿ ಭೂವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಚ್.ಪಿ.ಬಸವರಾಜಪ್ಪ ನೆನಪಿಸಿಕೊಳ್ಳುತ್ತಾರೆ. ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿರುವ ಮರಡಿಹಳ್ಳಿ ಸ್ಮಾರಕ ಸಂಶೋಧನಾ ತಾಣವಾಗಿ ಗುರುತಿಸಿಕೊಂಡಿದೆ. ❖

ಜೀವಿವೈವಿಧ್ಯ ರಕ್ಷಿಸದಿದ್ದರೆ ಸ್ವಾರ್ಥಿಗಳಿಗೆ ಎಲ್ಲ ನೈವೇದ್ಯ

10ನೇ ಪುಟದಿಂದ...

ಆಗ ಇದೇ ಜೀವವೈವಿಧ್ಯ ಮಂಡಳಿಯ ಕಾರ್ಯದರ್ಶಿಯಾಗಿದ್ದ ಕೆ.ಎಸ್. ಸುಗಾರ ದಾವೆ ಹೂಡಿದರು. ಮಂಡಳಿಯ ಅನುಮತಿ ಇಲ್ಲದೆ ಬದನೆಯನ್ನು ಪ್ರಯೋಗಕ್ಕೆ ಬಳಸಿದ ಮಾನ್ಸಾಂಟೊ ಮತ್ತು ಅದಕ್ಕೆ ನೆರವಾದ ವಿಜ್ಞಾನಿಗಳ ವಿರುದ್ಧ ಹೂಡಿದ ಆ ದಾವೆಯಿಂದಾಗಿಯೇ ವಿದೇಶೀ ಕಂಪನಿಗೆ ಪರಭಾರೆ ಆಗುವುದು ತಪ್ಪಿತು. ಜೈವಿಕ ಸಂಪತ್ತನ್ನು ಕದ್ದ ಆರೋಪಿಗಳಿಗೆ 'ಬೇಲ್ ಕೂಡ ಸಿಗುವುದಿಲ್ಲ' ಎನ್ನುತ್ತಾರೆ, ನಿವೃತ್ತ ಅರಣ್ಯಾಧಿಕಾರಿ ಸುಗಾರ.

ಇನ್ನೊಂದು ಉದಾಹರಣೆಯನ್ನು ನೋಡಿ: ದಾವಣಗೆರೆ ಬಳಿಯ ದೊಡ್ಡವಾಡ ಕೆರೆಯ ಹೂಳೆತ್ತಲು ಆದೇಶ ಬಂತು. ಸರಿ, ಅವಸರದಲ್ಲಿ ಇದ್ದಬದ್ದ ನೀರನ್ನು ಖಾಲಿ ಮಾಡಲೆಂದು ಕಟ್ಟೆಯನ್ನೇ ಒಡೆಯುವ ಕೆಲಸ ಆರಂಭವಾಯಿತು (ಅಂಥ ಅರೆಬರೆ ಕೆಲಸದ ಉದಾಹರಣೆಗಳು ಬೇಕಷ್ಟಿವೆ). 'ಹಾಗೆ ಮಾಡಬೇಡಿ, ತಳದ ವೈವಿಧ್ಯಮಯ ಜಲಜೀವಿಗಳು ನಾಶವಾಗುತ್ತವೆ' ಎಂದು ವನ್ಯಪ್ರೇಮಿಗಳು, ವಿಜ್ಞಾನಿಗಳು ದನಿಯೆತ್ತಿದರೂ ಪ್ರಯೋಜನವಾಗಲಿಲ್ಲ. ಆಗ ಮಧ್ಯಪ್ರವೇಶ ಮಾಡಿದ್ದು ಇದೇ ಜೀವಿವೈವಿಧ್ಯ ಕಾನೂನು. ಅಂತೂ ಕೆರೆ ಖಾಲಿ ಯೋಜನೆಗೆ ತಡೆಯಾಜ್ಞೆ ಬಂತು.

ಅಘನಾಶಿನಿ ಅಳಿವೆಯಲ್ಲಿರುವ ಕಾಂಡ್ಲಾ ಕಾಡು ಚಿತ್ರ: ಯೋಗೇಶ್ ಮಡಿವಾಳ

ನಮ್ಮ ಜೀವಸಂಪತ್ತಿನ ರಕ್ಷಣೆಗೆ ಅರಣ್ಯ ಕಾಯಿದೆ ಇದೆ; ಪರಿಸರ ರಕ್ಷಣಾ ಕಾಯಿದೆ ಇದೆ ನಿಜ. ಆದರೆ ಇವೆರಡಕ್ಕಿಂತ 'ಜೀವಿವೈವಿಧ್ಯ ಕಾನೂನು' ಭಿನ್ನವಾಗಿದೆ. ಶಿಂಷಾ ಬಳಿಯ ಕಾವೇರಿ ಮಡುವಿನಲ್ಲಿ ಪುಂಡರು ಡೈನಮೈಟ್ ಸ್ಫೋಟಿಸುತ್ತಾರೆ. ಸಾವಿರಾರು ಮೀನುಗಳು ಸತ್ತು ತೇಲುತ್ತವೆ. ತಮಗೆ ಬೇಕಿದ್ದುದನ್ನು ಮಾತ್ರ ಎತ್ತಿಕೊಂಡು ಉಳಿದ ಮೃತಜೀವಿಗಳನ್ನು ಹಾಗೇ ಬಿಟ್ಟು ಹೋಗುತ್ತಾರೆ. ನದಿಯ ಆ ಭಾಗವನ್ನು 'ಸಂರಕ್ಷಿತ ಪ್ರದೇಶ'ವೆಂದು ಘೋಷಣೆ ಮಾಡುವ ಅಧಿಕಾರ ಈ ಮಂಡಳಿಗೆ ಮಾತ್ರ ಇದೆ. ದೊಡ್ಡವಾಡ ಕೆರೆಯನ್ನು ಗುತ್ತಿಗೆದಾರರು ಖಾಲಿ ಮಾಡದಂತೆ ತಡೆಯುವ ಅಧಿಕಾರ ಅರಣ್ಯ ಕಾಯಿದೆಗೂ ಇಲ್ಲ; ಪರಿಸರ ಕಾಯಿದೆಗೂ ಇಲ್ಲ. ಇದಕ್ಕಿತ್ತು.

ಜೀವವೈವಿಧ್ಯ ಮಂಡಳಿ ಅಂಥ ಅನೇಕ ಜೀವಧಾಮಗಳಿಗೆ ರಕ್ಷಣಾ 'ಬೇಲಿ'ಯನ್ನು ಒದಗಿಸಿದೆ. ಬೆಂಗಳೂರಿನ ಸಮೀಪ 600 ವರ್ಷಗಳಷ್ಟು ಹಳೆಯದಾದ ನೆಲ್ಲೂರು ಹುಣಿಸೆ ತೋಪು (ಇದರ ಬೃಹತ್ ಚಿತ್ರವೊಂದು ಹೊಸ ವಿಮಾನ ನಿಲ್ದಾಣದಲ್ಲಿದೆ) ಈಗ ಸುರಕ್ಷಿತವಾಗಿದೆ. ಹಾಗೇ ಕೋಲಾರದ ಅಂತರಗಂಗೆ, ಕುಮಾರಧಾರಾದ ಉರುಂಬಿ ಮಡು, ನೆಲಮಂಗಲದ ಮಹಿಮಾರಂಗನ ಬೆಟ್ಟ, ಚಿಕ್ಕಮಗಳೂರಿನ ಹೊಗರೆಕಾನು, ಬೆಂಗಳೂರಿನ ಜಿಕೆವಿಕೆ, ಶಿವಮೊಗ್ಗದ ಅಂಬಾರಗುಡ್ಡಗಳೂ ಈ ಪಟ್ಟಿಯಲ್ಲಿವೆ. 'ನಾವು ರಾಜ್ಯದ ಹನ್ನೊಂದು ನದಿಕೊಳ್ಳಗಳ ಭಾಗಗಳನ್ನು ಮತ್ತು ನಾಲ್ಕು ಜೀವಿವೈವಿಧ್ಯತಾಣಗಳನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಿದ್ದೇವೆ. ಇನ್ನೂ ಅಂಥ ಇಪ್ಪತ್ತೇಳು ಅಮೂಲ್ಯ ತಾಣಗಳನ್ನು ಗುರುತಿಸಿದ್ದೇವೆ. ಆದರೆ ಘೋಷಣೆ ಆಗಬೇಕಾಗಿದೆ' ಎನ್ನುತ್ತಾರೆ, ಹಿಂದೆ ಈ ಮಂಡಳಿಯ ಅಧ್ಯಕ್ಷರಾಗಿದ್ದ ಅನಂತ ಅಶೀಸರ. 'ಯಲ್ಲಾಪುರದ ಸಮೀಪದ ದೇಹಳ್ಳಿಯಲ್ಲಿ ಮರ-ಅರಿಸಿನದ ಒಂದು ಕಾಡೇ ಇದೆ ಗೊತ್ತೆ? ಬನವಾಸಿಯ ಬಳಿ ಒಂದೂವರೆ ಎಕರೆ ವಿಸ್ತಾರದ ಏಕೈಕ ಬಿಳಲಿ ಮರ ಇದೆ; ರಾಜ್ಯದ ಅತಿದೊಡ್ಡ ಬೀಟೆ ಮರ ಎಲ್ಲಿದೆ ಗೊತ್ತೆ?' ಎಂದು ಅವರು ಕೇಳುತ್ತಾರೆ.

ಅವೆಲ್ಲ ಎಲ್ಲರಿಗೂ ಗೊತ್ತಿರದೇ ಇರುವುದೇ ಕ್ಷೇಮ ಅನ್ನಿ! ಗೊತ್ತಾದರೆ ಹೊರಟುಬಿಡುತ್ತಾರೆ, ಕ್ಯಾಮರಾ, ಬಾಟಲಿ, ಗುಟ್ಕಾ ಪ್ಯಾಕೆಟ್ ಹಿಡಿದು. ಅಂಥ ತಾಣಗಳಿಗೆ ಹೊಣೆಗೇಡಿ ಪ್ರವಾಸಿಗರಿಂದ ರಕ್ಷಣೆ ಬೇಕು. ಕಳ್ಳಕಾಕರಿಂದ, ಜೀವದ್ರವ್ಯಗಳ ದಲ್ಲಾಳಿಗಳಿಂದ ಅವುಗಳಿಗೆ ರಕ್ಷಣೆ ಬೇಕು. ಸದ್ದಿಲ್ಲದೆ ಆಕ್ರಮಿಸುವ ಲಂಟಾನಾ, ಯುಪಟೋರಿಯಂ ಮುಂತಾದ ದಾಳಿಕೋರ ಜೀವಿಗಳಿಂದ ರಕ್ಷಣೆ ಬೇಕು.

ಆದರೆ ಈಚೆಗೆ ಜೀವವೈವಿಧ್ಯ ಮಂಡಳಿಗೆ ನಾಯಕನೇ ಇಲ್ಲ. ರಾಜ್ಯದ ಎಲ್ಲ ಮಂಡಳಿ, ನಿಗಮಗಳಿಗೆ ನೇಮಕಾತಿ ಮಾಡಲು ಕಾಂಗ್ರೆಸ್ ಹೈಕಮಾಂಡ್ ಒಪ್ಪಿಗೆ ನೀಡಿಲ್ಲ. ಹಾಗಾಗಿ ಸದಾ ಚುರುಕಾಗಿ ಇರಬೇಕಿದ್ದ ಈ ಮಂಡಳಿಯ ಯುವ ವಿಜ್ಞಾನಿಗಳು ಕೈಕಟ್ಟಿ ಕೂತಿದ್ದಾರೆ. ಕಡತಗಳು ರೆಕ್ಕೆ ಮುದುರಿ ಕಪಾಟುಗಳಲ್ಲಿ ಕೂತಿವೆ. ಅರಣ್ಯ ಸಚಿವ ಈಶ್ವರ ಖಂಡ್ರೆಯವರೇ ತಾತ್ಕಾಲಿಕ ಅಧ್ಯಕ್ಷರಾಗಿದ್ದಾರೆ. ಅವರಿಗೆ ಬಿಡುವಿಲ್ಲ. ನಿಜಕ್ಕೂ ಅವರು ಆ ಕುರ್ಚಿಯಲ್ಲಿ ತುಸು ಹೊತ್ತು ಕೂತರೂ ಅದೆಂಥ ಮ್ಯಾಜಿಕ್ ಆಗಬಹುದು ಎನ್ನುವುದಕ್ಕೂ ಒಂದು ಉದಾಹರಣೆಯನ್ನು ಅನಂತ ಅಶೀಸರ ಕೊಡುತ್ತಾರೆ: ವಿಜಯಪುರದಲ್ಲಿ ಸಂತ ಸಿದ್ದೇಶ್ವರ ಸ್ವಾಮೀಜಿ ಹೆಸರಿನಲ್ಲಿ ಒಂದು ಜೀವಧಾಮವನ್ನು ಸೃಷ್ಟಿಸಬೇಕೆಂಬ ಸಲಹೆ ಬಂತು. ಖಂಡ್ರೆಯವರು ಓಕೆ ಎಂದು ಗಟ್ಟಿಯಾಗಿ ನಿರ್ಧರಿಸಿದ್ದೇ ತಡ, ಸರ್ಕಾರದ ಕಾರ್ಯದರ್ಶಿಗಳು, ಅರಣ್ಯ ಇಲಾಖೆಯ ಅಧಿಕಾರಿಗಳು ಸರಸರ ಕಡತ ಓಡಿಸಿದರು. ಸಮೀಕ್ಷೆಗೆ ಸಿಬ್ಬಂದಿ ಧಾವಿಸಿದರು. ಅನಾಥವಾಗಿ ಬಿದ್ದಿದ್ದ 1400 ಎಕರೆ ಭಣಗುಡುವ ಭೂಮಿಗೆ ಒಂದೇ ತಿಂಗಳಲ್ಲಿ ರಕ್ಷಣಾ ಘೋಷಣೆ ಬಂತು. ಫಲಕ ಬಂತು. ಬೇಲಿ ಹಾಕಲು ಮಂಜೂರಾತಿ ಸಿಕ್ಕಿತು. ನಮ್ಮ ನೆಲದ ವಿಶೇಷ ಏನೆಂದರೆ ಎಲ್ಲೇ ರಕ್ಷಣಾಬೇಲಿ ಬಂದರೂ ಎಂಥ ಬರಭೂಮಿಯಲ್ಲೂ ಸಮೃದ್ಧ ವನ ತಂತಾನೇ ಸೃಷ್ಟಿ ಆಗಿಬಿಡುತ್ತದೆ. ಗಾಳಿ, ಮಳೆ, ಬಿಸಿಲು, ಇಬ್ಬನಿಗಳೇ ಬೀಜ ನೆಡುತ್ತವೆ, ಸಸ್ಯಪೋಷಣೆ ಮಾಡುತ್ತವೆ. ಇರುವೆ, ಜೇಡ, ಜೇನು, ಹಕ್ಕಿಪಕ್ಷಿ, ಉಡ, ಊಸರವಳ್ಳಿ, ಕಾಡಾಮೆಗಳೂ ನೆಲೆನಿಂತು ಕೈಕೈ ಜೋಡಿಸಿ ಅದನ್ನೊಂದು ಸ್ಮರಣವನ್ನಾಗಿ ಮಾಡಿಬಿಡುತ್ತವೆ.

ದರೋಜಿಯಲ್ಲಿ ವಿಹರಿಸುತ್ತಿರುವ ಕರಡಿ

ಖಂಡ್ರೆಯವರ ಬದಲು ಇನ್ಯಾರೋ ಈ ಮಂಡಳಿಯ ಅಧ್ಯಕ್ಷರಾಗಿದ್ದರೆ ಅವರೆಷ್ಟೇ ಕಟಿಪಿಟಿ ಇದ್ದರೂ ಕಡತಗಳ ಓಡಾಟಕ್ಕೇ ವರ್ಷಗಟ್ಟಲೆ ಬೇಕು. ವಿಧಾನಸೌಧದ ಸೆಕ್ರೆಟರಿಗಳ ಮರ್ಜಿ ಕಾಯಬೇಕು. ಅದಕ್ಷ ಅಧ್ಯಕ್ಷರಿದ್ದರಂತೂ ಕಡತಗಳು ಆಮೆಗಳಾಗುತ್ತವೆ. ಆದರೂ ಅಧ್ಯಕ್ಷರೊಬ್ಬರು ಬೇಕು. ಈ ಮಂಡಳಿಯ ಹಿಂದಿನ ಕೆಲವು ಅಧ್ಯಕ್ಷರ ಚುರುಕು ಕೆಲಸಗಳಿಂದಾಗಿ, ಸಚಿವರು ಮತ್ತು ಸದಸ್ಯ ಕಾರ್ಯದರ್ಶಿಯ ಉತ್ಸಾಹ ಆಸಕ್ತಿಯಿಂದಾಗಿ ಕರ್ನಾಟಕದ ಜೀವಿ ವೈವಿಧ್ಯದ ಚಿತ್ರಣ ದೇಶದಲ್ಲೇ ಮಾದರಿಯದೆನಿಸಿತ್ತು. ಆ ಖ್ಯಾತಿ ಮತ್ತೆ ಮರುಕಳಿಸಬೇಕು. ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಪರಿಸರ ರಕ್ಷಣೆಗೆ, ಜೀವಧನದ ರಕ್ಷಣೆಗೆ ಉತ್ಸಾಹ ತುಂಬಬೇಕು. ಶಾಲೆ ಕಾಲೇಜುಗಳ ಜೀವವಿಜ್ಞಾನ ಬೋಧಕರನ್ನು ಚುರುಕುಗೊಳಿಸಬೇಕು. ಜೀವಖಜಾನೆಗೆ ಲಗ್ಗೆ ಇಡಲು ಸದಾ ಹವಣಿಸುವ ಉದ್ಯಮಿಗಳ ವಿರುದ್ಧ ಹೋರಾಡಲು ಕಾನೂನುತಜ್ಞರನ್ನು ರೂಪಿಸಬೇಕು. ಮಂಡಳಿಯ ಸಿಬ್ಬಂದಿಯನ್ನು ನಿದ್ದೆಯಿಂದ ಎಬ್ಬಿಸಬೇಕು. ಸದ್ಯಕ್ಕಂತೂ ಅಪ್ಸರಕೊಂಡವನ್ನು (ಅದು ಅಭಿವೃದ್ಧಿಯ ಮಹಾರಥಕ್ಕೆ ಬಲಿಯಾಗುವ ಮೊದಲೇ) ತುರ್ತಾಗಿ 'ಪಾರಂಪರಿಕ ಜೀವಿವೈವಿಧ್ಯ ಸಾಗರ ಸಂಗ್ರಹಾಲಯ' ಎಂದು ಘೋಷಿಸಬೇಕು.

ಸಚಿವ ಖಂಡ್ರೆಯವರಿಗೆ ಉತ್ಸಾಹವಿದೆ. ಆದರೆ ಅವರಿಗಿರುವುದೂ ದಿನಕ್ಕೆ 24 ತಾಸು ಅಷ್ಟೆ. ❖

ಮುನ್ನೋಟ 01-06-2025 ರಿಂದ 07-06-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹಿತಶತ್ರುಗಳ ಕಾಟ ಜಾಸ್ತಿಯಾಗಬಹುದು. ಆದಾಯವು ಉತ್ತಮಗೊಳ್ಳುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳು ದ್ವಂದ್ವದಲ್ಲಿ ತಮ್ಮ ಫಲಿತಾಂಶ ವ್ಯತ್ಯಾಸ ಮಾಡಿಕೊಳ್ಳುವರು. ನರ ದೌರ್ಬಲ್ಯ ಇದ್ದವರಿಗೆ ಈಗ ಆರೋಗ್ಯ ಸುಧಾರಿಸುತ್ತದೆ. ಸಂಗಾತಿ ಜತೆ ಮಾಡಿದ ವ್ಯವಹಾರಗಳಲ್ಲಿ ಲಾಭ ಹೆಚ್ಚಾಗುತ್ತದೆ. ವೃತ್ತಿಯಲ್ಲಿ ಕೆಲಸದ ಒತ್ತಡಗಳು ಬಹಳ ಹೆಚ್ಚಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಬಹಳ ಅಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಬಹಳ ಬುದ್ಧಿವಂತಿಕೆಯಿಂದ ಮಾತನಾಡಿ ಎಲ್ಲರನ್ನೂ ಸೆಳೆಯುವಿರಿ. ಆಸ್ತಿ ಖರೀದಿಯ ವಿಚಾರಗಳಲ್ಲಿ ಮೋಸವಾಗಬಹುದು ಎಚ್ಚರ. ವಿದ್ಯಾರ್ಥಿಗಳು ಶ್ರಮಪಟ್ಟು ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಕೆಲವರಿಗೆ ಬಾಯಿಯಲ್ಲಿ ತೊಂದರೆ ಕಾಣಿಸಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಏನನ್ನಾದರೂ ಸಾಧಿಸುವ ಆಲೋಚನೆಯಲ್ಲಿರುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಮಾತಿನಲ್ಲಿ ಬಹಳ ಚುರುಕಾಗಿರುವಿರಿ. ವ್ಯವಹಾರಗಳಿಂದ ಹೆಚ್ಚು ಆದಾಯವನ್ನು ಪಡೆಯುವಿರಿ. ರಿಯಲ್ ಎಸ್ಟೇಟ್ ದಲ್ಲಾಳಿಗಳಿಗೆ ಸಾಕಷ್ಟು ಲಾಭವಿರುತ್ತದೆ. ಶೀತ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯಿಂದ ನಿಮ್ಮ ಆದಾಯ ಕೂಡ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯ ಕಡಿಮೆ ಇರುತ್ತದೆ. ಸಮೂಹದಲ್ಲಿ ಮಾತನಾಡುವಾಗ ಎಚ್ಚರಿಕೆ ಇರಲಿ, ಮಾತು ದಿಕ್ಕು ತಪ್ಪಬಹುದು. ಬಂಧುಗಳಿಂದ ಸಹಾಯ ದೊರಕದಿರಬಹುದು. ಮಧ್ಯವರ್ತಿ ಕೆಲಸ ಮಾಡುವವರಿಗೆ ಹೆಚ್ಚು ಕಮಿಷನ್ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುವುದಿಲ್ಲ. ಕೆಲವರಿಗೆ ಜೀರ್ಣಕ್ರಿಯೆಯಲ್ಲಿ ಸಮಸ್ಯೆಯಾಗಬಹುದು. ಜಿಮ್ ನಡೆಸುವವರಿಗೆ ಅಷ್ಟು ಆದಾಯವಿರುವುದಿಲ್ಲ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಬಹಳಷ್ಟು ದ್ವಂದ್ವಗಳಿಂದ ವಾರದ ಆರಂಭವಾಗುತ್ತದೆ. ಆದಾಯಕ್ಕಿಂತ ಖರ್ಚು ಹೆಚ್ಚಾಗಬಹುದು. ಭೂಮಿ ವ್ಯವಹಾರಗಳಿಗೆ ಕೈಹಾಕದಿರುವುದು ಒಳ್ಳೆಯದು. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಅನುಕೂಲತೆ ಇರುತ್ತದೆ. ಪ್ರಮುಖ ಸರ್ಕಾರಿ ಹುದ್ದೆಗಳಲ್ಲಿ ಇರುವವರಿಗೆ ಜವಾಬ್ದಾರಿ ಹೆಚ್ಚುತ್ತದೆ. ಅನಿರೀಕ್ಷಿತವಾಗಿ ಆರೋಗ್ಯದ ವ್ಯತ್ಯಾಸಗಳಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲಸ ಕಾರ್ಯಗಳ ಬಗ್ಗೆ ಆಸಕ್ತಿ ಕಡಿಮೆಯಾಗುತ್ತದೆ. ಆದಾಯ ಕಡಿಮೆ ಇರುತ್ತದೆ. ನಿಮ್ಮ ಮಾತಿನಿಂದಾಗಿ ಬರುವ ಆದಾಯವು ನಿಲ್ಲಬಹುದು. ವೃತ್ತಿಯಲ್ಲಿ ಸ್ವಲ್ಪ ಉತ್ತಮ ವಾತಾವರಣವಿರುತ್ತದೆ. ಸಂಗಾತಿಯು ಸಂಸಾರದ ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತಾರೆ. ಕೃಷಿ ಮೇಲೆ ಹೂಡಿದ ಹಣ ಸಂಪೂರ್ಣ ನಷ್ಟವಾಗುತ್ತದೆ. ಲೋಹದ ವ್ಯಾಪಾರಿಗಳಿಗೆ ಸಾಕಷ್ಟು ಲಾಭವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆದಾಯವು ಕಡಿಮೆ ಇರುತ್ತದೆ. ಸಂಸಾರದಲ್ಲಿ ಸ್ವಲ್ಪ ಕಾವೇರಿದ ವಾತಾವರಣವಿರುತ್ತದೆ. ವಿದೇಶಕ್ಕೆ ಮಕ್ಕಳನ್ನು ಓದಲು ಕಳಿಸಬೇಕೆಂದುಕೊಂಡವರಿಗೆ ಈಗ ಅವಕಾಶಗಳು ದೊರೆಯುತ್ತವೆ. ಮಾಂಸಖಂಡದ ಸೆಳೆತ ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಸಂಸಾರಕ್ಕಾಗಿ ಅಲ್ಪಮಟ್ಟಿನ ಸಹಕಾರ ಸಿಗುತ್ತದೆ. ಬೆಳ್ಳಿಯ ವ್ಯಾಪಾರಿಗಳಿಗೆ ನಷ್ಟವಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಮನಸ್ಸು ಗೊಂದಲದ ಗೂಡಾಗಿರುತ್ತದೆ. ಆದಾಯವು ಸ್ವಲ್ಪಮಟ್ಟಿಗೆ ಉತ್ತಮಗೊಳ್ಳುತ್ತದೆ. ನಿಮ್ಮ ಮಕ್ಕಳ ಸಹಾಯದಿಂದ ಶತ್ರುಗಳನ್ನು ಮಟ್ಟ ಹಾಕುವಿರಿ. ನವೀನ ರೀತಿಯ ಕೃಷಿಯನ್ನು ಮಾಡುವವರಿಗೆ ಹೆಚ್ಚು ಅನುಕೂಲವಿರುತ್ತದೆ. ನೀರಿನಿಂದ ಅನಾರೋಗ್ಯ ಉಂಟಾಗುವ ಸಾಧ್ಯತೆ ಇದೆ. ಸರ್ಕಾರಿ ಕೆಲಸ ಕಾರ್ಯಗಳಿಗಾಗಿ ವಿನಿಯೋಗಿಸಿದ ಹಣ ವಾಪಾಸ್ ಬರುವ ಸಾಧ್ಯತೆ ಕಡಿಮೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ಹುಮ್ಮಸ್ಸಿನಿಂದ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇದ್ದರೂ ತೊಂದರೆಯಾಗುವುದಿಲ್ಲ. ಸ್ವಯಂ ಕೃಷಿ ಮಾಡುವ ಆಲೋಚನೆ ಮೂಡುತ್ತದೆ. ವಿದ್ಯಾರ್ಥಿಗಳಿಗೆ ಈಗ ನಿರೀಕ್ಷಿತ ಫಲಿತಾಂಶ ಸಿಗುವುದಿಲ್ಲ. ಸ್ತ್ರೀರೋಗ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ವ್ಯಾಪಾರ, ವ್ಯವಹಾರಗಳಿಂದ ಆದಾಯ ಕಡಿಮೆಯಾಗಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಿದೇಶಿ ಮೂಲದಿಂದ ಹಣ ಸಂಪಾದನೆ ಮಾಡುವ ಯೋಗವಿದೆ. ನಿಮ್ಮ ಪರಾಕ್ರಮದಿಂದ ಶತ್ರುಗಳನ್ನು ನಿಗ್ರಹಿಸುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಕಣ್ಣಿನ ತೊಂದರೆ ಇರುವವರು ಎಚ್ಚರವಹಿಸಿ. ಸಂಗಾತಿಯ ಜತೆಗೂಡಿ ಮಾಡಿದ ವ್ಯವಹಾರಗಳಲ್ಲಿ ನಿಮಗೆ ಲಾಭವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರಿಗೆ ವಿದೇಶಿ ವ್ಯಾಮೋಹ ಬಹಳ ಹೆಚ್ಚಿರುತ್ತದೆ. ಆದಾಯ ಬಹಳ ಕಡಿಮೆ ಇರುತ್ತದೆ. ರಾಜಕಾರಣಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಸ್ಥಿರಾಸ್ತಿಯನ್ನು ಮಾಡಲು ಹಣಕಾಸಿನ ಸಹಾಯ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಮಕ್ಕಳ ಬಗ್ಗೆ ಶುಭ ವಾರ್ತೆಗಳನ್ನು ಕೇಳಬಹುದು. ವ್ಯವಹಾರದಲ್ಲಿ ಬಹಳ ಎಚ್ಚರವಾಗಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆದಾಯವು ಬಹಳ ಕಡಿಮೆ ಇರುತ್ತದೆ. ಸಹೋದರಿಯರಿಂದ ನಿಮಗೆ ಸಹಾಯ ಲಭಿಸುತ್ತದೆ. ನಿಮ್ಮ ಚಟುವಟಿಕೆಗಳಿಂದ ವೃತ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದಬಹುದು. ಮಠಮಾನ್ಯಗಳ ಆದಾಯ ಹೆಚ್ಚುತ್ತದೆ. ವೃತ್ತಿಯಲ್ಲಿ ಸ್ವಲ್ಪ ಸಂತೋಷವಿರುತ್ತದೆ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಪ್ರಗತಿಯನ್ನು ಕಾಣಬಹುದು. ಅಲಂಕಾರಿಕ ವಸ್ತುಗಳನ್ನು ತಯಾರಿಸುವವರಿಗೆ ಆದಾಯ ಹೆಚ್ಚುತ್ತದೆ.

ಪದಬಂಧ 2894



ಮೇಲಿನಿಂದ ಕೆಳಕ್ಕೆ
1. ಭಾರತದ ನಾಗರಿಕತೆಯನ್ನು ಹುಟ್ಟುಹಾಕಿದ ನದಿ ಸಮುದ್ರ ಸೇರುವ ಸ್ಥಳ 5
2. ನಿತ್ಯ ಉದಯಿಸುವ ಮಿತ್ರ 2
3. ಸಜ್ಜನರ ... ಹೆಜ್ಜೇನು ಸವಿದಂತೆ 2
4. ತಾವರೆಯಿಂದ ಅಲಂಕರಿಸುವ ರಾಷ್ಟ್ರ ಪ್ರಶಸ್ತಿ 5
6. ಬಾನಂಗಳದ ವಿಜ್ಞಾನ 3
7. ತಲೆ ಕೆಟ್ಟು ದಿಕ್ಕು ತಪ್ಪಿಸುವ ತಿರುಗುವಿಕೆ 5
9. 'ಗೆಲ್ಲು ನೀನು ಗೆಲ್ಲು' ಎಂದು ಅರಸನನ್ನು ಹರಸುವ ಸಭಿಕರ ಆಶೀರ್ವಾದ 5
11. ಅಚ್ಚುಕಟ್ಟಾಗಿ ಹೊಂದಿಕೊಳ್ಳುವ ಲಕ್ಷ್ಮೀ-ಲಕ್ಷ್ಮೀ ಪತಿ 5
14. ಅತಿ ಕಟುವೆನಿಸುವ ನಿಜ ಸಂಗತಿ 5
15. ಸಂಕ್ಷಿಪ್ತವಾದ ಸಮಾಚಾರ ಪತ್ರಿಕೆಯಲ್ಲಿ ಹೀಗೆ ಪ್ರಕಟ 5
17. ಮಕ್ಕಳ ಕತೆಗಳಲ್ಲಿ ಬೆರಗುಗೊಳಿಸುವ ಪುರ, ಒಂದು ಕಡೆ ಭ್ರಮೆ ಮತ್ತೊಂದು ಕಡೆ ಗರಿ 5
19. ತಾಯಿಯನ್ನು ವೇದನೆಗೆ ಒಳಪಡಿಸುವ ಕೂಸಿನ ಹುಟ್ಟು 3
21. ಹಿಂದಿಯ ಏಳರ ಜೊತೆ 2
23. ಮಾತು, ಭಾಷೆ, ವಚನ 2

ಎಡದಿಂದ ಬಲಕ್ಕೆ
1. ಶೋಭಿಸುವ ಕೆಂಪು ಬಣ್ಣದ ಕುಂಕುಮದ ನೆತ್ತರು: ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆ 3
3. ದುಃಖದ ಜೊತೆ ಸೇರಿದ ಬಿಸಿ 3
5. ವಿಶೇಷವಾದ ಬಿಸಿ ನಕ್ಷತ್ರ 3
7. ಮತ್ತೆ ಸುವಾಸನೆ ಬೀರುವ ಪತ್ರೆ ಹೂವಿನ ಮಾಲೆ ಸೇರಿದೆ 3
8. ಹಸುವಿನ ಸ್ವಭಾವದ ಗಂಗೆಯ ಉಪನದಿ 3
9. ಅಪರೂಪಕ್ಕೊಮ್ಮೆ ಬಿಡಿ ಬಿಡಿಯಾಗಿ ಕಾಣಿಸಿದ್ದು 3
10. ಹೂವಿಂದ ಹೂವಿಗೆ ಹಾರುವ ದುಂಬಿ 3
12. ಮನುವಿನ ಕುಲದಲ್ಲಿ ಹುಟ್ಟಿದವ 3
13. ಭೀಕರ ಹೋಮದ ಆಹುತಿ 3
14. ಒತ್ತರಿಸಿದ ಕಲ್ಲಿನ ಪೀಠ 3
15. ಕಷ್ಟವೇ ಇಲ್ಲದ್ದು, ಅತಿ ಸರಳ ಸರಾಗ 3
16. ಹಿಮಾಲಯದಲ್ಲಿ ಮಹಾ ಪವಾಡ 3
18. ಒಂದೇ ಅಂಗಳದಲ್ಲಿ ಹತ್ತಾರು ಮನೆ 3
19. ವಚನದಲ್ಲಿರುವ ತೂಕ 3
20. ಸರಸ್ವತಿಯ ಅಡ್ಡ ಹೆಸರು 3
21. ಗದ್ಯ, ಪದ್ಯ, ಕಾವ್ಯ, ಕತೆ, ಕಾದಂಬರಿ ಬರಹ, ಗ್ರಂಥಗಳ ಒಟ್ಟಿಲು 3
22. ಹಿಂದಿಯವರ ದೊಡ್ಡ ತೂಕ 3
24. ಇದ್ದಕ್ಕಿದ್ದ ಹಾಗೆ ಒಮ್ಮೆಲೇ ಹೋಗಿಬಿಟ್ಟಿದ್ದು 3
25. ಅಳತೆಯ ಪದವಿ 3

ಪದಬಂಧ ಉತ್ತರ -2893

ಮೇಲಿಂದ ಕೆಳಕ್ಕೆ
1. ಮುಂಗಾರುಮಳೆ 2.ಗುರುಗ್ರಾಮ 3.ಚಾರಧಾಮ 4.ಸವಿಗನಸು 7.ಕಾವ್ಯವಾಚಕ 9.ನೆಲಮಂಗಲ 9.ಸಾಗರದಾಚೆ 10.ಗಾಯಕಭಾವ 12.ಕಪಾಲಮೋಕ್ಷ 14.ಜಯಭಾರತಿ 16.ಮರಿಮಗ 18.ಉಪ್ಪಪದ

ಎಡದಿಂದ ಬಲಕ್ಕೆ
1. ಮುಂದೆಸಾಗು 3.ಚಾತುರ್ಮಾಸ 5.ರುದ್ರಾವತಾರ 6.ಮನೋಕಾಮನೆ 9.ಸಾಮಗಾಯನ 11.ಲವಂಗ 13.ಗರಿದಾ 15.ಪಾದಕಮಲ 17.ಚೆಲುವರಾಯ 19.ಮಹಾಮಂಟಪ 20.ಕ್ಷಯರೋಗ 21.ದಳಪತಿ

ಕಿಳಿಪ್ಪಾಟಿನ ನಾಡಿಗೆ ಕುವೆಂಪು 'ದರ್ಶನಂ'

ಎ.ಎಂ. ಶ್ರೀಧರನ್

ಗುಣಸ್ವಭಾವಗಳ ಮೂಲಕ ಮನುಷ್ಯತ್ವವೆಂಬ ಎತ್ತರಕ್ಕೆ ಏರುವ ಪಾತ್ರಗಳನ್ನು ವಾಲ್ಮೀಕಿ ರಾಮಾಯಣದ ಕಥಾತಂತುವಿನ ಆಧಾರದಲ್ಲಿ ಸೃಜಿಸಿರುವ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ಮಲಯಾಳಂ ಭಾಷೆಗೆ ಅನುವಾದಗೊಂಡಿದೆ. ಈ ಕಾರ್ಯವನ್ನು ಕಣ್ಣೂರು ವಿಶ್ವವಿದ್ಯಾಲಯದ ಬಹುಭಾಷಾ ಅಧ್ಯಯನ ಕೇಂದ್ರದ ನಿರ್ದೇಶಕ ಎ.ಎಂ. ಶ್ರೀಧರನ್ ಮಾಡಿದ್ದಾರೆ.

ವಿಕ್ರಂ ಕಾಂತಿಕೆರೆ

ಮಲಯಾಳಂ ಕಾವ್ಯಲೋಕದಲ್ಲಿ ಕಿಳಿಪ್ಪಾಟ್ ಪ್ರಕಾರದ ಹರಿಕಾರ ತುಂಜತ್ತ್ ರಾಮಾನುಜನ್ ಎಳುತ್ತಚ್ಚನ್. ಸಂಸ್ಕೃತದ ಅಧ್ಯಾತ್ಮ ರಾಮಾಯಣದ ಕಥೆಯನ್ನು ಗಿಣಿಯ ಬಾಯಿಂದ ಹೇಳಿಸುವ ವಿಶಿಷ್ಟ ತಂತ್ರ ಕಿಳಿಪ್ಪಾಟ್ ಅರ್ಥಾತ್ ಗಿಣಿ ಹಾಡು. ಕೇರಳದಲ್ಲಿ ಸಾಂಸ್ಕೃತಿಕ ಮತ್ತು ಭಾಷಿಕ ಬೆಳವಣಿಗೆಯ ಪಥದಲ್ಲಿ ನವೋತ್ಥಾನಕ್ಕೆ ಕಾರಣವಾದ ಕೃತಿ ಅಧ್ಯಾತ್ಮ ರಾಮಾಯಣಂ ಕಿಳಿಪ್ಪಾಟ್. ಎಳುತ್ತಚ್ಚನ್ ಕಾವ್ಯಶೈಲಿ ಮತ್ತು ಲಯದಲ್ಲಿ ಕನ್ನಡದ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ಇದೀಗ ಮಲಯಾಳಂ ಓದುಗರ ಕೈಸೇರಲು ಸಜ್ಜಾಗಿದೆ.

ವಾಲ್ಮೀಕಿ ರಾಮಾಯಣದ ಕಥಾತಂತುವಿನ ಆಧಾರದಲ್ಲಿ ವಿಚಾರ, ವಿಜ್ಞಾನ, ನವೋದಯ, ಸರ್ವ ಸಮಾನತೆಯನ್ನು ಪ್ರತಿಪಾದಿಸುವ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕಾವ್ಯದ ಸಾರವನ್ನು ಮಲಯಾಳಂ ಓದುಗರಿಗಾಗಿ ಅನುವಾದ ಮಾಡಿದ್ದಾರೆ ಎ.ಎಂ. ಶ್ರೀಧರನ್. ಹಿಂದಿನ ಮಲಯಾಳಂ ಕಾವ್ಯಗಳಲ್ಲಿ ಕಂಡುಬರುವ ಭಾಷಾ ಶೈಲಿ ಈ ಅನುವಾದದ ಮಹತ್ವದ ಅಂಶ. ಎಳುತ್ತಚ್ಚನ್ ಅವರ ಭಾಷೆ ಮತ್ತು ಲಯ ಶ್ರೀಧರನ್ ಅವರ ಅನುವಾದದಲ್ಲಿ ಎದ್ದುಕಾಣಿಸುತ್ತದೆ.

'ಶ್ರೀ ರಾಮಾಯಣ ದರ್ಶನಂ ಕಾವ್ಯವನ್ನು ಕಾವ್ಯಾತ್ಮಕ ಶೈಲಿಯಲ್ಲಿ ಭಾಷಾಂತರ ಮಾಡುವುದು ಕಷ್ಟ ಎಂದು ಆರಂಭದಲ್ಲಿ ಅನಿಸಿತ್ತು. ಆದ್ದರಿಂದ ಗದ್ಯ ರೂಪಕ್ಕೆ ಮೊರೆಹೋಗಿದ್ದೆ. ತಜ್ಞರ ಸಲಹೆ ಕೇಳಿದಾಗ ಗದ್ಯಾನುವಾದ ಬೇಡವೆಂಬ ಅಭಿಪ್ರಾಯ ಬಂತು. ಹೀಗಾಗಿ ಪದ್ಯರೂಪದಲ್ಲಿ ಬರೆಯಲು ಪ್ರಯತ್ನಿಸಿದೆ. ಆರಂಭದ ಕೆಲವು ಸಾಲುಗಳನ್ನು ಅವಲೋಕಿಸಿದ ಭಾಷಾ ಪಂಡಿತರು ವಳ್ಳತ್ತೋಳ್ (ನಾರಾಯಣ ಮೇನೋನ್) ಅವರ ಕಾವ್ಯದ ಛಾಯೆ ಇದರಲ್ಲಿದೆ ಎಂದರು. ನನ್ನ ಉತ್ಸಾಹ ನೂರ್ಮಡಿಯಾಯಿತು. ಅನುವಾದ ಮುಂದುವರಿದಾಗ ನನ್ನ ಮನಸ್ಸಿನಲ್ಲಿ ಎಳುತ್ತಚ್ಚನ್ ಅವರ ಕಾವ್ಯದ ಭಾಷೆ ಅಲೆಯಾಡುತ್ತಿತ್ತು. ಅದನ್ನೇ ಪ್ರಯೋಗಿಸುವುದು ಸೂಕ್ತ ಎನಿಸಿತು. ಹೀಗಾಗಿ ಅನುವಾದದಲ್ಲಿ ಕಿಳಿಪ್ಪಾಟಿನ ಲಯವನ್ನು ಉಳಿಸಿಕೊಂಡಿದ್ದೇನೆ' ಎನ್ನುತ್ತಾರೆ ಶ್ರೀಧರನ್.

ಸರಳ ರಗಳೆಯನ್ನು ಪುನರ್ ರೂಪಿಸಿಕೊಂಡ ಮಹಾಛಂದಸ್ಸಿನಲ್ಲಿರುವ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕಾವ್ಯ ಮಹೋಪಮೆ, ಛಂದಸ್ಸು, ಅಲಂಕಾರದ ಮೂಲಕ ಸಾಹಿತ್ಯಕವಾಗಿ ಮೇರು ಕೃತಿ ಎನಿಸಿದರೆ ಪ್ರಸ್ತುತಿಯಲ್ಲಿ ವಿಶಿಷ್ಟವೂ ಯುಗಧರ್ಮದಲ್ಲಿ ಸಾಮಾಜಿಕ ಕಾಳಜಿಯುಳ್ಳದ್ದೂ ಆಗಿ ಸಾರ್ವಕಾಲಿಕ ಎನಿಸಿದೆ. ಕುವೆಂಪು ಕಾವ್ಯದ ಈ 'ದರ್ಶನ'ವೇ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಶ್ರೀಧರನ್ ಅವರಿಗೆ ಪ್ರಮುಖ ಪ್ರೇರಣೆ.

'ವಚನ ಸಾಹಿತ್ಯದ ಅನುವಾದ ಮಾಡುವಾಗ ಕುವೆಂಪು ಸಾಹಿತ್ಯ ಗಮನಕ್ಕೆ ಬಂತು. ಅವರ ಕೆಲವು ಕವಿತೆಗಳನ್ನು ಅನುವಾದ ಮಾಡಿದೆ. ಆಗ 'ಶ್ರೀ ರಾಮಾಯಣ ದರ್ಶನಂ' ಓದುವ ಸಂದರ್ಭ ಒದಗಿತು. ಈ ಕಾವ್ಯ ಪ್ರಸ್ತುತ ಕಾಲಘಟ್ಟಕ್ಕೆ, ವಿಶೇಷವಾಗಿ ಕೇರಳದ ರಾಜಕೀಯ, ಸಾಮಾಜಿಕ ಸ್ಥಿತ್ಯಂತರದ ಸಂದರ್ಭಕ್ಕೆ ಅತ್ಯಗತ್ಯ ಎನಿಸಿತು. ಈ ಮಹಾಕಾವ್ಯವನ್ನು ಸಾಹಿತ್ಯ ಕೃತಿಯಾಗಿ ಮಾತ್ರವಲ್ಲ, ಸಾಮಾಜಿಕ ರೋಗಕ್ಕೆ ಚಿಕಿತ್ಸಕ ಗುಳಿಗೆಯಾಗಿಯೂ ಕಂಡಿದ್ದೇನೆ' ಎನ್ನುತ್ತಾರೆ ಅವರು.

'ರಾಜಕೀಯ ಕೊಲೆಗಳು ನಡೆಯುವ, ತಂದೆ–ಮಗ, ಮಗಳು–ತಾಯಿ, ಸಹೋದರ–ಸಹೋದರಿ ಮುಂತಾದ ಯಾವ ಸಂಬಂಧಗಳನ್ನೂ ಲೆಕ್ಕಿಸದೆ ನರಹತ್ಯೆಗಳಿಗೆ ಸಾಕ್ಷಿಯಾಗುವ, ಧಾರ್ಮಿಕ ಅಸಹಿಷ್ಣುತೆ ಮೆರೆಯುವ ಇಂದಿನ ಸಮಾಜಕ್ಕೆ 'ಶ್ರೀ ರಾಮಾಯಣ ದರ್ಶನಂ'ನಂಥ ಕೃತಿಯೊಂದರ ಅಗತ್ಯವಿದೆ.



ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ಮಲಯಾಳಂ ಕೃತಿಯ ರಕ್ಷಾಪುಟ



ಶ್ರೀ ರಾಮಾಯಣ ದರ್ಶನಂ

ಅನಾಚಾರಗಳನ್ನು ಕಂಡು ಸುಮ್ಮನಿರುವ ಹಾಗೂ ಕೆಲವೊಮ್ಮೆ ಅದನ್ನು ಸಮರ್ಥಿಸುವ ಸಮಾಜವು ಪಶ್ಚಾತ್ತಾಪಪಡುವ ಗುಣವನ್ನೇ ಕಳೆದುಕೊಂಡಿದೆ. ಅವರವರ ತಪ್ಪುಗಳ ಭಾರವನ್ನು ಹೊತ್ತುಕೊಳ್ಳಲು ಯಾರೂ ಸಿದ್ಧರಿಲ್ಲ. ತಪ್ಪುಗಳನ್ನು ಒಪ್ಪಿಕೊಂಡರೆ ಎಲ್ಲರೂ ಮನುಷ್ಯರಾಗಬಲ್ಲರು. ಪಶ್ಚಾತ್ತಾಪದ ಮೂಲಕ ಮಾನವನಾಗುವ ಉದಾತ್ತ ಚಿಂತನೆಯ ಪಾಠ 'ಶ್ರೀ ರಾಮಾಯಣ ದರ್ಶನಂ' ಕಾವ್ಯದಲ್ಲಿದೆ. ರಾಮನನ್ನು ಕುವೆಂಪು ದೇವರಾಗಿ ಕಂಡಿಲ್ಲ. ಅವರ ರಾಮಾಯಣದಲ್ಲಿ ರಾಮ ಲೋಕಪ್ರಿಯ. ಬೇಡನಾಗಿದ್ದ ವಾಲ್ಮೀಕಿಗೆ ಕವಿತ್ವ ತಂದುಕೊಟ್ಟ ರಾಮಾಯಣದ 'ದರ್ಶನ'ದಲ್ಲಿ ಕುವೆಂಪು ಮಾನವೀಯ ಪಾತ್ರಗಳನ್ನು ಚಿತ್ರಿಸಿದ್ದಾರೆ. ತಪ್ಪಿನ ಅರಿವಾದ ಮಂಥರೆಗೆ ಎದುರಾಗುವ ಕಾಡಿನ ಬೆಂಕಿ ವಾಸ್ತವದಲ್ಲಿ ಪಶ್ಚಾತ್ತಾಪದ ಅಗ್ನಿ. ಭರತನ ಮುಂದೆ ಆಕೆ ದೈವತ್ವದ ಎತ್ತರಕ್ಕೆ ಏರುತ್ತಾಳೆ. ವಾಲಿ–ಸುಗ್ರೀವ ಪ್ರಸಂಗದಲ್ಲೂ ಇಂಥ ಉದಾತ್ತ ಭಾವ ಇದೆ. ರಾವಣನಿಗೆ ಕನಸಿನಲ್ಲಿ ಸೀತೆ ತಾಯಿಯಾಗಿ ಕಾಣುವುದೂ, ಕುಂಭಕರ್ಣನೊಂದಿಗೆ ತಾನು ಕೂಡ ಸೀತಾ'ಮಾತೆ'ಯ ಮೊಲೆಹಾಲು ಕುಡಿಯುವಂತೆ ಭಾಸವಾಗುವುದೂ ಇಂಥ ಉದಾತ್ತ ಚಿಂತನೆಗಳ ಫಲ. ಒಟ್ಟು 301 ಬಗೆಯ ರಾಮಾಯಣಗಳು ಇದೆ ಎನ್ನಲಾಗುತ್ತದೆ. ಅಲ್ಲೆಲ್ಲೂ ಇಂಥ ಪಾತ್ರಗಳು ಬರುವುದಿಲ್ಲ. ಆದ್ದರಿಂದ ರಾಮಾಯಣಗಳಲ್ಲೇ ಕುವೆಂಪು ರಾಮಾಯಣ ಅತಿವಿಶಿಷ್ಟ. ಪಾಶ್ಚಾತ್ಯ ಮತ್ತು ಪೌರಾತ್ಯ ಚಿಂತನೆಗಳ ಸಮನ್ವಯವಿರುವ ಈ ಕೃತಿಯಲ್ಲಿ ವಿಶ್ವಮಾನವ ವಾದ ಎದ್ದುಕಾಣುತ್ತದೆ. ಇದೆಲ್ಲವೂ ಅನುವಾದಕ್ಕೆ ಪ್ರೇರಣೆಯಾಯಿತು' ಎಂಬುದು ಅವರ ವಿವರಣೆ.

ಒಂಬತ್ತು ತಿಂಗಳಲ್ಲಿ ಶ್ರೀಧರನ್ ಅವರು ಅನುವಾದ ಕಾರ್ಯ ಪೂರ್ಣಗೊಳಿಸಿದ್ದಾರೆ. 'ಮೂಲ ಕೃತಿಯ ನಡೆಗೆ ಧಕ್ಕೆಯಾಗಬಾರದು ಎಂಬ ಕಾಳಜಿ ಇತ್ತು. ಅದನ್ನು ಪಾಲಿಸಿದ್ದೇನೆ' ಎಂದು ಹೇಳುವ ಅವರ ಮಾತು ಪ್ರತಿ ಸಾಲಿನಲ್ಲೂ ಕಾಣಿಸುತ್ತದೆ.

ನಾಗಚಂದ್ರನಿಂದ ಕುವೆಂಪುವರೆಗೆ ಕನ್ನಡ ರಾಮಾಯಣದ ಹರಹು ಇದೆ. ಒಬ್ಬೊಬ್ಬರದು ಒಂದೊಂದು ಬಗೆಯ ದರ್ಶನ. ಧರ್ಮದರ್ಶನ ಮತ್ತು ಜೀವನಸಿದ್ಧಾಂತದಲ್ಲೂ ಒಬ್ಬೊಬ್ಬರದು ಒಂದೊಂದು ಬಗೆ. ನಾಗಚಂದ್ರನು ರಾವಣನ ಮೂಲಕ ಕರ್ಮದ ಬಲವನ್ನು ಸಾಂಕೇತಿಕವಾಗಿ ವ್ಯಕ್ತಪಡಿಸಿದರೆ, ಕುಮಾರ ವಾಲ್ಮೀಕಿ ಕಾವ್ಯನಾಮದ ನರಹರಿಯು ವಿಷ್ಣುವಿನ ಆಧಿಪತ್ಯ ಪ್ರಕಟಿಸಲು ರಾಮಾಯಣವನ್ನು ಬಳಸಿಕೊಂಡರು. ಮಾಸ್ತಿಯವರು ಶ್ರೀರಾಮ ಪಟ್ಟಾಭಿಷೇಕದಲ್ಲಿ ಸಾಮಾಜಿಕ ಕಾಳಜಿಯನ್ನೂ ಜೀವನ ಸಿದ್ಧಾಂತವನ್ನೂ ಪ್ರಕಟಪಡಿಸಿದ್ದಾರೆ ಎಂಬುದು ಕನ್ನಡ ರಾಮಾಯಣ ಕಾವ್ಯ ಪರಂಪರೆಯ ಬಗ್ಗೆ ಶ್ರೀಧರನ್ ಅವರ ಅಭಿಪ್ರಾಯ.

ಕಥೆ

ಮೂಲ: ಬಾಬು ಭಾಡವಾ
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಅವರ
ವಂಶವೃಕ್ಷ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ದೊಡ್ಡಿ ಶೇಖರ
ಅವರ
ಕೋಟೆಯೊಡೆದು ಬರಿದಾಗಲಿ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ಪಂಚಗವ್ಯವೆಂಬ ಏಕವ್ಯಕ್ತಿಯ ಪಂಚಾಮೃತ

ರುದ್ರೇಶ್ ಅದರಂಗಿ

ಚಿತ್ರಗಳು: ತಾಯಿ ಲೋಕೇಶ್

ಮಂಜು ಮುಸುಕಿದ ವೇದಿಕೆಯಲ್ಲಿ ಪ್ರಕಾಶಮಾನವಾದ ಬೆಳಕು. ಈ ಹಿನ್ನೆಲೆಯಲ್ಲಿ ಮಧುರ ನಿನಾದ. 'ಪಂಚ ಪಂಚ ಪ್ರಪಂಚ'ವೆಂದು ಉಲಿಯುತ್ತ ಬಾಲ ಸೂರ್ಯನಂತೆ ಮೂಡುವ 'ಗೋಕುಲ ಸಹೃದಯ' ರಂಗದ ಮೇಲೆ ವ್ಯಾಪಿಸುತ್ತಲೇ ಪ್ರೇಕ್ಷಕರ ಮನಸ್ಸಿನಲ್ಲಿಯೂ ಮೂಡಿ ಮೆಚ್ಚುಗೆಯ ಕರತಾಡನಕ್ಕೆ ಭಾಜನನಾಗಿದ್ದು, ಇತ್ತೀಚೆಗೆ ಬೆಂಗಳೂರಿನ ಕಲಾಗ್ರಾಮದಲ್ಲಿ ಪ್ರದರ್ಶಿತವಾದ ಕಾಜಾಣ ಪ್ರಸ್ತುತಿಯ ಪಂಚಕಾವ್ಯಗಳ ಅಭಿನಯಗುಚ್ಛ 'ಪಂಚಗವ್ಯ' ಏಕವ್ಯಕ್ತಿ ರಂಗ ಪ್ರಯೋಗದಲ್ಲಿ.

ಕಾವ್ಯ-ಪುರಾಣಗಳಲ್ಲಿ ಅಸಾಧಾರಣ ಸಾಧನೆಯಿಂದ ಪ್ರಸಿದ್ಧರಾಗಿರುವ ಪ್ರಹ್ಲಾದ, ನಚಿಕೇತ, ಧ್ರುವ, ಅಷ್ಟಾವಕ್ರ ಹಾಗೂ ಬಾಲಕ ಶಂಕರರ ಅಪ್ರತಿಮ ಪರ್ವ ಪ್ರಸಂಗಗಳ ಪಂಚಮುಖಿ ಅನಾವರಣ 'ಪಂಚಗವ್ಯ' ನಾಟಕವಾಗಿದೆ. ಹಿರಣ್ಯಕಶಿಪುವಿನ ಮಗನಾದ ಬಾಲಕ ಪ್ರಹ್ಲಾದ ವಿಷ್ಣುವಿನ ಭಕ್ತ. ಮುಗ್ಧಭಕ್ತಿಯ ದೃಢತೆ ಮತ್ತು ಅನನ್ಯ ಶ್ರದ್ಧಾವಂತನಾದ ಪ್ರಹ್ಲಾದ ತಂದೆಯ ಕೋಪದ ಅಗ್ನಿದಿವ್ಯವನ್ನು ಗೆದ್ದವನು. ಹಿರಣ್ಯಕಶಿಪುವಿಗೆ ಕಂಬದಲ್ಲಿಯೂ ವಿಷ್ಣುವನ್ನು ಕಾಣಿಸಿದವನು. ಭಕ್ತಿ ಮತ್ತು ವ್ಯಗ್ರತೆಗಳ ಬೆಂಕಿಯ ಮಳೆಯಲ್ಲಿ ಅರಳಿದ ಪಾರಿಜಾತವಾಗಿ ಹೊರಹೊಮ್ಮುತ್ತಾನೆ. ಮುಗ್ಧ ಭಕ್ತ ಪ್ರಹ್ಲಾದನಾಗಿ, ಅತ್ತ ಉಗ್ರ ನರಸಿಂಹನಾಗಿ ಎರಡೂ ವಿರುದ್ಧ ಭಾವಗಳ ಅಭಿನಯ ಕಷ್ಟಸಾಧ್ಯವಾದುದನ್ನು 'ಗೋಕುಲ' ಲೀಲಾಜಾಲವಾಗಿ ಅಭಿನಯಿಸಿದ್ದಾನೆ.

ಅರುಣಿಯೆಂಬ ಉದ್ದಾಲಕ ಮುನಿಯ ಮಗನಾದ ನಚಿಕೇತ, ತಂದೆಯನ್ನು ಪ್ರಶ್ನಿಸಿದ್ದಕ್ಕಾಗಿ ಯಮಪುರಿಗೆ ಬಂದು ಯಮನಿಗೆ ಪ್ರಶ್ನೆಗಳ ಮಳೆಗರೆಯುತ್ತಾ ಕರುಣೆಯುಕ್ಕಿಸುತ್ತಾನೆ. ಯಮನ ಪರೀಕ್ಷೆಯನ್ನು ಗೆದ್ದ ನಚಿಕೇತ ಜ್ಞಾನ ಸಂಪತ್ತನ್ನು ಆಶೀರ್ವಾದವಾಗಿ ಪಡೆದವನು. ಒಮ್ಮೆ ಯಮನಾಗಿ ದರ್ಪ ಮೆರೆದರೆ, ನಚಿಕೇತನಾಗಿ ದೃಢತೆ ಮತ್ತು ಮುಗ್ಧತೆಯನ್ನು ಅಭಿನಯಿಸುವ 'ಗೋಕುಲ'ನ ಜುಗಲಬಂದಿ ಪ್ರೇಕ್ಷಕರಿಗೆ ರಸದೌತಣವೇ ಸರಿ. ಉತ್ತಾನಪಾದನ ಮಗನಾದ ಬಾಲಕ ಧ್ರುವ ತಂದೆಯ ತೊಡೆಯನ್ನೇರಿದ್ದಕಾಗಿ ಚಿಕ್ಕಮ್ಮನ ಅವಕೃಪೆ ಮತ್ತು ಕೋಪಕ್ಕೆ ತುತ್ತಾಗುತ್ತಾನೆ. ತನಗೆ ದಕ್ಕಬೇಕಾದ ಸ್ಥಾನವನ್ನು ಪಡೆಯಲು ನಾರದರ ಸಲಹೆಯಂತೆ ವಿಷ್ಣುವನ್ನು ಧ್ಯಾನಿಸಿ ರಾಜ ಪದವಿಯನ್ನು ಪಡೆದವನು. 'ಗೋಕುಲ' ಬಾಲಕ ಧ್ರುವನಾಗಿ ಪರಕಾಯ ಪ್ರವೇಶ ಮಾಡಿದ್ದಾನೆ. 'ಓಂ ನಮೋ ಭಗವತೇ ವಾಸುದೇವಾಯ' ವಯಸ್ಸಿಗೆ ಮೀರಿದ ಮಂತ್ರೋಚ್ಚಾರಣೆ ಅತ್ಯಂತ ಸುಸಂಬದ್ಧವಾಗಿದ್ದವಾಗಿದೆ.

ಕಹೋದನನ ಮಗನಾದ ಅಂಗವಿಕಲ ಬಾಲಕ ಅಷ್ಟಾವಕ್ರ ವಂದಿನನ ಯಜ್ಞ ಪ್ರವೇಶಿಸಲು ತಡೆಯಲ್ಪಡುತ್ತಾನೆ. ಅಸಾಧಾರಣ ಪ್ರತಿಭಾವಂತನಾದ ಅಷ್ಟಾವಕ್ರ ವಾದದಲ್ಲಿ ವಂದಿನ್‌ನನ್ನು ಸೋಲಿಸಿ ಯಜ್ಞಕ್ಕೆ ಪ್ರವೇಶ ಪಡೆದುದಲ್ಲದೆ, ತಂದೆಯನ್ನು ಮರಳಿಪಡೆಯುತ್ತಾನೆ. ಅಂಗವಿಕಲತೆಯ ಅಷ್ಟಾವಕ್ರನಾಗಿ 'ಗೋಕುಲ'ನದು ಅಸಾಧಾರಣ ಅಭಿನಯ. ಕೈ, ಕಾಲು, ತಲೆ, ಕಣ್ಣು, ಬಾಯಿ, ಹೊಟ್ಟೆ, ತೊದಲುಮಾತು ಪ್ರೇಕ್ಷಕರ ಹುಬ್ಬೇರುವಂತೆ ಮಾಡಿದೆ.

ಬಾಲ್ಯದಲ್ಲಿಯೇ ಸನ್ಯಾಸತ್ವವನ್ನು ಸ್ವೀಕರಿಸಿದ ಶಂಕರ ತಾಯಿಯ ಅಂತ್ಯಕ್ರಿಯೆಗೆ ಬ್ರಾಹ್ಮಣರನ್ನು ಅಂಗಲಾಚಿದಾಗ, ನಿರಾಕರಿಸಿ ನಿಂದಿಸುತ್ತಾರೆ. ಕ್ರುದ್ಧನಾದ ಬಾಲಕ ಬ್ರಾಹ್ಮಣತ್ವಕ್ಕೆ ಮಾನವೀಯ ಮೌಲ್ಯಗಳ ಭಾಷ್ಯವನ್ನು ಬರೆಯುತ್ತಾರೆ. 'ಗೋಕುಲ' ಬಾಲಕ ಶಂಕರನಾಗಿ ಅಮೋಘ ಅಭಿನಯ. ಮುಗ್ಧತೆ ಮತ್ತು ಕ್ರುದ್ಧತೆಗಳೆರಡೂ ಹದವಾಗಿ ಮೇಳೈಸಿವೆ.

'ಗೋಕುಲ ಸಹೃದಯ' ನಾಲ್ಕನೇ ವಯಸ್ಸಿನಲ್ಲಿಯೇ ರಂಗವೇರಿದವನು. 'ಗೋಕುಲ' ಅಭಿನಯದ 'ಚಿಟ್ಟೆ' ಏಕವ್ಯಕ್ತಿ ಪ್ರಯೋಗ 120 ಪ್ರದರ್ಶನಗಳಿಂದ ದಾಖಲೆಗಳನ್ನು ಮಾಡಿದ್ದು, 'ಪಂಚಗವ್ಯ' ಪಂಚಾಮೃತವನ್ನುಣಬಡಿಸುತ್ತದೆ. ಇದುವರೆಗೆ ವಯಸ್ಕರು ಏಕವ್ಯಕ್ತಿ ನಾಟಕ ಅಭಿನಯಿಸಿದ್ದರೂ ಬಾಲಕನಾಗಿ 'ಗೋಕುಲ ಸಹೃದಯ' ಮೊದಲಿಗನಾಗಿದ್ದಾನೆ. ಸುಮಾರು ಒಂದು ಗಂಟೆ ನಲ್ವತ್ತೆಂಟು ನಿಮಿಷಗಳ 'ಪಂಚಗವ್ಯ' ನಾಟಕದಲ್ಲಿ ಇವನದು ಅಸಾಧಾರಣ ಅಭಿನಯ. ಸಂಭಾಷಣೆಯಲ್ಲಿ ತೊದಲದೆ, ಸುದೀರ್ಘಾವಧಿಯಲ್ಲೂ ಬಳಲದೆ ಸಮರ್ಥವಾಗಿ ಶಾರೀರ ಕಾಪಾಡಿಕೊಂಡಿದ್ದಾನೆ. ಪಾತ್ರದಿಂದ ಮತ್ತೊಂದು ಪಾತ್ರಕ್ಕೆ ಸಾಗುವ 'ಗೋಕುಲ' ವಯಸ್ಸಿಗೆ ಮೀರಿದ ವೀರ, ರೌದ್ರ, ಗಂಭೀರ, ಭಯಾನಕ, ಭೀಭತ್ಸ ರಸಗಳನ್ನು ಮನೋಜ್ಞವಾಗಿ ಅಭಿನಯಿಸಿದ್ದಾನೆ. ಪ್ರಹ್ಲಾದನಾಗಿ ಅಂಬೆಗಾಲಿಡುತ್ತಾ ಪ್ರವೇಶಿಸಿ, ಪಾತ್ರದಿಂದ ಪಾತ್ರಕ್ಕೆ ತ್ರಿವಿಕ್ರಮನಾಗಿದ್ದಾನೆ. ಪೌರಾಣಿಕ ವಸ್ತುವನ್ನು ಹದವಾಗಿ ಸಮಕಾಲೀನ ಸಂದರ್ಭಕ್ಕೆ ಒಗ್ಗಿಸಿರುವ ಎಸ್.ಎಲ್.ಎನ್. ಸ್ವಾಮಿ ಅವರು 'ಪಂಚಗವ್ಯ' ನಾಟಕವನ್ನು ರಚಿಸಿ, ವಿನ್ಯಾಸಗೊಳಿಸಿ, ಸಂಗೀತಕ್ಕೆ ಅಳವಡಿಸಿ ನಿರ್ದೇಶನ ಮಾಡಿದ್ದಾರೆ. ರಂಗದಲ್ಲಿ ಎರಡು ಮಟ್ಟಿನ ಪ್ಲಾಟ್‌ಫಾರ್ಮ್, ಮಧ್ಯದಲ್ಲಿ ಆಸೀನ, ಎರಡೂ ಬದಿಗಳಲ್ಲಿ ಶಂಖ ಮತ್ತು ಚಕ್ರ ರಂಗಸಜ್ಜಿಕೆ ನಿರ್ದೇಶಕರ ಕಲಾಪ್ರೌಢಿಮೆಗೆ ಸಾಕ್ಷಿ. 'ಗೋಕುಲ'ನ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಪುರಾಣವನ್ನು ನೋಡುವ ಅವರ ದೃಷ್ಟಿಕೋನ ಪುರಾಣವನ್ನು ಮಥಿಸಿ ಮಾನವೀಯತೆಯ ಅಮೃತವನ್ನು ಹೊರತೆಗೆಯುತ್ತದೆ. ವಸ್ತುವಿಗೆ ಸೂಕ್ತವಾದ ಕಥನ, ಕಥನವನ್ನು ಲೀಲಾಜಾಲವಾಗಿ ಅಭಿನಯಿಸುವ 'ಗೋಕುಲ ಸಹೃದಯ', ರವಿಶಂಕರರ ಬೆಳಕು, ಅಭಿಷೇಕ್ ಮತ್ತು ಗೌತಮ್ ರವರ ಪ್ರಸಾದನ, ಶ್ರೀನಿ ಸಂಪತ್ ಲಕ್ಷ್ಮಿಯವರ ರಂಗಸಜ್ಜಿಕೆ, ಲೋಕೇಶ್ ಕುಮಾರ್ ಅವರ ಸಂಗೀತ ನಿರ್ವಹಣೆ ಎಲ್ಲವೂ ಸೇರಿ 'ಪಂಚಗವ್ಯ' ರಸದೌತಣವಾಗಿದೆ.

ಮೊದಲ ಓದು

ಹೆಸರಿನಲ್ಲಷ್ಟೇ 'ಕಲ್ಯಾಣ' ಸಾಕೇ?

ಹೆಸರಿನಲ್ಲಷ್ಟೇ 'ಕಲ್ಯಾಣ' ಹೊತ್ತಿರುವ ಕಲ್ಯಾಣ ಕರ್ನಾಟಕ ಪ್ರದೇಶವು (ಹೈದರಾಬಾದ್ ಕರ್ನಾಟಕ) ಪ್ರಾದೇಶಿಕ ಅಸಮಾನತೆ ಕಾರಣಕ್ಕಾಗಿ ಅಭಿವೃದ್ಧಿಯಿಂದ ಹಿಂದುಳಿದಿದೆ. ಈ ಭಾಗದಲ್ಲಿ ಅಭಿವೃದ್ಧಿಗಿರುವ ತೊಡಕು, ಸವಾಲುಗಳು ಮತ್ತು ಸಾಧ್ಯತೆಗಳ ಕುರಿತು 'ಕಲ್ಯಾಣ ಕರ್ನಾಟಕದ ಅರಣ್ಯರೋದನ' ಕೃತಿ ಸಮರ್ಥವಾಗಿ ನಿರೂಪಿಸುತ್ತದೆ.

ವೃತ್ತಿಯಲ್ಲಿ ಪತ್ರಕರ್ತರಾಗಿರುವ ಲೇಖಕ ತಾವು ಕಣ್ಣಾರೆ ಕಂಡ ಕಲ್ಯಾಣ ಕರ್ನಾಟಕದ ದುಃಸ್ಥಿತಿಯನ್ನು ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಡಿ.ಎಂ. ನಂಜುಂಡಪ್ಪ ವರದಿಯ ಶಿಫಾರಸು ಸೂಚಿಸಿರುವ ಈ ಭಾಗದ ಬಹುತೇಕ ತಾಲ್ಲೂಕುಗಳಲ್ಲಿ ಅಭಿವೃದ್ಧಿಯ ಗಂಧಗಾಳಿ ಇನ್ನೂ ಸೋಕಿಲ್ಲ. ಜನಪ್ರತಿನಿಧಿಗಳು, ಆಡಳಿತ ಶಾಹಿಯ ನಿರ್ಲಕ್ಷ್ಯದಿಂದಾಗಿ ಹಿಂದುಳಿದ ಎಂಬ ಹಣೆಪಟ್ಟಿ ಈ ಭಾಗದಿಂದ ಇನ್ನೂ ಕಳಚಿಲ್ಲ. 371 (ಜೆ) ಸೌಲಭ್ಯ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗಳಿದ್ದರೂ ವಾಸ್ತವದಲ್ಲಿ ಈ ಭಾಗದಲ್ಲೇಕೆ ಮೂಲಸೌಕರ್ಯಗಳ ಕೊರತೆ ನೀಗಿಲ್ಲ? ಬಡತನ, ಸಾಕ್ಷರತೆ, ಮಾನವ ಅಭಿವೃದ್ಧಿಯಲ್ಲೇಕೆ ಹಿಂದುಳಿದೆ? ಎನ್ನುವ ಕುರಿತು ಕೃತಿ ವಿವರವಾಗಿ ಚರ್ಚಿಸುತ್ತದೆ. ಜಿಐ ಟ್ಯಾಗ್ ಹೊಂದಿರುವ ಕಮಲಾಪುರದ ಕೆಂಪು ಬಾಳೆ, ಕಲಬುರಗಿಯ ತೊಗರಿ, ಕಿನ್ನಾಳದ ಗೊಂಬೆ, ಬೀದರ್‌ನ ಬಿದ್ರಿ ಕಲೆಗಳಿಗೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಾರುಕಟ್ಟೆ ಒದಗಿಸಲಾಗದ ಬಗ್ಗೆಯೂ ಬೆಳಕು ಚೆಲ್ಲಲಾಗಿದೆ. ಉದ್ಯೋಗಾವಕಾಶಗಳ ಕೊರತೆಯಿಂದ ಇಂದಿಗೂ ಈ ಭಾಗದಲ್ಲಿ ಜನರು ಗುಳೆ ಹೋಗುವುದನ್ನು ತಪ್ಪಿಸಲಾಗದ ವಾಸ್ತವ ಸ್ಥಿತಿಗೆ ಕೈಗನ್ನಡಿಯಂತಿದೆ ಈ ಕೃತಿ. ನಿಜಾಮರ ಆಳ್ವಿಕೆ ಕೊನೆಗೊಂಡರೂ ಈ ಭಾಗ ಇನ್ನೂ ಸರ್ವಾಂಗೀಣ ಅಭಿವೃದ್ಧಿಯಾಗುತ್ತಿಲ್ಲ ಎಂಬ ಕಲ್ಯಾಣ ಕರ್ನಾಟಕದ ಜನತೆಯ ಕೂಗು ಅಕ್ಷರಶಃ ಅರಣ್ಯರೋದನವಾಗಿದೆ ಎಂಬುದನ್ನು ಕೃತಿ ಮನಗಾಣಿಸುತ್ತದೆ.



ಪು: 184
₹200

ಕಲ್ಯಾಣ ಕರ್ನಾಟಕದ ಅರಣ್ಯರೋದನ
ಲೇ: ಶ್ರೀನಿವಾಸ ಸಿರನೂರಕರ್
ಪ್ರ: ಶ್ರೀವಿಜಯ ಪ್ರಕಾಶನ
ಸಂ: 9972450853

ವೃತ್ತಿಪರ ಪ್ರೇಕ್ಷಕಿಯ ದೃಷ್ಟಿಯಲ್ಲಿ ಯಕ್ಷಗಾನ



ಪು: 148
₹170

ವೃತ್ತಿಪರ ಪ್ರೇಕ್ಷಕಿಯ ಟಿಪ್ಪಣಿಗಳು
ಲೇ: ಕೃತಿ ಆರ್. ಪುರಪ್ಪೇಮನೆ
ಪ್ರ: ಅಹರ್ನಿಶಿ ಪ್ರಕಾಶನ
ಸಂ: 9449174662

ಒಂದು ಕಡೆ ಹರಕೆ ಹಾಗೂ ಧಾರ್ಮಿಕ ಆಚರಣೆ, ಮತ್ತೊಂದು ಕಡೆ ವಾಣಿಜ್ಯೀಕರಣ - ಇವುಗಳ ನಡುವೆ ಯಕ್ಷಗಾನ ಕಲೆಯ ಅಂದಗೆಡುತ್ತಿದೆ ಎಂಬ ಕೂಗುಗಳೆಲ್ಲವೂ ಕಳೆದೊಂದು ಶತಮಾನದಿಂದ ಕೇಳಿಬರುತ್ತಲೇ ಇದೆ, ಚರ್ಚೆಯೂ ಆಗುತ್ತಿದೆ, ಸಾಕಷ್ಟು ಬರಹಗಳೂ ಬಂದಿವೆ. ಒಂದು ಕಲೆಯು ಒಂದು ಪ್ರದೇಶಕ್ಕೆ, ಆವರಣಕ್ಕೆ ಸೀಮಿತವಾಗಿದ್ದಾಗ, ಕಲೆಯನ್ನು ಬೆಳೆಸಿದ ಸಮಾಜವೇ (ಅಂದರೆ ಪ್ರೇಕ್ಷಕರು) ಕಲೆಯ ಅಂದ-ಚೆಂದ, ಸರಿತಪ್ಪಿನ ಮಾನದಂಡಗಳನ್ನು ಸೃಷ್ಟಿಸಿರುತ್ತದೆ. ಆದರೆ ಕಲೆಯನ್ನು ಕಟ್ಟಿದ ಸಮಾಜವೇ ಪಲ್ಲಟಕ್ಕೊಳಗಾಗಿ, ಕಲೆಯಲ್ಲಿ ಬದಲಾವಣೆ ಕಂಡುಬಂದಾಗ, ಈ ಮಾನದಂಡಗಳೂ ಬದಲಾಗುತ್ತಿರುತ್ತವೆ ಎಂಬ ಮಾತಿನಿಂದಲೇ ಕೃತಿ ಪುರಪ್ಪೇಮನೆ ಅವರು ತಮ್ಮ ಪುಸ್ತಕದ ಬಗೆಗೆ ಸ್ಥೂಲ ನೋಟವನ್ನು ನೀಡಿದ್ದಾರೆ.

ಯಕ್ಷಗಾನದ ಜನಪ್ರಿಯ, ಹರಕೆ ಮತ್ತು ಪರಿಷ್ಕೃತ - ಹೀಗೆ ಮೂರು ರೂಪಗಳ ನಡುವಿನ ಸಂಘರ್ಷವು ಹೊಸ ಮಾನದಂಡಗಳನ್ನು ಸೃಷ್ಟಿಸಿಕೊಳ್ಳುತ್ತಿವೆ ಎಂಬ ಅನಿಸಿಕೆಯೊಂದಿಗೆ, ವೃತ್ತಿಪರ ಕಲಾವಿದರಿಗಿಂತ ಭಿನ್ನವಾಗಿ, ವೃತ್ತಿಪರ ಪ್ರೇಕ್ಷಕಿಯಾಗಿ ಯಕ್ಷಗಾನವನ್ನು ಕಂಡ ಬಗೆಯನ್ನು ಅವರು ವಿವರಿಸಿದ್ದಾರೆ. ಹಿರಿಯ ಕಲಾವಿದರನ್ನು ಮತ್ತು ಸಂಘಟಕರನ್ನು ಮಾತನಾಡಿಸಿ, ತಮ್ಮ ಅನುಭವವನ್ನೂ ಸೇರಿಸಿ, ಒಂದು ಕಲೆಯ ಬೆಳವಣಿಗೆಯನ್ನೂ, ಅದು ಸಾಗಿ ಬಂದ ಹಾದಿಯನ್ನೂ ಸರಿಯೋ ತಪ್ಪೋ ಎಂಬ ಜಿಜ್ಞಾಸೆಯಿಂದ ಮತ್ತು ಸಂಶೋಧನಾ ದೃಷ್ಟಿಯಿಂದ ವಿವರಿಸಿದ್ದಾರೆ.

ರಂಜನೆಯೆನ್ನುವುದು ಇರಬೇಕಾದರೆ ರಂಜನೆಯಿಲ್ಲದ್ದೂ ಇರಬೇಕಾಗುತ್ತದೆ ಎಂಬ ಅವರ ಮಾತು ಚಿಂತನೆಗೆ ಹಚ್ಚುತ್ತದೆ. ಹಿಂದಿನ ಮತ್ತು ಇಂದಿನ ಕಾಲದಲ್ಲಿ ವಿರಾಮ ಮತ್ತು ಕೆಲಸಕ್ಕಿರುವ ಅಂತರ, ಅದು ಈಗ ಬದಲಾದ ಬಗೆಯೊಂದಿಗೆ ಯಕ್ಷಗಾನದ ಸ್ಥಿತ್ಯಂತರ ಕುರಿತು ಬೆಳಕು ಚೆಲ್ಲಲಾಗಿದೆ. ಈ ಪುಸ್ತಕದಲ್ಲಿರುವ 23 ಲೇಖನಗಳಲ್ಲಿ, ಯಕ್ಷಗಾನವು ಜಾನಪದವೋ, ಶಾಸ್ತ್ರೀಯವೋ ಎಂಬ ಜಿಜ್ಞಾಸೆಯಿದೆ, ಪ್ರೇಕ್ಷಕಾನುಸಂಧಾನವಿದೆ, ಮಡಿವಂತಿಕೆಯ ರಂಗಸ್ಥಳದಲ್ಲಿ ಹೊಸ ಪ್ರಸಂಗಗಳ ಗ್ರಹಿಕೆಯಿದೆ, ರಾಮಾಂಜನೇಯ, ಭಾರ್ಗವ ವಿಜಯ ಮತ್ತು ಬೇಡರ ಕಣ್ಣಪ್ಪ- ಈ ಮೂರು ಪ್ರಸಂಗಗಳ ಪ್ರದರ್ಶನದ ಅವಲೋಕನವೂ ಇದೆ.

ಸಿಂಧನೂರು ಹಸಿರುಡುಗೆ ಪವಾಡ

10ನೇ ಪುಟದಿಂದ...

ವೇಗವಾಗಿ, ಎತ್ತರವಾಗಿ ಬೆಳೆಯಬಲ್ಲ, ಅಗಲವಾಗಿ ನೆರಳು ನೀಡಬಲ್ಲ, ಹೆಚ್ಚು ಆಮ್ಲಜನಕ ಉತ್ಪಾದಿಸಬಲ್ಲ, ಫಾರ್ಮ್‌ನಲ್ಲಿಯೇ ಎರಡು ವರ್ಷ ಬೆಳೆದಿದ್ದ 15 ಅಡಿ ಎತ್ತರದ 10 ಸಾವಿರ 'ಫಿಲ್ಟೋ ಫಾರ್ಮ್' ಸಸಿಗಳನ್ನು ಆಂಧ್ರಪ್ರದೇಶದ ರಾಜಮಂಡ್ರಿ ಹತ್ತಿರದ ಕಡಿಯಂನಿಂದ ತರಿಸಿದರು. ಆರಂಭದಲ್ಲಿ ಮಹಾತ್ಮಗಾಂಧಿ ವೃತ್ತದಿಂದ ಎಂ.ಕೆ.ಗೋಪಾಲ ವೃತ್ತದವರೆಗೆ ಆರಂಭವಾಗಿ ಅದೇ ವರ್ಷ ಇಡೀ ನಗರದ ತುಂಬೆಲ್ಲ ನಾಟಿ ಮಾಡಲಾಯಿತು. ಸಮಯಕ್ಕೆ ಸರಿಯಾಗಿ ಮೇಲುಗೊಬ್ಬರ, ನೀರು ನೀಡಿದ್ದರಿಂದ, ಸಕಾಲಕ್ಕೆ ಪ್ರೋನಿಂಗ್ ಮಾಡುವುದರಿಂದ ಸಸಿಗಳು ಆರೋಗ್ಯಕರವಾಗಿ ಬೆಳೆಯಲಾರಂಭಿಸಿದವು.

ಕುಷ್ಟಗಿ, ಗಂಗಾವತಿ, ರಾಯಚೂರು ರಸ್ತೆ ಸೇರಿದಂತೆ ದೇವಸ್ಥಾನ, ಚರ್ಚ್, ಮಸೀದಿ, ಶಾಲಾ, ಕಾಲೇಜು, ಅಗ್ನಿಶಾಮಕ, ತಹಶೀಲ್ದಾರ್ ಕಚೇರಿ, ಪೊಲೀಸ ಠಾಣೆ ಅಷ್ಟೇ ಏಕೆ ಸ್ಮಶಾನ... ಹೀಗೆ ಹಲವು ಕಡೆ 10 ಸಾವಿರ ಸಸಿಗಳು ಹಂತ ಹಂತವಾಗಿ ನಾಟಿಯಾದವು. ಇದಕ್ಕಾಗಿಯೇ ದೂರದಲ್ಲಿ ಜಾಗ ಖರೀದಿಸಿ ಅಲ್ಲಿ ಕೊಳವೆಬಾವಿ ಕೊರೆಯಿಸಿದರು. ಉತ್ತಮ ನೀರು ದೊರಕಿತು. ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿದರು.

ಪರಿಸರ ಕಾರ್ಯಕ್ಕೆ ಕೈಜೋಡಿಸಿರುವ ದುದ್ದುಪೂಡಿ ಕಾಲೇಜಿನ ಎನ್.ಎಸ್.ಎಸ್ ವಿದ್ಯಾರ್ಥಿಗಳು

ಈಗಲೂ ಪ್ರತಿ ದಿನ ರಾಮಬಾಬು, ಅವರ ಮಗ ವಿನಯ ಒಂದೊಂದು ರಸ್ತೆಗೆ ಹೋಗಿ ಗಿಡಗಳ ಯೋಗಕ್ಷೇಮ ನೋಡಿಕೊಂಡು ಬರುತ್ತಾರೆ. ಯಾವುದಾದರೂ ಸಸಿ ಹಾಳಾಗಿದ್ದರೆ ಕೂಡಲೇ ಆ ಸ್ಥಳದಲ್ಲೇ ನಾಟಿ ಮಾಡಲಾಗುತ್ತದೆ.

ಮಳಿಗೆ ವ್ಯಾಪಾರಿಗಳು, ಬೀದಿ ಬದಿಯ ವ್ಯಾಪಾರಿಗಳು ಗಿಡಗಳ ಮೇಲೆ ಈಗ ಪ್ರೀತಿಯನ್ನು ಬೆಳೆಸಿಕೊಂಡಿದ್ದಾರೆ. ಅವರಿಗೀಗ ಗಿಡಮರಗಳ ಮೇಲೆ ಎಷ್ಟೊಂದು ಕಾಳಜಿ ಬೆಳೆದಿದೆ ಎಂದರೆ, ಆರಂಭದಲ್ಲಿ ಗಿಡಗಳ ಕೊಂಬೆಗಳು ಮುರಿದರೆ ರಾಮಬಾಬು ಅವರಿಗೆ ಫೋನ್ ಮಾಡುತ್ತಿದ್ದರು. ಈಗ ತಾವೇ ಅದನ್ನೆಲ್ಲ ಸರಿಪಡಿಸಿ ಫೋಟೊ ಸಮೇತ ಮಾಹಿತಿ ನೀಡುತ್ತಾರೆ. 'ಜೆಸ್ಕಾಂನವರು ಗಿಡಮರಗಳ ಟೊಂಗೆಗಳನ್ನು ತೆಗೆಯಬೇಕಾದರೆ ನಮಗೆ ಫೋನ್ ಮಾಡುತ್ತಾರೆ. ನಾವೇ ಹೋಗಿ ಟೊಂಗೆಗಳನ್ನು ಕತ್ತರಿಸಿ, ನಂಜು ನಿರೋಧಕ ಔಷಧಿ ಸಿಂಪಡಿಸುತ್ತೇವೆ' ಎಂದು ರಾಮಬಾಬು ಅವರ ಮಗ ವಿನಯ ಚಿಟ್ಟೂರಿ ಮಾಹಿತಿ ನೀಡಿದರು.

ಈ ಮೊದಲು ನೆರಳಿಗಾಗಿ ಛತ್ರಿ ಬಳಸುತ್ತಿದ್ದ ವ್ಯಾಪಾರಸ್ಥರು ಈಗ ತಣ್ಣಗೆ ನೆರಳಡಿ ಕುಳಿತುಕೊಳ್ಳುತ್ತಾರೆ. ಕಾರ್ಮಿಕರು ನೆರಳಿನಲ್ಲಿ ವಿಶ್ರಾಂತಿ ಪಡೆಯುತ್ತಾರೆ. ವಾಹನಗಳು ನೆರಳಿನಡಿ ನಿಲ್ಲುತ್ತವೆ. 'ಪ್ರತಿ ಗಿಡಗಳಿಗೆ ನೀರಿನ ತತ್ರಾಣಿಗಳನ್ನು ಹಾಕಿದರೆ ಹಕ್ಕಿಪಕ್ಷಿಗಳಿಗೆ ನೀರಿನ ದಾಹ ಹಿಂಗಿಸಿದಂತಾಗುತ್ತದೆ. ಅದೊಂದು ಮಾತ್ರ ಬಾಕಿ ಇದೆ ನೋಡ್ರಿ' ಎಂದು ಪರಿಸರ ಪ್ರೇಮಿಗಳಾದ ರಾಜೇಂದ್ರ ಹಂಪಿಕರ ಹಾಗೂ ಆನಂದ ಹೇಳಿದಾಗ, ರಾಮಬಾಬು ಅವರು 'ಮುಂದಿನ ದಿನ ಆ ಕೆಲಸವನ್ನೂ ಮಾಡೋಣ ಬಿಡಿ' ಎಂದರು.

ಕೆಲವೊಂದು ರಸ್ತೆಗಳಲ್ಲಿ 8-10 ವರ್ಷಗಳ ಹಿಂದೆ ನಾಟಿ ಮಾಡಿದ ಸಸಿಗಳು ಈಗ ದೊಡ್ಡ ಮರಗಳಾಗಿ ಬೆಳೆದು ಒಂದಕ್ಕೊಂದು ಪೋಣಿಸಿಕೊಂಡು ರಸ್ತೆ ಗುಂಟ ನೆರಳಿನ ಹಂದರ ಹೆಣೆದಿವೆ. ರಾಮಬಾಬು ಅವರು ಈ ಎಲ್ಲ ಸಸಿಗಳನ್ನು ತಮ್ಮ ಮಕ್ಕಳಂತೆ ಬೆಳೆಸುತ್ತಿದ್ದಾರೆ. ಖಾಲಿ ಜಾಗದಲ್ಲೆಲ್ಲಾ ಸಸಿಗಳನ್ನು ನಾಟಿ ಮಾಡಲು ರಾಮಬಾಬು ಅವರಿಗೆ ಪೂರ್ಣ ಸಹಕಾರ ನೀಡಿದವರು ದುದ್ದೂಪೂಡಿ ಕಾಲೇಜಿನ ಕಾರ್ಯದರ್ಶಿ ಆರ್.ಸಿ.ಪಾಟೀಲ, ಆ ಕಾಲೇಜಿನ ಎನ್ನೆಸ್ಸೆಸ್ ವಿದ್ಯಾರ್ಥಿಗಳು.

'ನಮ್ಮ ವಿದ್ಯಾರ್ಥಿಗಳು ಎಷ್ಟು ಕೆಲಸ ಮಾಡುತ್ತಾರೆ ಎಂಬುದಕ್ಕಿಂತ ಅವರಲ್ಲಿ ಪರಿಸರ ಪ್ರಜ್ಞೆ ಬೆಳೆಯುತ್ತಿದೆಯಲ್ಲ, ಅದೇ ನಮಗೆ ಖುಷಿ ತಂದಿದೆ' ಎಂದು ಆರ್.ಸಿ.ಪಾಟೀಲ ಅಭಿಮಾನ ವ್ಯಕ್ತಪಡಿಸುತ್ತಾರೆ. ಈ ಎಲ್ಲ ಕಾರಣಗಳಿಂದ ನೆಟ್ಟ ಸಸಿಗಳೆಲ್ಲ ಈಗ ಯಾರೂ ನೀರು, ಗೊಬ್ಬರ ಹಾಕಬೇಕಾಗಿಲ್ಲ, ಬೆಳೆಯುತ್ತಿವೆ.

ಸುತ್ತಮುತ್ತಲಿನ ಹಳ್ಳಿಗರು ಅವಕಾಶ ನೀಡಿದರೆ ನೆರಳಿನ ಮರ ಸೇರಿದಂತೆ ಹಣ್ಣಿನ ಮರಗಳನ್ನು ಬೆಳೆಸುವ ವಿಚಾರವಿದೆ ಎಂದು ರಾಮಬಾಬು ಹೇಳುತ್ತಾರೆ. ಹೆಚ್ಚಿನ ಮಾಹಿತಿಗೆ 9845404599 ಇಲ್ಲಿಗೆ ಸಂಪರ್ಕಿಸಬಹುದು.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಸೊಗಂಬರಿ

ಸೊಗಂಬರಿ (ಕ್ರಿ). ಸಂತೋಷದಿಂದ ಸಾಗು, ಮುನ್ನಡೆ.

ರಾಮಚಂದ್ರನು ಕಾಡಿಗೆ ಸೀತೆಯನ್ನು ಕರೆದುಕೊಂಡು ಹೋಗಲು ಒಪ್ಪಿ, ಅನುವಾಗು ಎಂದು ಹೇಳುವನು. ಆಗ ಅವಳು ಸಂತೋಷದಿಂದ ಮುನ್ನಡೆಯುವುದನ್ನು 'ಸೊಗಂಬರಿ' ಪದದಿಂದ ಹೀಗೆ ಚಿತ್ರಿಸಿದ್ದಾರೆ:

'ಆಕೆ
ಪೆರ್ಚುತೆ ಸೊಗಂಬರಿದು ತಮ್ಮಿರ್ವರನಿತುಮಂ
ಕರೆಕರೆದು ಪಸುಗೆ ತೊಡಗಿದಳಮಿತ
ಸಂಭ್ರಮದಿ!"

ಧರ್ಮವರ್ಮ

ಧರ್ಮವರ್ಮ (ನಾ). ಧರ್ಮದ ಉಕ್ಕಿನ ಕವಚ

ಮಾರೀಚ ಮುನಿಯು ಲಂಕೇಶ್ವರ ರಾವಣನಿಗೆ ತನ್ನ ತಪದ ವ್ರತಕ್ಕೆ ಕಾರಣ ತಿಳಿಸುವ ಸಂದರ್ಭದಲ್ಲಿ ಕುವೆಂಪು ಅವರು ರಾಮನ ವ್ಯಕ್ತಿತ್ವವನ್ನು 'ಧರ್ಮವರ್ಮ' ಪದದಿಂದ ಹೀಗೆ ರೇಖಿಸಿದ್ದಾರೆ:

'ಧರ್ಮವರ್ಮವೆ ರಕ್ಷೆಯಾದಾತನಂ
ಧರ್ಮದಿಂದಲೆ ಜಯಿಸವೇಳ್ಕುಮೆಂದಾನಿಂತು
ತಪಕೆ ನೋಂತೆಂ...'

ಚೆಲುವಿನಲಗು

ಅರ್ಜುನನನ್ನು ತನ್ನ ಹೆಣ್ತನದ ಸೌಂದರ್ಯದಿಂದ ಆಕರ್ಷಿಸಲು ಚಿತ್ರಾಂಗದೆಯು ಶೃಂಗಾರಗೊಳ್ಳುತ್ತಾಳೆ. ತನ್ನ ಅಂದ ಚಂದವನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತ 'ಶ್ರೀಮಂತ ಹೆಣ್ಣಿಗೆ ಇನಿಯನನ್ನು ಜಯಿಸಲು ಚೆಲುವೆಂಬ ಕತ್ತಿಯೊಂದಿರಲು ಬೇರೆ ಚೂಪಾದ ಬಾಣವೇಕೆ?' ಎಂದುಕೊಳ್ಳುತಾಳೆ. ಕುವೆಂಪು ಅವರು ಆ ಸಂದರ್ಭಕ್ಕೆ ರೂಪಿಸಿ ಪ್ರಯೋಗಿಸಿರುವ ರೂಪಕ ಪದ 'ಚೆಲುವಿನಲಗು'.

'ಸಿರಿವೆಣ್ಣಿಗಿನಿಯನ ಜಯಿಸೆ
ಚೆಲುವಿನಲಗೊಂದಿರಲ್ ಬೇರೆ ಕೂರಂಬೇಕೆ?

ಚಿಲಿಕಾ ಸರೋವರ ಡಾಲ್ಫಿನ್‌ಗಳ ಹುಡುಕಾಟ...

ಪ್ರವಾಸ

ಪ್ರಕಾಶ್ ಕೆ. ನಾಡಿಗ್

ಒಡಿಶಾ ರಾಜ್ಯದಲ್ಲಿರುವ ಪ್ರವಾಸಿ ತಾಣಗಳು ಒಂದಕ್ಕಿಂತ ಒಂದು ಆಕರ್ಷಕವಾಗಿದ್ದು ಅವು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಅದರಲ್ಲೂ ಹೆಚ್ಚಿಗೆ ಪ್ರವಾಸಿಗರು ಭೇಟಿ ಕೊಡುವ ತಾಣವೇ ಚಿಲಿಕಾ ಸರೋವರ. ಇಲ್ಲಿರುವ ವಿಶೇಷ ರೀತಿಯ ಡಾಲ್ಫಿನ್‌ಗಳನ್ನು ನೋಡಲೆಂದೇ ದಿನವೂ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಮುಕ್ಕಾಲು ದಿನ ಚಿಲಿಕಾ ಸರೋವರದಲ್ಲೇ ಕಳೆದುಹೋಗುತ್ತದೆ.

ಪುರಿಯಿಂದ ಸುಮಾರು ಒಂದೂವರೆ ತಾಸು ಪ್ರಯಾಣ ಮಾಡಿ 50 ಕಿಲೋಮೀಟರ್ ದೂರದಲ್ಲಿರುವ ಸತ್ಪಾದ ಎಂಬ ಊರನ್ನು ತಲುಪಿದರೆ, ವಿಶ್ವ ಪಾರಂಪರಿಕ ತಾಣದ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಚಿಲಿಕಾ ಸರೋವರದ ದಡದಲ್ಲಿ ಇರುತ್ತೇವೆ. ಚಿಲಿಕಾ ಸರೋವರ ಏಷ್ಯಾದ ಅತಿ ದೊಡ್ಡ ಉಪ್ಪು ನೀರಿನ ಸರೋವರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪೇರಳೆ ಹಣ್ಣಿನ ಆಕಾರದಲ್ಲಿರುವ ಈ ಸರೋವರ 64 ಕಿಲೋಮೀಟರ್ ಉದ್ದ ಹಾಗೂ 5 ರಿಂದ 18 ಕಿಲೋಮೀಟರ್ ಅಗಲ ಹಾಗೂ ಸುಮಾರು 18 ಅಡಿ ಆಳವಿದ್ದು, ಪ್ರವಾಸಿಗರ ನೆಚ್ಚಿನ ತಾಣವಾಗಿದೆ.

ಈ ಸರೋವರದಲ್ಲಿ ಹಲವಾರು ದ್ವೀಪ ಪ್ರದೇಶಗಳಿದ್ದು, ಚಳಿಗಾಲದಲ್ಲಿ ವಿವಿಧ ಪ್ರಭೇದದ ಪಕ್ಷಿಗಳಿಗೆ ಆಶ್ರಯತಾಣವಾಗಿದೆ. ಈ ಸರೋವರದ ಸುತ್ತಮುತ್ತ ಸುಮಾರು 150 ವಿವಿಧ ರೀತಿಯ ಪಕ್ಷಿಗಳನ್ನು ನೋಡಬಹುದು. ಸರೋವರದ ಸುತ್ತ ಸುಮಾರು 800 ಪ್ರಭೇದದ ಜೀವಸಂಕುಲಗಳು ವಾಸವಾಗಿವೆ. ದಯಾ ಹಾಗೂ ಭಾರ್ಗವಿ ನದಿಗಳು ಬಂಗಾಳ ಕೊಲ್ಲಿಯನ್ನು ಸೇರುವ ಮುಂಚೆ ಮಳೆಗಾಲದಲ್ಲಿ ಈ ಸರೋವರಕ್ಕೆ ನೀರುಣಿಸುತ್ತವೆ. ಸತ್ಪಾದ ಊರನ್ನು ಪ್ರವೇಶಿಸುತ್ತಿದ್ದಂತೆ ಹಲವು ರೀತಿಯ ಬಾತುಕೋಳಿಗಳು ಸರೋವರಕ್ಕೆ ಸ್ವಾಗತಿಸುತ್ತವೆ. ಪ್ರವಾಸಿಗರು ಪಕ್ಷಿ ಪ್ರಿಯರಾಗಿದ್ದರೆ ಇದು ಪಕ್ಷಿ ವೀಕ್ಷಣೆಗೆ ಹೇಳಿಮಾಡಿಸಿದ ತಾಣ. ಹಲವು ಹಕ್ಕಿಗಳ ಕಲರವ ಸಮ್ಮೋಹನಗೊಳಿಸುತ್ತದೆ.

ಈ ಸರೋವರದಲ್ಲಿ ಸುಮಾರು 150 ಪ್ರಭೇದದ ಪಕ್ಷಿಗಳು, 87 ಪ್ರಭೇದದ ಮೀನುಗಳು, 9 ರೀತಿಯ ಏಡಿಗಳು, 53 ಪ್ರಭೇದದ ಪಾಚಿ ಸಸ್ಯಗಳು ಇವೆ.

ಚಿಲಿಕಾ ಸರೋವರದಲ್ಲಿ ಸೂರ್ಯಾಸ್ತದ ವಿಹಂಗಮ ನೋಟ

ಸರೋವರದಲ್ಲಿ ಕಂಡ ಡಾಲ್ಫಿನ್

ಸರೋವರದ ತೀರದಲ್ಲಿ ಪಕ್ಷಿಗಳ ಕಲರವ

ಡಾಲ್ಫಿನ್‌ಗಳು ಪ್ರಮುಖ ಆಕರ್ಷಣೆ

ಈ ಸರೋವರದ ಇನ್ನೊಂದು ಪ್ರಮುಖ ಆಕರ್ಷಣೆ ಇಲ್ಲಿರುವ ಡಾಲ್ಫಿನ್‌ಗಳು. ಈ ಡಾಲ್ಫಿನ್‌ಗಳನ್ನು ನೋಡಲೆಂದೇ ಇಲ್ಲಿಗೆ ಪ್ರವಾಸಿಗರ ದಂಡು ಬರುತ್ತದೆ. ಈ ಡಾಲ್ಫಿನ್‌ಗಳನ್ನು ನೋಡಲು ಬೋಟ್ ಬಾಡಿಗೆಗೆ ಪಡೆದು ಸರೋವರದಲ್ಲಿ ಹಲವಾರು ಕಿಲೋಮೀಟರ್ ಸಾಗಬೇಕು. ಚಿಲಿಕಾ ಸರೋವರದಲ್ಲಿರುವ 'ಇರಾವಾಡಿ' ಎಂಬ ಪ್ರಭೇದದ ಮೊಂಡು ಮೂತಿಯ ವಿಶೇಷ ಡಾಲ್ಫಿನ್‌ಗಳನ್ನು ನೋಡಲೆಂದೇ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ.

ಬೇರೆ ಡಾಲ್ಫಿನ್‌ಗಳಿಗೆ ಹೋಲಿಸಿದರೆ ಇಲ್ಲಿರುವ ಡಾಲ್ಫಿನ್‌ಗಳ ಬಣ್ಣ ಹಾಗೂ ಆಕಾರ ಬೇರೆಯಾಗಿದೆ. ಬೂದು ತಿಳಿ ನೀಲಿ ಬಣ್ಣದಿಂದ ಕೂಡಿರುವ ಈ ಡಾಲ್ಫಿನ್‌ಗಳು 7-8 ಅಡಿ ಉದ್ದವಿದ್ದು ಪೂರ್ತಿ ಬೆಳೆದಾಗ ಸುಮಾರು 200 ಕೆ.ಜಿ.ಯಷ್ಟು ತೂಗುತ್ತವೆ. ಬೇರೆ ಡಾಲ್ಫಿನ್‌ಗಳ ಮೂತಿ ಉದ್ದವಾಗಿದ್ದರೆ, ಇವುಗಳದ್ದು ಮೊಂಡಾಗಿದ್ದು ನೋಡಲು ವಿಶೇಷವಾಗಿರುತ್ತವೆ.

ಗುಂಪು ಗುಂಪಾಗಿ ವಾಸಿಸುವ ಇವು ನಾಚಿಕೆ ಸ್ವಭಾವದ್ದಾಗಿವೆ. ಆಗಾಗ ನೀರಿನಿಂದ ಮೇಲೆ ಬಂದು ಮುಳುಗು ಹಾಕುತ್ತಿರುತ್ತವೆ.

ಒಡಿಶಾ ಹತ್ತು ಹಲವು ವೈವಿಧ್ಯಮಯ ಪ್ರವಾಸಿ ತಾಣಗಳನ್ನು ಹೊಂದಿದೆ. ಇಲ್ಲಿನ ಚಿಲಿಕಾ ಸರೋವರ ಅತೀ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಅದ್ಭುತ ತಾಣ. ಇಲ್ಲಿನ ಪ್ರಮುಖ ಆಕರ್ಷಣೆ ಮೊಂಡು ಮೂತಿಯ ಡಾಲ್ಫಿನ್‌ಗಳು. ಇವುಗಳ ಚಿನ್ನಾಟವನ್ನು ಒಮ್ಮೆ ನೋಡಿದರೆ ಮರೆಯಲು ಸಾಧ್ಯವೇ ಇಲ್ಲ!

ಇತ್ತೀಚೆಗೆ ಇಲ್ಲಿ ಪ್ರವಾಸಿಗರು ಅಧಿಕವಾಗಿರುವ ಕಾರಣ ಇಲ್ಲಿಗೆ ಬರುವ ದೋಣಿಗಳ ಸಂಖ್ಯೆಯೂ ಹೆಚ್ಚಾಗಿದೆ. ಮೋಟರ್ ಬೋಟ್ ಮಾಡುವ ಶಬ್ದದಿಂದ ಇವುಗಳು ಕಣ್ಣಿಗೆ ಕಾಣುವುದೇ ಅಪರೂಪ. ಬೋಟ್ ಓಡಿಸುವವರಿಗೆ ಇವು ಎಲ್ಲಿ ಹೆಚ್ಚಾಗಿ ಕಾಣುತ್ತವೆ ಎಂದು ಗೊತ್ತಿರುತ್ತದೆ. ಹಾಗಾಗಿ ಅಲ್ಲಿ ಎಲ್ಲಾ ಬೋಟ್‌ಗಳು ತಲುಪಿ ಶಬ್ದ ಮಾಡದೇ ಸ್ವಲ್ಪ ಹೊತ್ತು ನಿಲ್ಲುತ್ತವೆ. ಆಗ ಗುಂಪು ಗುಂಪಾಗಿ ನೀರಿನಿಂದ ಮೇಲೆದ್ದು ಜಿಗಿಯುವ ಡಾಲ್ಫಿನ್‌ಗಳನ್ನು ಕಣ್ತುಂಬಿಕೊಳ್ಳಬಹುದು.

ಬೋಟ್ ಪ್ರಯಾಣ ಮಾಡುವಾಗ ಸರೋವರದಲ್ಲಿರುವ ಹಲವಾರು ದ್ವೀಪಗಳಿಗೂ ಕರೆದುಕೊಂಡು ಹೋಗುತ್ತಾರೆ.ಇಲ್ಲಿ ಕೆಂಪು ಬಣ್ಣದ ಏಡಿಗಳ ದರ್ಶನವೂ ಆಗುತ್ತದೆ.
ಕೆಲವು ದ್ವೀಪಗಳಲ್ಲಿ ಇರುವ ಸ್ವಚ್ಛ ಸುಂದರ ಸರೋವರದ ತೀರದಲ್ಲಿ ಕುಳಿತು ವಿರಮಿಸಬಹುದು. ಬೋಟ್ ಪ್ರಯಾಣ ಮಾಡುವಾಗ ಹಲವಾರು ರೀತಿಯ ಹಕ್ಕಿಗಳು ಬೋಟ್‌ಗಳನ್ನು ಹಿಂಬಾಲಿಸುವುದು, ಅವುಗಳ ಮೇಲೆ ಕೂರುವುದು ಮಾಡುತ್ತವೆ. ಪ್ರವಾಸಿಗರು ಆಹಾರ ಕೊಟ್ಟು ಅಭ್ಯಾಸವಾಗಿರುವುದರಿಂದ ಅವು ಹೀಗೆ ಮಾಡುತ್ತವೆ.

ಬೋಟ್ ಪ್ರಯಾಣದಲ್ಲಿ ಹಲವು ರೀತಿಯ ಪಕ್ಷಿಗಳ ದರ್ಶನವೂ ಆಯಿತು. ಈ ಚಿಲಿಕಾ ಸರೋವರವನ್ನು ಸುತ್ತಲು ಏನಿಲ್ಲವೆಂದರೂ ಮೂರು ಗಂಟೆಗಳು ಬೇಕು. ಇಲ್ಲಿರುವ ನಲ್‌ಬಾನ ಎಂಬ ದ್ವೀಪದಲ್ಲಿ ಪಕ್ಷಿಧಾಮವಿದ್ದು ಸಾವಿರಾರು ಪಕ್ಷಿಗಳು ಬೇರೆ ಬೇರೆ ದೇಶಗಳಿಂದ ಇಲ್ಲಿಗೆ ವಲಸೆ ಬರುತ್ತವೆ. ನವೆಂಬರ್‌ನಿಂದ ಫೆಬ್ರುವರಿಯವರೆಗೆ ಇಲ್ಲಿ ಪಕ್ಷಿಗಳನ್ನು ನೋಡಬಹುದು. ಇಲ್ಲಿರುವ ಮೀನುಗಾರರು ಕಣ್ಣೆದುರಿಗೆ ಕಪ್ಪೆ ಚಿಪ್ಪನ್ನು ಒಡೆದು ಒಳಗಿರುವ ಮುತ್ತನ್ನು ತೆಗೆದು ತೋರಿಸುತ್ತಾರೆ. ಒಟ್ಟಿನಲ್ಲಿ ಚಿಲಿಕಾ ಸರೋವರದ ಸುತ್ತಮುತ್ತಲ ಪರಿಸರ ಕಣ್ಮನ ಸೆಳೆಯುತ್ತದೆಯಲ್ಲದೇ, ಮನಸ್ಸಿಗೆ ಮುದ ನೀಡುತ್ತದೆ. ಚಿಲಿಕಾ ಸರೋವರ ಪರಿಸರ ಪ್ರವಾಸೋದ್ಯಮಕ್ಕೆ ಹೇಳಿ ಮಾಡಿಸಿದ ತಾಣವಾಗಿದೆ.

ಸಮೀಕ್ಷೆಯೂ, ಪರಿಹಾರವೂ...

10ನೇ ಪುಟದಿಂದ...

ಎಲ್ಲವನ್ನೂ ಮಾಡುವ ಭರವಸೆಯನ್ನು ಗ್ರಾಮ ಪಂಚಾಯಿತಿ ನೀಡಿದೆ' ಎನ್ನುವಾಗ ಮೇಘನಾ ಮಾತಿನಲ್ಲಿ ಯಾವುದೇ ಅಳುಕು ಕಾಣಲಿಲ್ಲ.

ಸಾಮಾನ್ಯವಾಗಿ ಗ್ರಾಮ ಸಭೆಗಳೆಂದರೆ ಅಧಿಕಾರಿಗಳು, ಜನಪ್ರತಿನಿಧಿಗಳು, ಹಿರಿಯರದ್ದೇ ಪಾರಮ್ಯ. ಅಂಥ ವೇದಿಕೆಯ ಮುಂದೆ ಮಕ್ಕಳೇ ತುಂಬಿದ್ದರೆ?! ಅವರೂ ಹಲವು ಸಮಸ್ಯೆಗಳನ್ನು ಮುಂದಿಟ್ಟರೆ? ಹೌದು, ಇಂತಹ ದೃಶ್ಯಗಳು ಕಂಡುಬಂದಿದ್ದು ಆನೇಕಲ್ ತಾಲ್ಲೂಕಿನ ಬಿಲ್ವರ್ಧನಹಳ್ಳಿ ಹಾಗೂ ಶಾಂತಿಪುರ ಹಾಗೂ ರಾಯಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ.

ಎಷ್ಟೋ ವರ್ಷಗಳ ಹಿಂದೆ ಪ್ರತಿ ಶಾಲೆಗಳಲ್ಲಿ ಈ ರೀತಿ ಮಕ್ಕಳ ಗ್ರಾಮ ಸಭೆ ನಡೆಸಬೇಕು ಎಂಬ ಸುತ್ತೋಲೆ ಸರ್ಕಾರದಿಂದ ಹೊರಬಿದ್ದಿದೆ. ಆದರೆ ಇದು ಕೆಲವೆಡೆಯಷ್ಟೇ ಕಾರ್ಯರೂಪಕ್ಕೆ ಬರುತ್ತಿದೆ. ಇಂಥ ಸಭೆಗಳಲ್ಲಿ ಮಕ್ಕಳ ಮಾತುಗಳು ಕೃತಕವಾಗಿ ಭಾಷಣದಂತೆ ಇರುವುದನ್ನು 'ಇನ್ವಾಲ್ವ್' ಎಂಬ ಸರ್ಕಾರೇತರ ಸಂಸ್ಥೆ ಗಮನಿಸಿತು. ಇದಕ್ಕೆ ಚುರುಕು ಮುಟ್ಟಿಸಲು 'ಹಾಲಿಡೇ ಪ್ರಾಜೆಕ್ಟ್' ಎಂಬ ಯೋಜನೆಯನ್ನು ಈ ಸಂಸ್ಥೆ ಪ್ರಾರಂಭಿಸಿತು.

ಏನಿದು 'ಹಾಲಿಡೇ ಪ್ರಾಜೆಕ್ಟ್'?

'ವ್ಯವಸ್ಥೆಯೊಳಗೆ, ಸಮಾಜದಲ್ಲಿ ಮಕ್ಕಳ ಸಕ್ರಿಯ ಪಾಲ್ಗೊಳ್ಳುವಿಕೆಗಾಗಿ 'ಮಕ್ಕಳ ಗ್ರಾಮಸಭೆ' ಪ್ರಾರಂಭಿಸಲಾಗಿತ್ತು' ಎನ್ನುವ 'ಇನ್ವಾಲ್ವ್'ನ ಸಹ ಸಂಸ್ಥಾಪಕಿ ಪ್ರತಿಭಾ ನಾರಾಯಣ್, 'ಈ ಸಭೆಗಳು ಕೆಲವು ಶಾಲೆಗಳಲ್ಲಷ್ಟೇ ನಡೆಯುತ್ತಿರುವುದನ್ನು ಗಮನಿಸಿದೆವು. ಸಭೆಗಳಲ್ಲಿ ಮಕ್ಕಳ ಮಾತು ಭಾಷಣದಂತಿತ್ತು. ಹೀಗಾಗಿ ದಸರಾ ರಜೆಯಲ್ಲಿ ನಾವು ಮಕ್ಕಳ ಕೈಯಲ್ಲೇ ಒಂದು ಕಮ್ಯೂನಿಟಿ ಪ್ರಾಜೆಕ್ಟ್ ಮಾಡಿಸಿದ್ದೆವು. ಇದು ಸಮೀಕ್ಷೆಯ ಮಾದರಿಯಲ್ಲಿತ್ತು. ಈ ಪ್ರಾಜೆಕ್ಟ್ ಪೂರ್ಣಗೊಳಿಸಿ ಮಕ್ಕಳು ವರದಿಯನ್ನೂ ತಯಾರಿಸಿದ್ದರು. ಮಕ್ಕಳ ಗ್ರಾಮಸಭೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಬಳಿ ವಿಸ್ತೃತವಾದ, ಅಂಕಿ-ಅಂಶ ಸಹಿತವಾದ ವಿಷಯಗಳಿದ್ದವು. ನನ್ನ ಸುತ್ತಮುತ್ತ ಇಂತಹ ಸಮಸ್ಯೆಗಳು ಇವೆ, ಅದಕ್ಕೆ ಇವುಗಳೇ ಸಾಕ್ಷಿ ಎಂದು ನಿರ್ದಿಷ್ಟವಾಗಿ ಅವರು ಉಲ್ಲೇಖಿಸಿದ್ದರು. ಜೊತೆಗೆ ತಾವು ಉಲ್ಲೇಖಿಸಿದ ಸಮಸ್ಯೆಗಳನ್ನು ಪರಿಹರಿಸಲು ಅವರೇ ಸಲಹೆಗಳನ್ನೂ ನೀಡಿದರು. ಇದು ಅವರ ಅನುಭವದ ಮಾತುಗಳಾಗಿದ್ದವು' ಎಂದರು.

ಇದಕ್ಕೆ ಪೂರಕವಾಗಿ ರಾಯಸಂದ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಜನನಿ ಮಾತಿತ್ತು. 'ನಮ್ಮ ಕೈಯಲ್ಲಿ ಹಾಲಿಡೇ ಪ್ರಾಜೆಕ್ಟ್ ಮಾಡಿಸಿದಾಗ, ಶಾಲೆಯ ಮುಂಭಾಗದ ರಸ್ತೆಗೆ ಉಬ್ಬು (ಹಂಪ್ಸ್) ಹಾಕಿಸಬೇಕು

ಎಂದು ಹಲವರು ಹೇಳಿದರು. ಜೊತೆಯಲ್ಲಿ ರಸ್ತೆ ಕೆಟ್ಟು ಹೋಗಿದೆ, ಮಳೆ ಬಂದಾಗ ತರಗತಿಯೊಳಗಿರುವ ಬೋರ್ಡ್‌ನಲ್ಲಿ ಬರೆದಿದ್ದೇ ಕಾಣಿಸುವುದಿಲ್ಲ ಮುಂತಾದ ಸಮಸ್ಯೆ ಹೇಳಿದೆವು. ಕೆಲವು ತಿಂಗಳಲ್ಲಿ ರಸ್ತೆಗೆ ಡಾಂಬರು ಹಾಕಿದರು. ಶಾಲೆ ಸಮೀಪ ಬೆಳಕಿನ ವ್ಯವಸ್ಥೆಯನ್ನೂ ಮಾಡಿದರು' ಎಂದು ಜನನಿ ಖುಷಿಯಿಂದ ಹೇಳಿದಳು.

'ಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ವಿದ್ಯಾರ್ಥಿಗಳ ಸಲಹೆಗಳು ಎಷ್ಟು ಮುಖ್ಯ ಎನ್ನುವುದನ್ನು ತೋರಿಸಲು ಇಂತಹ ಸಭೆಗಳು ಮಹತ್ವದ್ದು. ಮಕ್ಕಳಿಗೆ ಮಾತನಾಡಲು ಹಲವು ವೇದಿಕೆಗಳಿವೆ. ಆದರೆ ಅವರ ಮಾತುಗಳನ್ನು ಕೇಳಿಸಿಕೊಂಡು ಅದಕ್ಕೆ ಸೂಕ್ತವಾದ ಉತ್ತರ, ಪರಿಹಾರವನ್ನು ನೀಡುವವರ ಸಂಖ್ಯೆ ವಿರಳ. ವಿದ್ಯಾರ್ಥಿಗಳಿಗೆ ಮಾತನಾಡಲು ಆತ್ಮವಿಶ್ವಾಸ, ಧೈರ್ಯವನ್ನು ಈ ಸಭೆಗಳು ತುಂಬಿವೆ. ಸಮುದಾಯದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಿಗೆ ತಮ್ಮ ಕೊಡುಗೆಯನ್ನೂ ನೀಡಬಹುದು ಎಂಬ ಖುಷಿ ಅವರಲ್ಲಿತ್ತು. ಒಬ್ಬರ ಧೈರ್ಯ ಮತ್ತೊಬ್ಬರಿಗೆ ಸ್ಫೂರ್ತಿಯಾಗಿದೆ. ವಿದ್ಯಾರ್ಥಿಗಳ ಸಲಹೆ, ಮಾತುಗಳಿಂದ ಏನು ಪ್ರಯೋಜನ ಎಂಬ ಗ್ರಾಮ ಪಂಚಾಯಿತಿ ಅಧಿಕಾರಿಗಳು, ಜನಪ್ರತಿನಿಧಿಗಳ ಮನಃಸ್ಥಿತಿಯೂ ಈ ಸಭೆಗಳ ಬಳಿಕ ಬದಲಾಗಿದೆ. ವಿದ್ಯಾರ್ಥಿಗಳಲ್ಲಿರುವ ಭಿನ್ನ ದೃಷ್ಟಿಕೋನಗಳು ಅವರನ್ನು ಆಶ್ಚರ್ಯಕ್ಕೆ ದೂಡಿದೆ' ಎಂದು ಪ್ರತಿಭಾ ವಿವರಣೆ ನೀಡಿದರು.

ಇಂತಹ ಮಕ್ಕಳ ಗ್ರಾಮಸಭೆಯನ್ನು ರಾಜ್ಯದಾದ್ಯಂತ ನಡೆಸಲು ಇನ್ವಾಲ್ವ್ ಯೋಜನೆ ಹಾಕಿಕೊಂಡಿದೆ. ಮಕ್ಕಳಿಗೂ ಹತ್ತಾರು ಜನರ ಎದುರು ಎದ್ದುನಿಂತು ಮಾತನಾಡುವ ಆತ್ಮವಿಶ್ವಾಸವನ್ನು ತುಂಬುವ ಈ ಯೋಜನೆ ಇತರರಿಗೂ ಸ್ಫೂರ್ತಿಯಾಗಲಿ.

• ಎಂ.ಎಸ್.ಪೂಜಾರ

ಡಬ್ಬ ಚಿಕ್ಕು ಕೇಳ್ರಪ್ಪ ಕಥೆಯ — ತಾನ್ಯಾರಿಗೆ ಕಮ್ಮಿ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



